ಗೃಹ ಸರಸ್ವತೀ ಗ್ರಂಥಮಾಲೆ

೧೨

ನಗರ ಯೋಜನೆ

ಕೆ. ಎಸ್. ರಾಮೇಗೌಡ

ಗೃಹಸರಸ್ವತೀ ಗ್ರಂಥಮಾಲೆ-೧೩

ನಗರ ಯೋಜನೆ

ಕೆ. ಎಸ್. ರಾಮೇಗೌಡ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೭೨

NAGARA YOJANE by K.S.Rame Gowda; first Published by the Director, Prasaranga, University of Mysore, Manasagangotri, Mysore-6, 1972; Cr. octavo xx + 108 Price : Ordinary Rs. 3-00 and Special Rs. 5-00.

ಮೊದಲನೆಯ ಮುದ್ರಣ : ೧೯೭೨

ಬೆಲೆ : ಸಾಧಾರಣ ಪ್ರತಿ : ೩-೦೦
ಉತ್ತಮ ಪ್ರತಿ : ೫-೦೦

ಪ್ರಕಾಶಕರು : ಡೈರೆಕ್ಟರ್, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬
ಮುದ್ರಕರು : ಶ್ರೀ ಸದ್ಗುರು ಪ್ರಿಂಟರ್ಸ್, ರಾಮಾನುಜ ರಸ್ತೆ, ಮೈಸೂರು-೪

ಅರ್ಪಣೆ

ನನ್ನ ವಿದ್ಯೆ ಮತ್ತು ಶ್ರೇಯಸ್ಸಿಗಾಗಿ
ದುಡಿದು ನಮ್ಮನ್ನಗಲಿದ ನನ್ನ
ಪೂಜ್ಯ ತಂದೆಯವರಿಗೆ
ಭಕ್ತಿಯಿಂದ

ಗೃಹಸರಸ್ವತೀ ಗ್ರಂಥಮಾಲೆಯನ್ನು ಕುರಿತು ....

"ಪ್ರೌಢಶಿಕ್ಷಣದ ಗುರಿಗಳೇ ಬೇರೆ, ಜನಪ್ರಿಯ ಶಿಕ್ಷಣದ ಗುರಿಗಳೇ ಬೇರೆ; ಒಂದರ ಉದ್ದೇಶ ಜ್ಞಾನವನ್ನು ಬೆಳೆಸುವುದು, ಇನ್ನೊಂದರದು ಅದನ್ನು ಹರಡುವುದು ಮತ್ತು ಈಗಾಗಲೇ ತಿಳಿದುಬಂದಿರುವ ವಿಷಯಗಳಲ್ಲಿ ಜನರ ಆಸಕ್ತಿಯನ್ನು ಹೆಚ್ಚಿಸುವುದು" ಎಂದು ಲಾರ್ಡ್ ಮಾರ್ಲೇ 'ಸಾರ್ವಜನಿಕ ಸಂಸ್ಕೃತಿ' ಎಂಬ ತನ್ನ ಪ್ರಬಂಧವೊಂದರಲ್ಲಿ ಹೇಳಿದ್ದಾನೆ. ಇಂದಿನ ವಿಶ್ವವಿದ್ಯಾನಿಲಯಗಳ ಹೊಣೆಗಾರಿಕೆಗಳಲ್ಲಿ—ಅದರಲ್ಲೂ ನಮ್ಮಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ—ಎರಡನೆಯ ಉದ್ದೇಶ ಮೊದಲಿನದರಷ್ಟೇ ಮಹತ್ವವನ್ನು ಪಡೆಯಬೇಕು. ಅಜ್ಞಾನ ತುಂಬಿಕೊಂಡಿರುವ ಸಮಾಜ ಸುತ್ತುವರಿದಿರುವ ಯಾವುದೇ ವಿಶ್ವವಿದ್ಯಾನಿಲಯ ಕಲಿಕೆಯ ಕೇಂದ್ರವಾಗಿ ಊರ್ಜಿತವಾಗಲಾರದು. ಒಂದು ಕಡೆ ಅದು ಹೊಸ ಅರಿವಿನ ಅನ್ವೇಷಣೆಗೆ ಉತ್ತೇಜನ ಕೊಟ್ಟು ಅವುಗಳನ್ನು ಪ್ರೌಢ ಪ್ರಕಟಣೆಗಳು ಮತ್ತು ಉಪನ್ಯಾಸಗಳ ಮೂಲಕ ಬೆಳಕಿಗೆ ತರಬೇಕು. ಮತ್ತೊಂದು ಕಡೆ, ಯಾವುದೋ ಕಾರಣದಿಂದ ವಿಶ್ವವಿದ್ಯಾನಿಲಯವನ್ನು ಹೊಗಲಾರದ ಜನರಿಗೆ ಅಂಥ ಜ್ಞಾನವನ್ನು ಹಂಚಬೇಕು. ಈ ಉದ್ದೇಶದ ಸಾಧನೆಗಾಗಿ ಮಹತ್ವಪೂರಿತವೂ ಆಸಕ್ತಿಕರವೂ ಆದ ವಿವಿಧ ವಿಷಯಗಳನ್ನು ಕುರಿತು ಹೊಸ ಹೊಸ ಪುಸ್ತಕಗಳನ್ನು ನಮ್ಮ ವಿಶ್ವವಿದ್ಯಾನಿಲಯಗಳು ಪ್ರಕಟಿಸಬೇಕು. ಇದರಿಂದ ಪ್ರೌಢಶಿಕ್ಷಣಕ್ಕಾಗಿ, ತನ್ನಲ್ಲಿಗೆ ಬಂದ ವಿದ್ಯಾರ್ಥಿಗಳನ್ನು ಮಾತ್ರವಲ್ಲದೆ, ಹೊರಗೇ ಉಳಿಯುವ ಅವರ ತಂದೆತಾಯಿಗಳು, ಪೋಷಕರು ಮತ್ತು ಇತರ ಜನಸಮುದಾಯವನ್ನು ವಿಶ್ವವಿದ್ಯಾನಿಲಯವು ಸುಶಿಕ್ಷಿತರನ್ನಾಗಿ ಮಾಡಿದಂತಾಗುವುದು. ಮಾರ್ಲೆಯೇ ತನ್ನ ಪ್ರಬಂಧದ ಬೇರೊಂದು ಕಡೆ ಹೇಳುವಂತೆ, "ಯಾವ ಸಮಾಜದಲ್ಲಿ ಬಹುಜನರ ನೆಮ್ಮದಿ, ಆಸಕ್ತಿ, ಕುತೂಹಲ, ಸಾಮರ್ಥ್ಯ ಇವೆಲ್ಲವೂ ಅತ್ಯುನ್ನತವಾಗಿರುವುವೋ ಅಲ್ಲಿ ಮಾತ್ರ ಪ್ರತಿಭಾವಂತರ ನೈತಿಕ ಅಥವಾ ಬೌದ್ಧಿಕ ಶಕ್ತಿಗಳು ಅತ್ಯಂತ ಹೆಚ್ಚಿನ ಮಟ್ಟದಲ್ಲಿರಲು

ಸಾಧ್ಯವಾಗುವುದು. . . . ಮಾನವನನ್ನು ಸ್ವಲ್ಪಸ್ವಲ್ಪವಾಗಿ ಅನಾಗರಿಕತೆ ಯಿಂದ ದೇವತ್ವದ ಹತ್ತಿರಕ್ಕೆತ್ತಿರುವ ಕ್ರೈಸ್ತ ಮತಗಳ ಸಂತ ಶ್ರೇಷ್ಠರ ಮತ್ತು ಇತರ ಸಾಧುವರ್ಯರ ಆಧ್ಯಾತ್ಮಿಕ ಮತ್ತು ಬೌದ್ಧಿಕ ಸಾಧನೆಗಳು ನಮ್ಮೆಲ್ಲರಿಂದಲೂ ಆಗದಿರಬಹುದು. ಆದರೆ ನಮ್ಮ ಶಕ್ತಿ ಯಿರುವಷ್ಟುಮಟ್ಟಿಗೆ ನಮ್ಮ ಮನಸ್ಸನ್ನು ಕಾರ್ಯೋನ್ಮುಖಗೊಳಿಸಿಕೊಂಡು ನಮಗೆ ದೊರೆತ ಅವಕಾಶಗಳನ್ನು ಇತರರಿಗೆ ಹಂಚಲು ಪ್ರಾಮಾಣಿಕವಾಗಿ ಪ್ರಯತ್ನಿಸುವುದು ನಾವೆಲ್ಲರೂ ಮಾಡಬಹುದಾದ ಕೆಲಸ. ಯಾವುದರ ವಾಹಕ ಶಕ್ತಿ ಮತ್ತು ವಿನ್ಯಾಸವನ್ನು ಅವಲಂಬಿಸಿ ಮಾನವಜನಾಂಗದ ವೈಭವಪೂರ್ಣವಾದ ನೌಕಾಯಾನ ಯಶಸ್ವಿಯಾಗಿ ಸಾಗಬಲ್ಲುದೋ ಆ ಉಬ್ಬರವನ್ನು ಪೋಷಿಸಲು ಇಂತಹ ಕೆಲಸ ನೆರವಾಗಬಹುದು".

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಮೇಲೆ ಸೂಚಿಸಿದ ಎರಡೂ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯತತ್ಪರವಾಗಿದೆ. ಐನೂರನ್ನು ಮೀರಿದ ತನ್ನ ಪ್ರೌಢಪ್ರಕಟಣೆಗಳು ಮತ್ತು ಜನಪ್ರಿಯವಾದ ಪ್ರಚಾರ ಪುಸ್ತಿಕೆಗಳ ಮೂಲಕ ಜ್ಞಾನದಾನವನ್ನು ಹೆಚ್ಚುಹೆಚ್ಚು ಸಂಖ್ಯೆಯ ಜನರಿಗೆ ಅದು ನೀಡುತ್ತಿದೆ. ಇದೀಗ ಪ್ರಸಾರಾಂಗ ಹೊಸದೊಂದು ಯೋಜನೆಯನ್ನು ಕೈಗೊಂಡಿದೆ. ಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಪರಿಣತ ರಾದವರಿಂದ ಪುಸ್ತಕಗಳನ್ನು ಬರೆಯಿಸಿ "ಗೃಹಸರಸ್ವತೀ ಗ್ರಂಥಮಾಲೆ" ಎಂದು ಕರೆಯುವ ಮಾಲಿಕೆಯಲ್ಲಿ ಪ್ರಕಟಿಸಲು ಉದ್ದೇಶಿಸಿದೆ. ಈ ಪುಸ್ತಕಗಳು ಪ್ರಚಾರ ಪುಸ್ತಕಮಾಲೆಯ ಪುಸ್ತಕಗಳಿಗಿಂತ ದೊಡ್ಡವಾಗಿರು ತ್ತವೆ. ಸುಮಾರು ೧೨೫ ರಿಂದ ೧೫೦ ಪುಟಗಳಿಂದ ಕೂಡಿರುತ್ತವೆ. ವ್ಯಾಪಕವಾಗಿ ಜ್ಞಾನದ ವಿವಿಧ ಶಾಖೋಪಶಾಖೆಗಳನ್ನು ಅವು ಒಳಗೊಳ್ಳು ತ್ತವೆ. ಸುಸಂಸ್ಕೃತ ವ್ಯಕ್ತಿಗೆ ಅತ್ಯಗತ್ಯವಾದ ತಿಳಿವಿನ ಎಲ್ಲ ವಿಭಾಗ ಗಳನ್ನೂ ಅವು ಒಳಗೊಳ್ಳುತ್ತವೆ. ಉನ್ನತ ಶಿಕ್ಷಣವನ್ನು ಪಡೆಯುವ ಅವಕಾಶವನ್ನು ಹೊಂದದ ಸಾಮಾನ್ಯಜನರ ಜ್ಞಾನತೃಷೆಯನ್ನು ತೃಪ್ತಿ ಗೊಳಿಸುವುದು, ಇನ್ನೂ ಓದಬೇಕೆಂಬ ಆಸೆಯನ್ನು ಅವರಲ್ಲಿ ಕೆರಳಿಸುವುದು ಈ ಪುಸ್ತಕಗಳ ಗುರಿ. ಶಾಲಾಕಾಲೇಜುಗಳಲ್ಲಿ ಪೂರ್ಣಾವಧಿಯ ಶಿಕ್ಷಣ ಏನನ್ನು ಸಾಧಿಸುತ್ತದೆಯೋ ಅದನ್ನೇ ಅಲ್ಪಪ್ರಮಾಣದಲ್ಲಿ ಮನೆಮನೆ

ಯಲ್ಲಿ ಈ ಪುಸ್ತಕಗಳು ಸಾಧಿಸುತ್ತವೆ—ಇಂಗ್ಲಿಷಿನಲ್ಲಿರುವ "ಹೋಂ ಯೂನಿವರ್ಸಿಟಿ ಲೈಬ್ರರಿ" ಮಾಲಿಕೆಯ ಪುಸ್ತಕಗಳ ಹಾಗೆ. ಆಧುನಿಕ ಕಾಲದ ವಿಶ್ವವಿದ್ಯಾನಿಲಯವೆಂದರೆ ಒಳ್ಳೆಯ ಗ್ರಂಥಭಂಡಾರ ಎಂಬ ಕಾರ್ಲೈಲನ ಉಕ್ತಿಯನ್ನು ಅವು ಸಾರ್ಥಕಪಡಿಸುತ್ತವೆ. ಜನ ಸರಸ್ವತಿ ಯಿರುವೆಡೆಗೆ ಬರದೆ ಅಥವಾ ಬರಲಾರದೆ ಹೋದಾಗ ಸರಸ್ವತಿಯೇ ಜನರಿ ರುವೆಡೆಗೆ ಹೋಗಬೇಕು ಎಂದು ಸ್ವಾಮಿ ವಿವೇಕಾನಂದರು ಎಪ್ಪತ್ತೈದು ವರ್ಷಗಳಿಗೂ ಹಿಂದೆಯೇ ಹೇಳಿದರು. ಆ ಮಾತು ಇಂದೂ ಸಲ್ಲುತ್ತದೆ. ಗೃಹಸರಸ್ವತೀ ಗ್ರಂಥಮಾಲೆ ನಾಡಿನ ಗೃಹಸ್ಥರ ಮನೆಗಳತ್ತ ದೇವಿ ಶಾರದೆ ಇಡುವ ಪವಿತ್ರ ಹೆಜ್ಜೆಗಳನ್ನು ಪ್ರತಿನಿಧಿಸುತ್ತದೆ. ಅವಳ ಗಮನದ ಗುರಿ ಕನ್ನಡನಾಡಿನ ಮನೆಮನೆಯ ಅಣ್ಣತಮ್ಮಂದಿರ, ಅಕ್ಕತಂಗಿಯರ, ಜ್ಞಾನಾರ್ಜನೆಗೆ ಸಾಕಷ್ಟು ಕಾಲವಾಗಲಿ ಅವಕಾಶವಾಗಲಿ ಇಲ್ಲದಿದ್ದರೂ "ಜಗತ್ತಿನಲ್ಲಿ ಬಂದಿರುವ ಅತ್ಯುತ್ತಮವಾದ ಆಲೋಚನೆಗಳನ್ನೂ, ಉಕ್ತಿಗಳನ್ನೂ" ಅರಿಯಲು ಆಸಕ್ತಿಯನ್ನು ಹೊಂದಿರುವವರ ಮನೆ ಗಳು.

ಗೃಹಸರಸ್ವತೀ ಗ್ರಂಥಮಾಲೆಗಾಗಿ ನಾಡಿನ ಪ್ರಮುಖ ವಿದ್ವಾಂಸರು ಗಳನ್ನು ಪುಸ್ತಕಗಳನ್ನು ಬರೆದುಕೊಡುವಂತೆ ಕೇಳಿಕೊಂಡಾಗ ಈ ಕೆಳಗಿನ ಸೂಚನೆಗಳನ್ನು ಅವರಿಗೆ ನೀಡಲಾಯಿತು.

೧. ಪುಸ್ತಕವು ಕ್ರೌನ್ ಅಷ್ಟಪತ್ರಾಕಾರದ ೧೨೫ ರಿಂದ ೧೫೦ ಪುಟ ಗಳಷ್ಟು ಇರಬೇಕು.

೨. ಸುಮಾರಾಗಿ ಎಸ್.ಎಸ್.ಎಲ್.ಸಿ.ವರೆಗೆ ಓದಿರುವ ಸಾಮಾನ್ಯರ ತಿಳಿವಿಗೆ ನಿಲುಕುವಂತಿರಬೇಕು.

೩. ಸಾಹಿತ್ಯವಿಚಾರಗಳನ್ನು ಕುರಿತು ಬರೆಯುವಾಗ

ಅ) ಕೇವಲ ಪ್ರೌಢವಿದ್ವಾಂಸರಿಗೆ ಆಸಕ್ತಿಯಿರುವ ಕಾಲ, ವಿಚಾರಮೂಲಗಳು, ತಂತ್ರಗಳು ಮುಂತಾದ ವಿವರಗಳನ್ನು ಬಿಟ್ಟುಬಿಡಬಹುದು.

ಆ) ಕೃತಿಯಲ್ಲಿ ಎದ್ದು ಕಾಣುವ ಸಾಹಿತ್ಯಿಕ ಮೌಲ್ಯಗಳನ್ನೂ ಅದರ ವಿಶಿಷ್ಟ ಕೊಡುಗೆಯನ್ನೂ ಒತ್ತಿ ಹೇಳ ಬೇಕು.

೪. ಲೇಖಕರನ್ನು ಕುರಿತು ಬರೆಯುವಾಗ

ಅ) ಅವರ ಸಾಮಾಜಿಕ ಮತ್ತು ರಾಜಕೀಯ ಹಿನ್ನಲೆಯನ್ನೂ ಸ್ಥೂಲವಾಗಿ ಚಿತ್ರಿಸಬೇಕು.

ಆ) ಅವರ ಜೀವನಚರಿತ್ರೆಯನ್ನು ಸಂಗ್ರಹವಾಗಿ ನಿರೂಪಿಸಬೇಕು.

ಇ) ಅವರ ಕೃತಿಗಳ ಸಂಕ್ಷಿಪ್ತ ತಾತ್ಪರ್ಯವನ್ನು ಕೊಡಬೇಕು.

ಈ) ಕೃತಿಗಳ ವಿಮರ್ಶಾತ್ಮಕ ಮೌಲ್ಯಮಾಪನ ಇರಬೇಕು.

ಉ) ಲೇಖಕರ ಮುಖ್ಯ ಕೃತಿಗಳ ಮತ್ತು ಅವುಗಳನ್ನು ಕುರಿತ ಕೃತಿಗಳ ಪಟ್ಟಿ ಇರಬೇಕು.

೫. ವಿಜ್ಞಾನ ಮತ್ತು ಕಲಾ ವಿಭಾಗದ ಪುಸ್ತಕಗಳನ್ನು ಬರೆಯುವಾಗ

ಅ) ಜಟಿಲವೂ, ತಾಂತ್ರಿಕವೂ ಆದ ಅಂಶಗಳನ್ನು ನಿವಾರಿಸಬೇಕು.

ಆ) ಚಾರಿತ್ರಿಕ ಮತ್ತು ಸಾಮಾಜಿಕ ಪ್ರಜ್ಞೆ, ವೈಜ್ಞಾನಿಕ ಮನೋಭಾವ ಮತ್ತು ವೈಜ್ಞಾನಿಕ ಚಿಂತನೆ ಇವುಗಳ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ವಿಜ್ಞಾನದ ವಿಚಾರಗಳನ್ನು. ವಿಸ್ತರಿಸಿ ಹೇಳಬೇಕು.

ಈ ಸೂಚನೆಗಳಿಗನುಸಾರವಾಗಿ ಲೇಖಕರು ಗೃಹಸರಸ್ವತೀ ಗ್ರಂಥಮಾಲೆಯ ಪುಸ್ತಕಗಳನ್ನು ಬರೆಯಲು ಪ್ರಯತ್ನಿಸಿದ್ದಾರೆ. ಕನ್ನಡ ನಾಡಿನ ಜನಕೋಟಿ ಈ ನೂತನ ಮಾಲೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಅದರ ಪೂರ್ಣ ಪ್ರಯೋಜನವನ್ನು ಪಡೆಯುತ್ತಾರೆಂದು ಆಶಿಸಲಾಗಿದೆ.

ಪ್ರಭುಶಂಕರ
ಡೈರೆಕ್ಟರ್

ಮುನ್ನುಡಿ

ಪ್ರಾಚ್ಯ ಪಾಶ್ಚಾತ್ಯ ಶಿಕ್ಷಣತಜ್ಞರು ಕೂಲಂಕಷವಾಗಿ ವಿಚಾರ ನಡೆಸಿ ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು ಎಂದು ಒಮ್ಮತದ ತೀರ್ಮಾನ ನೀಡಿರುವುದು ಸರ್ವವಿದಿತವಾಗಿದೆ. ಈ ನಿರ್ಧಾರವನ್ನು ಕೈಗೊಳ್ಳುವುದರಿಂದ ಮಾತ್ರವೇ ವಿದ್ಯಾಭ್ಯಾಸಕ್ಕೆ ಉಜ್ವಲ ವಾದ ಭವಿಷ್ಯವಿದೆ ಎಂಬುದನ್ನು ಮನಗಂಡ ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ನಿಟ್ಟಿನಲ್ಲಿ ದಿಟ್ಟತನದಿಂದ ಹೆಜ್ಜೆಯಿಡುತ್ತಿವೆ. ಕೇಂದ್ರ ಸರಕಾರವು ಪ್ರಾದೇಶಿಕ ಭಾಷೆಗಳಲ್ಲಿ ಪಠ್ಯಪುಸ್ತಕಗಳು, ಸಹಾಯಕ ಗ್ರಂಥಗಳು ಹೆಚ್ಚಿನ ಸಂಖ್ಯೆಯಲ್ಲಿ ರಚಿತವಾಗಲಿ ಎಂಬ ಆಶಯದಿಂದ ಪ್ರತಿಯೊಂದು ರಾಜ್ಯಸರಕಾರದ ಮೂಲಕವೂ ಅಲ್ಲಿನ ವಿಶ್ವವಿದ್ಯಾನಿಲಯ ಗಳಿಗೆ ಒಂದು ಕೋಟಿ ರೂಪಾಯಿಗಳ ಸಹಾಯಧನವನ್ನು ನೀಡುವ ತೀರ್ಮಾನವನ್ನು ಕೈಗೊಂಡಾಗಿದೆ. ಆ ಹಣದ ವಿತರಣಕಾರ್ಯವೂ ಪ್ರಾರಂಭವಾಗಿದೆ.

ಮೈಸೂರು ವಿಶ್ವವಿದ್ಯಾನಿಲಯ ಕಳೆದ ಅನೇಕ ದಶಕಗಳಿಂದಲೂ ಈ ದಿಕ್ಕಿನಲ್ಲಿ ಗಣನೀಯವಾದ ಸಾಧನೆ ನಡೆಸಿದೆ. ಇಲ್ಲಿನ ಅನೇಕ ಕಾಲೇಜು ಗಳಲ್ಲಿ ಅನೇಕ ವರ್ಷಗಳ ಹಿಂದೆಯೆ ಕನ್ನಡ ಮಾಧ್ಯಮ ತೆರೆಯಲಾಯಿತು. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಮಾಧ್ಯಮ ಆರಿಸಿಕೊಂಡು ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗಿಂತ ಉನ್ನತಮಟ್ಟದ ಪರಿಣತಿ ಪಡೆಯುವುದು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಮೈಸೂರಿನ ಒಂದು ಕಾಲೇಜಿನಲ್ಲಿ ಕನ್ನಡ ಮಾಧ್ಯಮವನ್ನು ಪ್ರಾರಂಭಿಸಿದ ವರ್ಷವೇ ಅದನ್ನು ಆರಿಸಿಕೊಂಡವರಲ್ಲಿ ನೂರಕ್ಕೆ ನೂರು ಜನ ತೇರ್ಗಡೆ ಹೊಂದಿ ದರು ಎಂಬುದನ್ನು ನೆನೆಯುವುದರಲ್ಲಿ ಹೆಚ್ಚಿನ ವಿವೇಕವಿದೆ. ಅದರ ಮರು ವರ್ಷದಿಂದಲೂ ಆ ಕಾಲೇಜಿನ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಶೇಕಡಾ ೯೮ ಕ್ಕೆ ಕಡಮೆಯಿಲ್ಲದಂತೆ ತೇರ್ಗಡೆ ಹೊಂದುತ್ತಲೆ ಬಂದಿದ್ದಾರೆ. ಅದೇ ಕಾಲೇಜಿನಲ್ಲಿ ಇಂಗ್ಲಿಷ್ ಮಾಧ್ಯಮ ಆರಿಸಿಕೊಂಡವರು ಶೇಕಡಾ

ಮೂವತ್ತು ಮೂವತ್ತೈದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆ ಹೊಂದು ತ್ತಿಲ್ಲ ಎಂಬುದೂ ಗಮನಿಸಬೇಕಾದ ವಿಷಯ.

ಈಗಂತೂ ವಿಶ್ವವಿದ್ಯಾನಿಲಯದ ಮೊದಲನೆಯ ತರಗತಿಯಿಂದ ಹಿಡಿದು ಎಂ.ಎ., ಎಂ.ಎಸ್‌ಸಿ., ಮುಂತಾದ ಸ್ನಾತಕೋತ್ತರ ತರಗತಿಯ ವರೆಗೂ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು, ಅವರು ಯಾವುದೇ ಭಾಷೆಯ ಮೂಲಕ ಶಿಕ್ಷಣ ಪಡೆದಿದ್ದರೂ, ಕನ್ನಡದಲ್ಲಿ ಉತ್ತರ ಬರೆಯಬಹುದು ಎಂದು ವಿಶ್ವವಿದ್ಯಾನಿಲಯ ಅಪ್ಪಣೆ ಹೊರಡಿಸಿದೆ. ಅದರ ಪ್ರಕಾರ ಕೆಲವು ವಿದ್ಯಾರ್ಥಿಗಳು ಸ್ನಾತಕೋತ್ತರ ಪರೀಕ್ಷೆಗಳಲ್ಲೂ ಕನ್ನಡದಲ್ಲೇ ಉತ್ತರ ಬರೆದು ಪ್ರಶಂಸನೀಯವಾದ ಫಲಿತಾಂಶಗಳನ್ನು ತೋರಿಸು ತ್ತಿದ್ದಾರೆ.

ಪಠ್ಯಪುಸ್ತಕಗಳ ಅಭಾವ ಎಂಬುದು ಹಳಸಿದ ಮಾತಾಗಿ ಪರಿಣಮಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ತನ್ನ ಪ್ರಸಾರಾಂಗದ ಮೂಲಕ ಅನೇಕ ಪಠ್ಯಪುಸ್ತಕಗಳನ್ನು ವಿದ್ವಾಂಸರಿಂದ ಬರೆಸಿ ಪ್ರಕಟಿಸಿದೆ. ಈ ಮಹೋನ್ನತ ಕಾರ್ಯದಲ್ಲಿ ಮೈಸೂರು, ಬೆಂಗಳೂರು ಮತ್ತು ಕರ್ಣಾಟಕ ವಿಶ್ವವಿದ್ಯಾನಿಲಯಗಳು ಹಿಂದೆಂದೂ ಕಾಣದ ಭವ್ಯಪ್ರಮಾಣದಲ್ಲಿ ಕಾರ್ಯೋನ್ಮುಖವಾಗಿವೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಈಗಾಗಲೇ ನೂರಾರು ಸ್ನಾತಕ ಮತ್ತು ಸ್ನಾತಕೋತ್ತರ ಮಟ್ಟದ ಪಠ್ಯಪುಸ್ತಕಗಳನ್ನೂ, ಸಹಾಯಕ ಗ್ರಂಥಗಳನ್ನೂ ನೂರಾರು ಜನ ಘನ ವಿದ್ವಾಂಸರ ನೆರವಿನಿಂದ ಸೃಷ್ಟಿಸುತ್ತಿದೆ. ಇತರ ವಿಶ್ವವಿದ್ಯಾ ನಿಲಯಗಳ ಕನ್ನಡ ಅಧ್ಯಯನ ಸಂಸ್ಥೆಗಳೂ ಇಂತಹ ಒಂದು ಶ್ಲಾಘನೀಯ ವಾದ ಉದ್ಯಮದಲ್ಲಿ ತೊಡಗಿವೆ. ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯವೂ ಈ ನಿಟ್ಟಿನಲ್ಲಿ ಕಾರ್ಯವನ್ನು ಪ್ರಾರಂಭಿಸಿರುವುದು ಸ್ವಾಗತಾರ್ಹವಾಗಿದೆ.

ಮಹಾತ್ಮಾ ಗಾಂಧೀಜಿಯವರು—ಭಾರತದ ಜನಕೋಟಿಯೊಂದಿಗೆ ಮತ್ತು ಅವರ ಸಮಸ್ಯೆಗಳೊಂದಿಗೆ ಅವರಷ್ಟು ನಿಕಟವಾದ ಪರಿಚಯವನ್ನು ಹೊಂದಿ, ಅವರಿಗಾಗಿಯೇ ಬಾಳಿದ ಶಿಕ್ಷಣತಜ್ಞರು ಮತ್ತೊಬ್ಬರಿರಲಾರರು. —ತಮ್ಮ ಖಡ್ಗ ತೀಕ್ಷ್ಣವೂ ತರ್ಕಬದ್ಧವೂ ಆದ ವಾಣಿಯಲ್ಲಿ ಸಾರಿ ಸಾರಿ ಹೇಳಿದರು, ದೇಶಭಾಷೆಗಳು ಶಿಕ್ಷಣ ಮಧ್ಯಮವಾದಾಗಲೇ ಭಾರತದಲ್ಲಿ

ವಿದ್ಯಾಭ್ಯಾಸ ಅರ್ಥಪೂರ್ಣವಾಗುತ್ತದೆ ಎಂದು. ಅವರ ಈ ಕೆಲವು ಮಾತುಗಳನ್ನು ಪರಿಭಾವಿಸಬೇಕು :

"........ಗಣಿತ, ರೇಖಾಗಣಿತ, ಬೀಜರೇಖಾಗಣಿತ, ರಸಾಯನ ಶಾಸ್ತ್ರ, ಖಗೋಳಶಾಸ್ತ್ರ—ಈ ವಿಷಯಗಳಲ್ಲಿ ಎಷ್ಟನ್ನು ನಾನು ನಾಲ್ಕು ವರ್ಷಗಳಲ್ಲಿ ಕಲಿತೆನೋ ಅಷ್ಟನ್ನು ಒಂದು ವರ್ಷದಲ್ಲಿ ಕಲಿಯಬಹು ದಾಗಿತ್ತು. ಇಂಗ್ಲಿಷಿನ ಮೂಲಕವಾಗಿಯೇ ಕಲಿಯದೆ ಗುಜರಾತಿಯ ಮೂಲಕ ಕಲಿತಿದ್ದರೆ, ಎಂದು ನಾನು ಈಗ ತಿಳಿದುಕೊಂಡಿದ್ದೇನೆ. ನಾನು ಆ ವಿಷಯಗಳನ್ನು ಗ್ರಹಿಸುವುದು ಇನ್ನೂ ಸುಲಭವಾಗಿರುತ್ತಿತ್ತು. ವಿಶದ ವಾಗಿರುತ್ತಿತ್ತು. ನನ್ನ ಗುಜರಾತಿ ಶಬ್ದಭಂಡಾರ ಇನ್ನೂ ವಿಪುಲ ವಾಗಿರುತ್ತಿತ್ತು. ನಾನು ಆ ಜ್ಞಾನವನ್ನು ಮನೆಯಲ್ಲಿ ಉಪಯೋಗಿಸಿ ಕೊಳ್ಳಬಹುದಾಗಿತ್ತು. ಈ ಇಂಗ್ಲಿಷ್ ಮಾಧ್ಯಮ ನನಗೂ ಇಂಗ್ಲಿಷ್ ಶಾಲೆಗಳಲ್ಲಿ ಓದದೆ ಇದ್ದ ನನ್ನ ಮನೆಯವರಿಗೂ ನಡುವೆ ದಾಟಲಾಗದ ಅಡ್ಡಗೋಡೆಯನ್ನು ಹಾಕಿತು...........ನನ್ನ ಮನೆಯಲ್ಲಿಯೇ ನಾನು ಬಲು ಬೇಗನೆ 'ಪರಕೀಯ'ನಾಗುತ್ತಲಿದ್ದೆ.

"........ಶಿಕ್ಷಣ ಮಾಧ್ಯಮವನ್ನು ಕೂಡಲೇ, ಎಷ್ಟೇ ವೆಚ್ಚವಾಗಲಿ, ಬದಲಾಯಿಸಿ ಪ್ರಾಂತೀಯ ಭಾಷೆಗಳಿಗೆ ಸರಿಯಾದ ಸ್ಥಾನವನ್ನು ಕೊಡ ಬೇಕು. ಇದರಿಂದ ಉನ್ನತ ಶಿಕ್ಷಣದಲ್ಲಿ ಸಂಭವಿಸುತ್ತದೆ ಎಂದು ಹೇಳಲಾಗುತ್ತಿರುವ ತಾತ್ಕಾಲಿಕ ಗೊಂದಲವನ್ನು ಕೂಡ, ಪ್ರತಿದಿನವೂ ಅಧಿಕವಾಗುತ್ತಿರುವ ದೋಷಯುಕ್ತ ಅಪವ್ಯಯಕ್ಕೆ ಬದಲಾಗಿ, ಸ್ವಾಗತಿಸು ತ್ತೇನೆ."

ಮಹಾತ್ಮಾ ಗಾಂಧಿಯವರ ಅನೇಕ ರಾಷ್ಟ್ರಹಿತ ಯೋಜನೆಗಳನ್ನು ಮೂಲೆಗುಂಪು ಮಾಡಿ ದೇಶಕ್ಕೆ ಹಾನಿಯನ್ನು ತರುತ್ತಿರುವ ವಿದ್ರೋಹಿ ಗಳಾದ ಅನೇಕರು ಅವರ ಈ ದೇಶಭಾಷಾ ಮಾಧ್ಯಮದ ಯೋಜನೆ ಯನ್ನೂ ಮೂಲೆಗೊತ್ತರಿಸಿದ್ದಾರೆ. ಅದಕ್ಕೆ ಅವರು ಒಡ್ಡುವ ವಾದಗಳು ಹಾಸ್ಯಾಸ್ಪದವಾಗಿವೆ. "ದೇಶಭಾಷೆಗಳಲ್ಲೇ ಶಿಕ್ಷಣ ದೊರಕಿದರೆ ನಮಗೆ ಪರ ಪ್ರಾಂತಗಳಲ್ಲಿ ಕೆಲಸ ಸಿಕ್ಕುವುದು ಹೇಗೆ?" ಇದು ಅಂಥವರ ಪ್ರಶ್ನೆ ಗಳಲ್ಲಿ ಒಂದು. ಇಲ್ಲಿಂದ ಪರಪ್ರಾಂತಗಳಿಗೆ ಹೋಗಿಯೋ, ಪರಪ್ರಾಂತ

ಗಳಿಂದ ಇಲ್ಲಿಗೆ ಬಂದೋ ಹಿಂದೆ ಉದ್ಯೋಗ ದೊರಕಿಸಿಕೊಂಡವರು ಹಲವರು. ಆದರೆ ಅವರಿಗೆ ಉದ್ಯೋಗ ಸಿಕ್ಕಿದ್ದು ಅವರ ಇಂಗ್ಲಿಷ್ ಜ್ಞಾನಕ್ಕಾಗಿಯಲ್ಲ. ಅವರಿಗಿದ್ದ ತಾಂತ್ರಿಕ ಮತ್ತಿತರ ವಿಶೇಷ ಜ್ಞಾನಕ್ಕಾಗಿ ಎಂಬುದನ್ನು ಅಂಥವರು ಮರೆಯುತ್ತಾರೆ. ಆಗಲೂ ಇವರು ತಮ್ಮ ಮೇಲಧಿಕಾರಿಗಳೊಂದಿಗೂ, ಕೈಕೆಳಗಿನ ಅಧಿಕಾರಿಗಳೊಂದಿಗೂ ವ್ಯವಹಾರಕ್ಕಾಗಿ ಬಳಸುತ್ತಿದ್ದ ಭಾಷೆ ಇಂಗ್ಲಿಷ್ ಅಲ್ಲ ಎಂಬುದನ್ನು ಮರೆಯಬಾರದು. ಯಾವ ಪ್ರಾಂತದಲ್ಲಿ ಇವರು ಕೆಲಸ ಮಾಡುತ್ತಿದ್ದರೋ ಆ ಪ್ರಾಂತ ಭಾಷೆಯನ್ನು ಮಾತಾಡುವಮಟ್ಟಿಗಾದರೂ ಇವರು ಕಲಿಯಲೇಬೇಕಾಗಿತ್ತು. ಹಾಗೆ ಅವರು ಕಲಿತ ಭಾಷೆಗಳಿಂದಲೇ ಅವರ ದಿನನಿತ್ಯದ ವ್ಯವಹಾರ ಸಾಗುತ್ತಿರುವುದು, ಮತ್ತು ಅವರ ತಾಂತ್ರಿಕ ಜ್ಞಾನದ ಸರಿಯಾದ ವಿನಿಯೋಗವೂ ನಡೆಯುತ್ತಿರುವುದು. ಇಷ್ಟಾದರೂ ಹೀಗೆ ಹೊರಗೆ ಹೋದ ಜನ ದೇಶಭಾಷಾ ಮಾಧ್ಯಮದ ವಿರುದ್ಧವಾಗಿ ಮಾತನ್ನಾಡುತ್ತಿರುವುದು ಅತ್ಯಂತ ಆಶ್ಚರ್ಯಕರವಾಗಿದೆ.

ಇಷ್ಟಕ್ಕೂ ಹೀಗೆ ಹೊರಗೆ ಹೋಗುತ್ತಿರುವ ತಜ್ಞರ ಸಂಖ್ಯೆಯಾದರೂ ಎಷ್ಟು? ಬಹುಶಃ ಶೇಕಡಾ ಒಂದಕ್ಕಿಂತಲೂ ಕಡಮೆ. ಹೀಗೆ ನೂರರಲ್ಲಿ ಒಬ್ಬ "ಪ್ರತಿಭಾವಂತ"ನ ಸಲುವಾಗಿ ತೊಂಬತ್ತೊಂಬತ್ತು ಜನರಿಗೆ ಇಂಗ್ಲಿಷ್ ಭಾಷೆಯನ್ನು ಕಡ್ಡಾಯವಾಗಿ ಕಲಿಸಬೇಕು ಎಂಬುದು ಖಂಡನಾರ್ಹ.

ಈ ಸಂದರ್ಭದಲ್ಲಿಯೆ ಇನ್ನೂ ಕೆಲವು ಸಂದೇಹಗಳನ್ನು ನಿವಾರಿಸುವುದು ಅಗತ್ಯ. ತ್ರಿಭಾಷಾ ಸೂತ್ರ ಎಂಬುದು, ನಾನು ಹಿಂದೆಯೇ ಅನೇಕ ಕಡೆ ಹೇಳಿರುವಂತೆ, ಭಾರತೀಯರಿಗೆ ತ್ರಿಶೂಲಪ್ರಾಯವಾಗುತ್ತದೆ. ಎಲ್ಲರಿಗೂ ಎಲ್ಲ ಭಾಷೆಗಳೂ ಬೇಕಾಗಿಲ್ಲ. ಎಂದರೆ ಎಲ್ಲರೂ ಇಂಗ್ಲಿಷನ್ನಾಗಲಿ ಹಿಂದಿಯನ್ನಾಗಲಿ ಕಲಿಯಬೇಕಾದದ್ದು ಏಕೆ? ಯಾರಿಗೆ ಅಗತ್ಯವಿದೆಯೋ ಅಂಥವರು ಅವರಿಗೆ ಅಗತ್ಯವಿರುವ ಭಾಷೆಯನ್ನು ಕಲಿಯಬಹುದು. ಇಂತಹ ಭಾಷೆಗಳನ್ನು ಶೀಘ್ರವಾಗಿ ಸಾಹಿತ್ಯದೃಷ್ಟಿಯಿಂದಲ್ಲದೆ ಭಾಷಾದೃಷ್ಟಿಯಿಂದ ಬೋಧಿಸುವ ಕಾರ್ಯಕ್ಕಾಗಿ ಭಾಷಾ ಸಂಸ್ಥೆಗಳ ಸ್ಥಾಪನೆಯಾಗಿದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಆಗಲಿದೆ. ಅಲ್ಲದೆ ತ್ರಿಭಾಷಾ ಸೂತ್ರವೇ ಏಕೆ?

ಭರತಖಂಡಕ್ಕೀಗ ಬೇಕಾಗಿರುವುದು ಬಹುಭಾಷಾಸೂತ್ರ. ನಮ್ಮ ಜನ ಕಲಿಯಬೇಕಾದದ್ದು ಇಂಗ್ಲಿಷ್ ಭಾಷೆಯೊಂದನ್ನು ಮಾತ್ರವಲ್ಲ, ರಷ್ಯನ್, ಜಪಾನೀ, ಜರ್ಮನ್, ಫ್ರೆಂಚ್ ಮುಂತಾದ ಅನೇಕ ಪ್ರೌಢಭಾಷೆಗಳನ್ನು ವೈಜ್ಞಾನಿಕ ಆವಶ್ಯಕತೆಗಳಿಗಾಗಿ ಕಲಿಯಬೇಕಾಗಿದೆ.

ತ್ರಿಭಾಷಾ ಸೂತ್ರದ ಅಪಾಯ ಇಷ್ಟಕ್ಕೇ ಸೀಮಿತವಾಗಿಲ್ಲ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಾಜಕೀಯ ಕಾರಣಗಳಿಗಾಗಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳ ವೈಭವವನ್ನು ಏನೂ ಅರಿಯದ ನಮ್ಮ ಹಸುಳೆಗಳ ಮುಂದೆ ವರ್ಣಿಸಿ ಅವರ ಮನಸ್ಸನ್ನು ಅವುಗಳ ಕಡೆಗೇ ಎಳೆದು ದೇಶಭಾಷೆಗಳ ಅಧ್ಯಯನವನ್ನು ಹಿಂದಕ್ಕೊತ್ತರಿಸುವ ಪ್ರಯತ್ನವನ್ನೂ ಮಾಡುತ್ತಿರುವವರು ಅನೇಕರಿದ್ದಾರೆ.

ನನ್ನ ವಾದ ಇದು. ತ್ರಿಭಾಷಾ ಸೂತ್ರ ಎಂಬುದು ಭರತಖಂಡಕ್ಕೆ ಅತ್ಯಂತ ಅಪಾಯಕಾರಿಯಾದದ್ದು. ಅದರ ಸ್ಥಾನದಲ್ಲಿ ಬರಬೇಕಾದದ್ದು ದ್ವಿಭಾಷಾ ಸೂತ್ರ. ಭರತಖಂಡದ ಯಾವ ವಿದ್ಯಾರ್ಥಿಯ ಮೇಲೂ ಯಾವ ಭಾಷೆಯನ್ನೂ ಬಲವಂತವಾಗಿ ಹೇರಬಾರದು ಎಂಬುದು ತನ್ನ ವಾದದ ಸಾರಾಂಶ. ಮೇಲೆ ಸೂಚಿಸಿದಂತೆ ಪ್ರಪಂಚದಲ್ಲಿ ನಡೆಯುತ್ತಿರುವ ವಿಜ್ಞಾನ ಮತ್ತು ತಾಂತ್ರಿಕ ಪ್ರಗತಿಯ ಅರಿವಿಗೆ ಇಂಗ್ಲಿಷ್ ಭಾಷೆಯ ಜ್ಞಾನವೊಂದೇ ಸಾಲದು. ಜರ್ಮನ್, ರಷ್ಯನ್ ಮುಂತಾದ ಭಾಷೆಗಳನ್ನೂ ನಮ್ಮ ವಿದ್ಯಾರ್ಥಿಗಳು ಕಲಿಯಬೇಕಾದದ್ದು ಅಗತ್ಯ. ಆದ್ದರಿಂದ ಅನೇಕ ಭಾಷೆಗಳನ್ನು ವಿದ್ಯಾರ್ಥಿಗಳ ಮುಂದೆ ಇಟ್ಟು, ಅವರು ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳುವ ಅವಕಾಶವನ್ನು ಅವರಿಗೆ ನೀಡಬೇಕು.

ಶೈಕ್ಷಣಿಕ ದೃಷ್ಟಿಯಿಂದ ಮಾತ್ರವಲ್ಲದೆ ರಾಜಕೀಯವಾಗಿಯೂ ದ್ವಿಭಾಷಾ ಸೂತ್ರವು ತ್ರಿಭಾಷಾ ಸೂತ್ರಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಪ್ರದೇಶ ಪ್ರದೇಶಗಳ ನಡುವಣ ಸ್ವಭಾಷಾಭಿಮಾನಜನ್ಯವಾದ ಭಾಷಾ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ಸಹಾಯವಾಗುತ್ತದೆ. ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳಬಹುದು ಎನ್ನುವುದರಿಂದ ಹಿಂದಿ ಬೇಡ ಎನ್ನುವವರಿಗೆ, ಇಂಗ್ಲಿಷ್ ಬೇಡ ಎನ್ನುವವರಿಗೆ, ಅವು

ಗಳನ್ನು ಬಲಾತ್ಕಾರವಾಗಿ ಹೇರಿದಂತಾಗುವುದಿಲ್ಲ; ನಿಷೇಧಿಸಿದಂತೆಯೂ ಆಗುವುದಿಲ್ಲ. ಮಹಾಜನರೇ ಕಾಲಕ್ರಮೇಣ, ತಮ್ಮ ತಮ್ಮ ಅಭಿರುಚಿ ಆವಶ್ಯಕತೆಗಳಿಗೆ ತಕ್ಕಂತೆ ಹಿಂದಿ, ಇಂಗ್ಲಿಷ್, ರಷ್ಯನ್, ಸಂಸ್ಕೃತ ಮೊದ ಲಾದ ಭಾಷೆಗಳನ್ನು ಯಾವ ಶೇಕಡಾವಾರು ಪ್ರಮಾಣದಲ್ಲಿ ಕಲಿಯ ಬೇಕೆಂಬುದನ್ನು ತಮಗೆ ತಾವೇ ಗೊತ್ತುಮಾಡಿಕೊಳ್ಳುತ್ತಾರೆ.

ಹಿಂದಿಯನ್ನಾದರೂ ಐವತ್ತು ಕೋಟಿ ಭಾರತೀಯರೂ ಕಲಿಯ ಬೇಕು ಎನ್ನುವ ವಾದದಲ್ಲಿ, ಸಾಮ್ರಾಜ್ಯಶಾಹಿಯ ದಬ್ಬಾಳಿಕೆಯ ಮನೋ ಧರ್ಮವೊಂದನ್ನು ಬಿಟ್ಟರೆ, ಅರ್ಥವಿಲ್ಲ. ಶೇಕಡ ಒಂದರಷ್ಟು ಜನಕ್ಕೆ ಅರ್ಥಂಬರ್ಧ ಇಂಗ್ಲಿಷ್ ಕಲಿಸಿ ಬ್ರಿಟಿಷರು ಇನ್ನೂರು ವರ್ಷಕ್ಕೂ ಮೇಲೆ ಸಮರ್ಥವಾಗಿ ರಾಜ್ಯಭಾರ ನಡೆಸಲಿಲ್ಲವೇ?

ಆದ್ದರಿಂದ "ಬಹುಭಾಷೆಗಳಲ್ಲಿ ದ್ವಿಭಾಷಾ" ಎಂಬುದೇ ನಮಗಿಂದು ಕ್ಷೇಮಕರ ಸೂತ್ರವಾಗಿದೆ.

ಮೈಸೂರು ವಿಶ್ವವಿದ್ಯಾನಿಲಯವು ದ್ವಿಭಾಷಾ ಸೂತ್ರವನ್ನು ಅಂಗೀ ಕರಿಸಿ, ಇಡೀ ಭಾರತಕ್ಕೆ ಮಾರ್ಗದರ್ಶನ ನೀಡಿ, ಅಗ್ರೇಸರ ಸ್ಥಾನದಲ್ಲಿ ನಿಂತಿರುವುದು ನಮಗೆಲ್ಲ ಅಭಿಮಾನದ ಸಂಗತಿ.

ಅಧಿಕೃತ ರಾಷ್ಟ್ರಭಾಷೆಯ ಪ್ರಶ್ನೆ ಬರುತ್ತದೆ. ಅಖಂಡ ಭಾರತಕ್ಕೆ ಒಂದು ರಾಷ್ಟ್ರಭಾಷೆ ಅಗತ್ಯ. ಬಹುಜನರು ಯಾವುದು ರಾಷ್ಟ್ರಭಾಷೆ ಯೆಂದು ತೀರ್ಮಾನಿಸುತ್ತಾರೋ ಅದನ್ನು ವ್ಯವಹಾರದ ಮಟ್ಟಿಗೆ, ಎಲ್ಲರೂ ಅಲ್ಲ, ಅವಶ್ಯವಿದ್ದಷ್ಟು ಜನರು ಅವರೇ ನಿರ್ಣಯಿಸಿಕೊಂಡಂತೆ, ಕಲಿಯು ವುದು ಸೂಕ್ತ. ಆದರೆ ಅದನ್ನು ಕೂಡ ವಿದ್ಯಾರ್ಥಿಗಳ ಆಯ್ಕೆಗೆ ಬಿಡ ಬೇಕೆಂಬುದೇ ನನ್ನ ಅಭಿಪ್ರಾಯ.

ಇನ್ನೊಂದು ವಾದವನ್ನು ಮುಂದೊಡ್ಡುವ ಜ್ಞಾನಿಗಳ ಒಂದು ಗುಂಪಿದೆ. ಅದು ಒಂದು ಪ್ರಾಂತದ ವಿಶ್ವವಿದ್ಯಾನಿಲಯ ಮತ್ತೊಂದು ಪ್ರಾಂತದ ವಿಶ್ವವಿದ್ಯಾನಿಲಯದ ಅಧ್ಯಾಪಕರನ್ನು ನೇಮಕಮಾಡಿಕೊಳ್ಳುವ ವಿಷಯ. ನನ್ನ ವಿಶ್ವವಿದ್ಯಾನಿಲಯದ ಸೇವೆಯ ದೀರ್ಘ ಇತಿಹಾಸದಲ್ಲಿ ಹೊರಗಿನ ವಿಶ್ವವಿದ್ಯಾನಿಲಯಗಳಿಂದ ಇಲ್ಲಿಗೆ ಆಹ್ವಾನಿಸಿದ ಪ್ರತಿಭಾ ಪುರುಷರ ಸಂಖ್ಯೆ ಕೈ ಬೆರಳುಗಳಲ್ಲಿ ಎಣಿಸಬಹುದಾದಷ್ಟು. ಇಲ್ಲಿಂದ

ಬೇರೆ ವಿಶ್ವವಿದ್ಯಾನಿಲಯಗಳಿಗೆ ಹೋದವರ ಸಂಖ್ಯೆಯೂ ಇದಕ್ಕಿಂತ ಹೆಚ್ಚಿನದಾಗಿರಲಾರದು. ಈಗಂತೂ ಪ್ರತಿಯೊಂದು ಪ್ರಾಂತವೂ ತನ್ನಲ್ಲಿಯ ಪ್ರತಿಭಾಶಾಲಿಗಳಿಗೇ ಉದ್ಯೋಗ ಒದಗಿಸಲು ಅಸಮರ್ಥವಾಗಿರುವಾಗ ಇನ್ನು ಹೊರಪ್ರಾಂತಗಳಿಂದ ಪ್ರತಿಭಾವಂತರನ್ನು ಸ್ವಾಗತಿಸಿ ಅವರನ್ನು ಪೀಠಗಳಲ್ಲಿ ಪ್ರತಿಷ್ಠಾಪಿಸುವ ಮಾತು ಎಲ್ಲಿಂದ ಬಂತು? ಒಂದುವೇಳೆ ಅಂತಹ ಪ್ರಸಂಗ ಒದಗಿದರೆ ಹೀಗೆ ತಮ್ಮ ತಮ್ಮ ವಿಷಯಗಳಲ್ಲಿ 'ವಿಶೇಷ ಪ್ರತಿಭಾವಂತ'ರಾಗಿರುವರು ಬೇರೆ ಪ್ರಾಂತದ ಭಾಷೆಯನ್ನು ವ್ಯವಹಾರದ ಮಟ್ಟಿಗಾದರೂ ಶೀಘ್ರವಾಗಿ ಕಲಿತುಕೊಳ್ಳುವ ಶಕ್ತಿಯನ್ನೂ ಪಡೆದೇ ಇರುತ್ತಾರೆ. ಆದುದರಿಂದ ಇಂತಹ ಅಪೂರ್ವ ಪ್ರಸಂಗಗಳನ್ನು ಎದುರಿಸಲು, ಅಂದರೆ ಲಕ್ಷದಲ್ಲಿ ಒಬ್ಬರಿಗೆ ಅನುಕೂಲ ಮಾಡಿಕೊಡಲು, ಲಕ್ಷಾಂತರ ಜನರನ್ನು ಇಂಗ್ಲಿಷಿನ ಬಲಿಪೀಠದ ಮೇಲೆ ವಧೆ ಮಾಡುವುದು ಸರಿಯಲ್ಲವೆಂಬುದು ಸ್ಪಷ್ಟ.

ಅಲ್ಲದೆ ಈಗ ವಾದಮಾಡುತ್ತಿರುವವರಲ್ಲಿ ಅನೇಕರದು ಅರ್ಧ ಶತಮಾನದ ಹಿಂದಿನ ಜ್ಞಾನ. ಐವತ್ತು ವರ್ಷಗಳ ಹಿಂದೆ ನಾವೆಲ್ಲ ವಿದ್ಯಾರ್ಥಿಗಳಾಗಿದ್ದಾಗ ಕೂಡ ಜ್ಞಾನದ ಪ್ರಮುಖ ಶಾಖೆಗಳಿಗೆಲ್ಲ ಪ್ರವೇಶವಿದ್ದದ್ದು ಇಂಗ್ಲಿಷ್ ಭಾಷೆಯ ಮೂಲಕವೇ. ಈಗ ಹಾಗಲ್ಲ. ನನಗೆ ತಿಳಿದಂತೆ ಕನ್ನಡದ ಮೂಲಕವಾಗಿ ಜ್ಞಾನದ ಯಾವ ಶಾಖೆಯನ್ನಾದರೂ ಪರಿಚಯ ಮಾಡಿಕೊಳ್ಳುವಂತೆ ಗ್ರಂಥರಚನೆ ಕನ್ನಡದಲ್ಲಿ ನಡೆದಿದೆ. ಮೈಸೂರು ವಿಶ್ವವಿದ್ಯಾನಿಲಯ ತನ್ನ ಪ್ರಸಾರಾಂಗದ ಮೂಲಕ ಪ್ರಕಟಿಸಲಿರುವ "ಮುದ್ರಿತ ಕನ್ನಡ ಕೃತಿಗಳ ವಿವರಣಾತ್ಮಕ ಗ್ರಂಥಸೂಚಿ" ಹೊರಬಂದಾಗ ಈ ಮಾತಿನ ಅರ್ಥ ಮನದಟ್ಟಾದೀತು.

ಮಹಾತ್ಮಾ ಗಾಂಧೀಜಿಯವರು ಸಾರಿ ಸಾರಿ ಹೇಳಿದಂತೆ, ಇತರ ಶಿಕ್ಷಣತಜ್ಞರು ತರ್ಕಬದ್ಧವಾಗಿ ಮಂಡಿಸಿ ಪ್ರತಿಪಾದಿಸಿದಂತೆ, ದೇಶಭಾಷೆಗಳಲ್ಲಿ ಶಿಕ್ಷಣ ದೊರೆಯದಿದ್ದರೆ, ಈಗಾಗುತ್ತಿರುವಂತೆ, ವಿದ್ಯಾಭ್ಯಾಸ ಮರಳಿನ ಮೇಲೆ ಕಟ್ಟಿದ ಸೌಧವಾಗುತ್ತದೆ. ವಿಜ್ಞಾನವನ್ನು ತಾಂತ್ರಿಕ ಜ್ಞಾನವನ್ನೂ ಕನ್ನಡದಲ್ಲಿ ಹೇಳಲಾಗುವುದಿಲ್ಲ ಎಂಬುದು ಮಂದಮತಿಗಳ, ಅಲಸ ದುರ್ಬಲರ ಮತ್ತು ವಿದ್ಯಾದ್ರೋಹಿಗಳ ಕನವರಿಕೆ ಮತ್ತು ಅತ್ಯಂತ

ಹಾಸ್ಯಾಸ್ಪದವಾದ ತಲೆಹರಟೆ ಎಂಬುದನ್ನು ನಮ್ಮ ವಿದ್ವಾಂಸರು ತಮ್ಮ ಕನ್ನಡ ವೈಜ್ಞಾನಿಕ ಮತ್ತು ಮಾನವಿಕ ಗ್ರಂಥಗಳ ಮೂಲಕ ಸಾರಿ ಹೇಳಿದ್ದಾಗಿದೆ. ಪಾರಿಭಾಷಿಕ ಪದಗಳ ಅಭಾವವೇ ಪಠ್ಯಪುಸ್ತಕ ರಚನೆಗೆ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ವಿದ್ಯೆಯನ್ನು ಬೋಧಿಸುವುದಕ್ಕೆ ಇರುವ ದೊಡ್ಡ ಅಡ್ಡಿ ಎಂಬ ಪೇಲವಾದ ಹೇಳಿಕೆಗಳನ್ನು ಇನ್ನು ಮುಂದೆ ಗಮನಕ್ಕೆ ತೆಗೆದುಕೊಳ್ಳಬೇಕಾದದ್ದೇ ಇಲ್ಲ. ಆದಷ್ಟುಮಟ್ಟಿಗೆ ಅಂತರರಾಷ್ಟ್ರೀಯ ಪಾರಿಭಾಷಿಕ ಶಬ್ದಗಳನ್ನು ಹಾಗೆಯೇ ಉಳಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಅವಕ್ಕೆ ತದ್ಭವ-ತತ್ಸಮಗಳನ್ನು ಸ್ವಲ್ಪ ಶ್ರಮದಿಂದ ಸೃಷ್ಟಿಸುವುದೂ ಸಾಧ್ಯ ಎಂಬುದನ್ನು ನಮ್ಮ ವಿಜ್ಞಾನ ಲೇಖಕರು ತೋರಿಸಿಕೊಟ್ಟಿದ್ದಾರೆ. ಪ್ರಬುದ್ಧ ಕರ್ಣಾಟಕವು ತನ್ನ ಚಿನ್ನದ ಹಬ್ಬದ ಸಂದರ್ಭದಲ್ಲಿ ಪ್ರಕಟಿಸಿರುವ ೧೬೦೦ ಪುಟಗಳ ವಿಜ್ಞಾನ ವಿಶೇಷಾಂಕ ಇಂತಹ ಎಲ್ಲ ಸಮಸ್ಯೆಗಳಿಗೂ ಸಶಕ್ತವೂ ಸಚಿತ್ರವೂ ಆದ ಪರಿಹಾರರೂಪವಾಗಿ ನಿಂತಿದೆ.

ತನ್ನ ಅನೇಕ ಮಾಲಿಕೆಗಳ ಮೂಲಕ ಪ್ರಸಾರಾಂಗ ವಿಶ್ವವಿದ್ಯಾನಿಲಯದ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಅನೇಕ ಸಹಾಯಕ ಗ್ರಂಥಗಳನ್ನು ಒದಗಿಸುವುದರ ಜೊತೆಗೆ ಜನಸಾಮಾನ್ಯರ ಜ್ಞಾನತೃಷೆಯನ್ನು ಪೂರೈಸುವುದಕ್ಕಾಗಿ ಕೂಡ ಅನೇಕ ಗ್ರಂಥಗಳನ್ನು ಪ್ರಕಟಿಸುತ್ತಿದೆ.

ಈಗ ಹೊರಬರುತ್ತಿರುವ ಕೆ. ಎಸ್. ರಾಮೇಗೌಡ ಅವರ 'ನಗರ ಯೋಜನೆ' ಓದುಗರಿಗೆ ತುಂಬ ಉಪಯುಕ್ತವೂ, ಪ್ರಿಯವೂ ಆಗುತ್ತದೆಂದು ಆಶಿಸುತ್ತೇನೆ.

ಕೆ. ವಿ. ಪುಟ್ಟಪ್ಪ
ಪ್ರಧಾನ ಸಂಪಾದಕ

ಮೊದಲ ಮಾತು

ನಗರ ಮತ್ತು ಪ್ರಾದೇಶಿಕ ಯೋಜನೆಯ ವಿಷಯವಾಗಿ ನಾನು ಬರೆದ ಇಂಗ್ಲಿಷ್ ಪುಸ್ತಕವನ್ನು ಪ್ರಕಟಿಸುವ ವಿಷಯವಾಗಿ ಡಾ|| ಪ್ರಭು ಶಂಕರ ಅವರನ್ನು ಕಂಡು ಮಾತನಾಡುವಾಗ ಈ ವಿಷಯವಾಗಿ ಕನ್ನಡದಲ್ಲಿ ಏತಕ್ಕೆ ಒಂದು ಪುಸ್ತಕವನ್ನು ಬರೆಯಬಾರದೆಂದು ಅವರು ಸೂಚಿಸಿದರು. ಸಾಕಷ್ಟು ವಿಷಯವೇನೋ ಇತ್ತು. ಆದರೆ, ಜನರು ಓದುವ ರೀತಿಯಲ್ಲಿ ಬರೆಯುವ ವಿಷಯವಾಗಿ ನನಗೆ ಸ್ವಲ್ಪ ಅನುಮಾನವಿತ್ತು. ಡಾ|| ಪ್ರಭು ಶಂಕರ ಅವರ ಪ್ರೋತ್ಸಾಹ ಆ ಕೆಲಸವನ್ನು ನನ್ನಿಂದ ಮಾಡಿಸಿದೆ. ಹೊಸ ವಿಷಯದಂತೆ ಕಂಡರೂ, ಭಾರತದಲ್ಲಿ ಪುರಾತನ ಕಾಲದಿಂದಲೂ ಶಾಸ್ತ್ರೋಕ್ತ ವಾಗಿ ಬೆಳೆದು ಬಂದಿದ್ದ ನಗರ ಯೋಜನೆಯನ್ನು ಕುರಿತು ನನ್ನದೇ ಆದ ರೀತಿಯಲ್ಲಿ ಬರೆದಿದ್ದೇನೆ. ಗೃಹ ಸರಸ್ವತಿ ಮಾಲೆಯ ಧ್ಯೇಯವನ್ನು ಮನಸ್ಸಿ ನಲ್ಲಿಟ್ಟುಕೊಂಡು ಸಾಧ್ಯವಾದಷ್ಟು ಸುಲಭವಾದ ಭಾಷೆಯಲ್ಲಿ ಬರೆಯಲು ಪ್ರಯತ್ನಿಸಿದೆ. ಆದರೂ ಕೆಲವು ತಾಂತ್ರಿಕ ಪದಗಳಿಗೆ ಪೂರ್ಣ ಅರ್ಥವನ್ನು ಕೊಡಲು, ಕೆಲವು ಕಡೆ ಇಂಗ್ಲಿಷ್ ಪದಗಳನ್ನು ಬ್ರ್ಯಾಕೆಟ್‌ನೊಳಗೆ ಕೊಡ ಲಾಗಿದೆ. ಭಾಷಾಂತರದಲ್ಲಿ ದೋಷವಿದ್ದರೆ ಅದನ್ನು ಅನ್ಯಥಾ ಭಾವಿಸದೆ, ತಿದ್ದಿಕೊಂಡು ಓದಬೇಕೆಂದು ವಾಚಕರಲ್ಲಿ ವಿನಂತಿ.

ನಗರ ಯೋಜನೆಯ ವಿಷಯವಾಗಿ ಪಾಶ್ಚಾತ್ಯ ದೇಶಗಳಲ್ಲಿ ಸಾಕಷ್ಟು ಪುಸ್ತಕಗಳು ಹೊರ ಬಂದಿದ್ದರೂ, ನಮ್ಮ ದೇಶದಲ್ಲಿ, ಅದರಲ್ಲೂ ನಮ್ಮ ದೇಶ ಭಾಷೆಗಳಲ್ಲಿ, ಅಂತಹ ಪ್ರಯತ್ನ ಇರಲಿಲ್ಲವೆಂದೇ ಹೇಳಬಹುದು. ಬಹಳ ವೇಗವಾಗಿ ಬೆಳೆಯುತ್ತಿರುವ ಗ್ರಾಮ ಮತ್ತು ನಗರಗಳ ಸಮಸ್ಯೆಗಳನ್ನು ಸಾರ್ವಜನಿಕರು ಅರ್ಥಮಾಡಿಕೊಂಡು, ಅವುಗಳ ವ್ಯವಸ್ಥಿತ ಬೆಳವಣಿಗೆಗೆ ಪರೋಕ್ಷವಾಗಿಯಾದರೂ ಬೆಂಬಲ ಕೊಡಲು ಈ ಪುಸ್ತಕ ಸಹಾಯ ಮಾಡ ಬಹುದಾದರೆ ಮತ್ತು ನಗರ ಯೋಜನೆಯ ವಿಷಯವನ್ನು ಓದಿ ತಿಳಿದು ಕೊಳ್ಳಲು ಉಪಯೋಗವಾಗುವುದಾದರೆ ನನ್ನ ಪ್ರಯತ್ನ ಸಾರ್ಥಕ ವಾದಂತೆ.

ಇದು ನನ್ನ ಇಂಗ್ಲಿಷ್ ಪುಸ್ತಕದ ಭಾಷಾಂತರವಲ್ಲ. ಅದರಲ್ಲಿರುವ

ವಿಷಯಗಳೆಲ್ಲಾ ಇದರಲ್ಲಿರುವುದು ಸಾಧ್ಯವೂ ಇಲ್ಲ. ಏತಕ್ಕೆಂದರೆ ಎರಡು ಪುಸ್ತಕಗಳ ವಿಸ್ತಾರವೂ ಉದ್ದೇಶವೂ ಬೇರೆ ಬೇರೆ. ನಗರ ಯೋಜನೆಯನ್ನು ಅಭ್ಯಾಸ ಮಾಡುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೂ, ಈ ವಿಭಾಗದಲ್ಲಿ ನಿರತರಾಗಿರುವ ಕಾರ್ಯಕರ್ತರಿಗೂ ಉಪಯೋಗವಾಗುವ ಪುಸ್ತಕ ಇಂಗ್ಲಿಷ್‌ನಲ್ಲಿ ಬರೆದದ್ದು. ಗೃಹ ಸರಸ್ವತೀ ಮಾಲೆಯ ಓದುಗರು ಸಾಧಾರಣವಾಗಿ ಎಸ್.ಎಸ್.ಎಲ್.ಸಿ. ಮಟ್ಟದವರೆಂಬುದನ್ನು ಮನಸ್ಸಿನಲ್ಲಿಟ್ಟು ಸಾರ್ವಜನಿಕರ ಓದಿಗಾಗಿ ಬರೆದದ್ದು ಈ ಕನ್ನಡ ಪುಸ್ತಕ. ಮಾತೃಭಾಷೆಗೆ ಕಿಂಚಿತ್ ಸೇವೆಯನ್ನು ನಾನು ಸಲ್ಲಿಸಲು ಸಹಾಯಕರಾದ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ॥ದೇ. ಜವರೇಗೌಡರಿಗೂ, ಪ್ರಸಾರಾಂಗದಡೈರೆಕ್ಟರ್ ಡಾ॥ ಪ್ರಭುಶಂಕರ ಮತ್ತು ಅವರ ಸಹೋದ್ಯೋಗಿಗಳಿಗೂ ನನ್ನ ವಂದನೆಗಳು.

ಹಸ್ತ ಪ್ರತಿಯನ್ನು ಓದಿ, ತಿದ್ದಿ ಸಹಾಯ ಮಾಡಿದ ನನ್ನ ಸ್ನೇಹಿತರಾದ ಶ್ರೀ ವಿ. ಬಂಟ್ವಾಳ್ ಮತ್ತು ಶ್ರೀ ಎಸ್. ಸಿ. ಕರೀಗೌಡರಿಗೂ, ಚಿತ್ರಗಳನ್ನು ಬರೆಯುವಲ್ಲಿ ಸಹಾಯ ಮಾಡಿದ ಶ್ರೀ ಎ. ಜ್ಞಾನಸಭಾಪತಿಯವರಿಗೂ ಇತರ ಸಹಾಯವನ್ನು ನೀಡಿದ ನನ್ನ ಸ್ನೇಹಿತರಿಗೂ ನಾನು ಆಭಾರಿ. ಬಹಳ ಉತ್ಸಾಹದಿಂದ ಬಹಳ ಬೇಗ ಪುಸ್ತಕವನ್ನು ಅಂದವಾಗಿ ಅಚ್ಚುಮಾಡಿದ ಶ್ರೀ ಸದ್ಗುರು ಮುದ್ರಣಾಲಯದ ಮಾಲೀಕರಾದ ಶ್ರೀ ಸದಾಶಿವಮೂರ್ತಿ ಮತ್ತು ಅವರ ಮಗ ವಾಸುದೇವಮೂರ್ತಿ ಮತ್ತು ಇತರರಿಗೆ ನನ್ನ ಅಭಿನಂದನೆಗಳು.

ಕಡೆಯದಾದರೂ ಬಹಳ ಮಹತ್ವದ ಉಪಕಾರವನ್ನು ಮೈಸೂರು ಸರ್ಕಾರ ಮಾಡಿದೆ. ಪುಸ್ತಕವನ್ನು ಬರೆದು ಪ್ರಕಟಿಸಲು ನನಗೆ ಅಪ್ಪಣೆ ಕೊಟ್ಟದ್ದಕ್ಕಾಗಿ ಮೈಸೂರು ಸರ್ಕಾರಕ್ಕೆ ನಾನು ಋಣಿ. ಈ ಗ್ರಂಥದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ನನ್ನ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಎಲ್ಲವೂ ಮೈಸೂರು ಸರ್ಕಾರದ ಅಭಿಪ್ರಾಯಗಳಲ್ಲ.

ಬೆಂಗಳೂರು
 ೧-೩-೧೯೭೨

ಕೆ. ಎಸ್. ರಾಮೇಗೌಡ

ಪರಿವಿಡಿ

ವಿಷಯ	ಪುಟ

ಚಿತ್ರಗಳ ಸೂಚಿ

1. ನಗರ ರಚನೆಯ ಇತಿಹಾಸ

ಆದಿ ಮಾನವನಿಗೆ ತನ್ನ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಯಾವ ವಿಧಾನವೂ ತಿಳಿದಿರಲಿಲ್ಲ. ಬೆತ್ತಲೆ ತಿರುಗುವುದು, ಮರದ ಪೊಟರೆ ಅಥವಾ ಗುಹೆಗಳಲ್ಲಿ ವಾಸಿಸುವುದು, ಹಸಿ ಗಡ್ಡೆ ಗೆಣಸು ಮತ್ತು ಮಾಂಸ ವನ್ನು ತಿಂದು ಅಲೆಯುವುದು–ಇವೇ ಅವನ ನಿತ್ಯ ಜೀವನವಾಗಿತ್ತು ಸಹಸ್ರಾರು ವರ್ಷಗಳು ಕಳೆದ ಮೇಲೆ ಮಾನವನಿಗೆ ಬೆಂಕಿ ಉರಿಸುವ ರೀತಿ, ಕಲ್ಲಿನ ಆಯುಧಗಳನ್ನು ತಯಾರಿಸುವ ವಿಧಾನ, ನಾರನ್ನು ಮೈಗೆ ಸುತ್ತಿ ಕೊಳ್ಳುವುದು, ಮರಗಳನ್ನು ಜೋಡಿಸಿ ಬಿಸಿಲು ಚಳಿಗೆ ಮರೆಮಾಡಿಕೊಳ್ಳು ವುದು–ಇವು ಕ್ರಮೇಣ ತಿಳಿದುವು. ಆದ್ದರಿಂದಲೇ ಆದಿ ಮಾನವನು ಶೀತ ವಲಯಗಳಲ್ಲಿ ವಾಸಿಸದೆ ಸಮಭಾಜಕ ವೃತ್ತದ ನೇರದಲ್ಲೇ ಹೆಚ್ಚಾಗಿ ವಾಸಿಸಿದ್ದಾನೆ. ಉದಾಹರಣೆಗೆ, ನೈಲ್ ನದೀ ಪ್ರದೇಶ, ಯೂಪ್ರಟಿಸ್ –ಟೈಗ್ರಿಸ್ ಜಲಾನಯನ ಪ್ರದೇಶ, ಸಿಂಧೂ–ಗಂಗಾನದೀ ಪ್ರದೇಶ, ಮೆಕ್ಸಿಕೋ ದೇಶ-ಮುಂತಾದ ಕಡೆಗಳಲ್ಲಿ ಆದಿ ಮಾನವನ ಬೆಳವಣಿಗೆ, ನಾಗರಿಕತೆಯ ಉಚ್ಛ್ರಾಯಸ್ಥಿತಿಗಳನ್ನು ನಾವು ಈ ಪ್ರದೇಶಗಳಲ್ಲಿ ದೊರೆ ತಿರುವ ಅವಶೇಷಗಳಿಂದ ಹೆಚ್ಚಾಗಿ ಕಾಣಬಹುದು.


ಶಿಲಾಯುಗದ ಮಾನವನ ಆಸೆ ಅಭಿಲಾಷೆಗಳು ಹೆಚ್ಚಿದಂತೆ ಹೊಸ ಹೊಸ ವಿಧಾನಗಳು ಅವನಿಗೆ ಬಹಳ ನಿಧಾನವಾಗಿ ಹೊಳೆಯುತ್ತಾ ಬಂದುವು. ಬಿಲ್ಲು ಬಾಣಗಳನ್ನು ಕಂಡು ಹಿಡಿಯಲು ಅದೆಷ್ಟು ಸಾವಿರ ವರ್ಷಗಳ ಪ್ರಯಾಸವೋ ತಿಳಿಯದು. ಕಲ್ಲಿನ ಆಯುಧದಿಂದ ಲೋಹದ ಆಯುಧಕ್ಕೆ ಬರಬೇಕಾದರೆ ಇನ್ನೆಷ್ಟು ಸಾವಿರ ವರ್ಷಗಳು ಸಂದುವೋ!

ಆದರೂ ಮಾನವನ ಮನೋವಿಕಾಸ ನಡೆಯುತ್ತಲೇ ಇತ್ತು. ಇಂದೂ ನಡೆಯುತ್ತಿದೆ, ಮುಂದಕ್ಕೂ ಹಾಗೆಯೇ ನಡೆಯಲಿದೆ. ಶಿಲಾಯುಗದ ಅಂತ್ಯ ದಲ್ಲಿ ಕಲ್ಲಿನ ಆಯುಧದಿಂದಲೇ ಮರಗಳನ್ನು ಕಡಿದು, ಹಲಗೆಗಳನ್ನಾಗಿ ಕತ್ತ ರಿಸಿ ಚಿಕ್ಕಮನೆಯೊಂದನ್ನು 81 ದಿನಗಳಲ್ಲಿ ಜೋಡಿಸಲು ಆತ ಶಕ್ತಿ ಪಡೆದ ನಂತೆ! ಆದ್ದರಿಂದ ಅಂದಿನ ಮಾನವನು ತನಗೆ ಉಪಯುಕ್ತವಾದ ಮನೆ

ಯನ್ನು ಕಟ್ಟಲು ಪ್ರಾರಂಭಿಸಿ ಹಿಂದಿನ ಅನಾಗರಿಕ ಮಾನವನನ್ನು ಮೀರಿಸಿ, ಸುಖಜೀವನ ನಡೆಸಿ, ನಾಗರಿಕನಾಗಲು ಪ್ರಾರಂಭಿಸಿದನೆಂದು ಹೇಳಬಹುದು. ಇದು ಸುಮಾರು 25,000 ವರ್ಷಗಳ ಹಿಂದಿನ ಮಾತು. ಕ್ರಿ. ಪೂ. 3000ದ ಸುಮಾರಿಗೆ ಮಾನವನ ನಾಗರಿಕತೆ ಬೆಳೆದು, ಲೋಹಗಳ ಉಪಯೋಗ, ಮನೆಕಟ್ಟುವ ಕಲೆ, ದನ ಮತ್ತು ಕುದುರೆಗಳನ್ನು ಸಾಕಿ, ಅವುಗಳನ್ನು ಉಳುವುದಕ್ಕೂ ಬಂಡಿಗಳಿಗೆ ಕಟ್ಟುವುದಕ್ಕೂ ಉಪಯೋಗಿಸುವ ಜ್ಞಾನ ಆತನಲ್ಲಿ ಬೆಳೆದಿತ್ತು.ಆತನ ನಗರ ರಚನಾ ಕೌಶಲ್ಯವೂ ಅಭಿವೃದ್ಧಿಯಾಗಿತ್ತು.

ನದೀಪಾತ್ರ ನಾಗರಿಕತೆ

ಪುರಾತನ ಅವಶೇಷಗಳ ಪರಿಶೀಲನೆಗಳಿಂದ ಸುಮಾರು 5000 ವರ್ಷಗಳಿಗಿಂತ ಹಿಂದಿನ ನಗರಗಳ ರೀತಿ, ಅವುಗಳ ನಿರ್ಮಾಣ ಕಲೆ ಮತ್ತು ನಾಗರಿಕತೆಯ ಮಟ್ಟ ಇವೆಲ್ಲವೂ ಪ್ರಪಂಚಕ್ಕೆ ತಿಳಿದುವು. ಮುಖ್ಯವಾಗಿ ಈಜಿಪ್ಟ ದೇಶದ ಪಿರಮಿಡ್ಡುಗಳು,ದೇವಾಲಯಗಳು, ಮೆಸಪೊಟೇಮಿಯದ ಜಿಗರೆಟ್ಟುಗಳು, ಅರಮನೆಗಳು, ಮತ್ತು ನಗರಗಳು, ಇವುಗಳಿಂದ ಅಂದಿನ ಸ್ಥಿತಿ ಚೆನ್ನಾಗಿ ತಿಳಿದಿದೆ· ಇವಲ್ಲದೆ 'ಮಾಯಾ' ನಾಗರಿಕತೆಯ ಅವಶೇಷಗಳು, ಪಶ್ಚಿಮಾರ್ಧ ಗೋಳದಲ್ಲೂ ಮಾನವನು ಅದೇ ಸಮಯದಲ್ಲಿ ಅಭಿವೃದ್ಧಿ ಹೊಂದುತ್ತಿದ್ದನೆಂಬುದನ್ನು ತೋರಿಸುತ್ತವೆ. ನಮ್ಮ ಭಾರತ ದೇಶದ ಉದಾಹರಣೆಯನ್ನೆತ್ತಿಕೊಂಡರೆ, ಸಿಂಧೂನದೀಪಾತ್ರದಲ್ಲಿ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿದ್ದ ನಾಗರಿಕತೆಯ ಅವಶೇಷಗಳು ಬಹಳವಾಗಿ ದೊರೆತಿವೆ. ತಕ್ಷಶಿಲಾ, ಹರಪ್ಪ, ಮೊಹೆಂಜೊದಾರೋ ನಗರಗಳನ್ನು ಯೋಜಿತ ರೀತಿಯಲ್ಲಿ ಕಟ್ಟಲಾಗಿತ್ತು. ಮನೆಗಳನ್ನು ಇಟ್ಟಿಗೆಯಲ್ಲಿ ಕಟ್ಟಿರುವುದಲ್ಲದೆ ಹಲವು ಅಂತಸ್ತಿನ ಮನೆಗಳಿದ್ದುದು ಕಂಡುಬಂದಿದೆ. ರಸ್ತೆಗಳು ಅಗಲವಾಗಿಯೂ ಪೂರ್ವ –ಪಶ್ಚಿಮವಾಗಿ ಮುಖ್ಯ ಬೀದಿಗಳಿದ್ದು ಒಳ ಚರಂಡಿ ವ್ಯವಸ್ಥೆಗಳಿದ್ದುದೂ ಭೂಮಿಯೊಳಗೆ ಅಗೆದು ಹೊರಗೆಡಹಿರುವ ಅವಶೇಷಗಳಿಂದ ಕಾಣುತ್ತದೆ (ಚಿತ್ರ 1). ನಾಗರಿಕರ ಆವಶ್ಯಕತೆಗೆ ಬೇಕಾಗುವ ಸಾರ್ವಜನಿಕ ಮಂದಿರಗಳು. ಸ್ನಾನದ ಕೊಳಗಳು, ಧಾನ್ಯದ ಉಗ್ರಾಣ, ಗೋಪುರ, ಸಭಾಗೃಹ ಮತ್ತು ಕೋಟೆಗಳು ಮೊಹೆಂಜೊದಾರೊ, ನಗರದಲ್ಲಿದ್ದುದುಗೋಚರವಾಗು



ಚಿತ್ರ ೧. ಮೊಹೆಂಜೊದಾರೊ ಕೋಟೆಯನಕ್ಷೆ.

1. ವಿದ್ಯಾ ಸಂಸ್ಥೆ
2. ಕಲ್ಯಾಣಿ
3. ಧಾನ್ಯದ ಉಗ್ರಾಣ
4. ಉಗ್ರಾಣಕ್ಕೆ ಮೆಟ್ಟಲುಗಳು
5. ಗೋಪುರ
6. ಆಶ್ರಮ
7. ಸಭಾಂಗಣ
8. ಕೋಟೆ


ತ್ತದೆ. ರಸ್ತೆಗಳಿಗೂ ಇಟ್ಟಿಗೆಗಳನ್ನು ಹಾಸಿ ಚರಂಡಿಗಳನ್ನೂ ಇಟ್ಟಿಗೆಯಲ್ಲಿ ಕಟ್ಟುತ್ತಿದ್ದರಲ್ಲದೆ ರಸ್ತೆಗಳನ್ನು ಸಮಾನಾಂತರವಾಗಿಯೂ, ಗ್ರಿಡ್ ಮಾದರಿಯಲ್ಲಿ ಒಂದನ್ನೊಂದು ಸಂಧಿಸುವಂತೆಯೂ ವ್ಯವಸ್ಥೆ ಮಾಡಿದ್ದರು.

ಹೀಗೆಯೇ ನಗರ ನಿರ್ಮಾಣ ಕಲೆ ಮುಂದುವರಿದು, ಗ್ರೀಕರ ಕಾಲಕ್ಕೆ (ಕ್ರಿ. ಪೂ. 700 ರಿಂದ 146) ಇದು ಆಧುನಿಕತೆಯನ್ನು ಎತ್ತಿ ತೋರಿಸುವಂತಾಯಿತು. ಇಂದಿಗೂ ಕಾಣಬಹುದಾದ ಅಥೆನ್ಸ್‌ನಗರದ ಬಳಿಯಿರುವ ಹಳೆ ಅಗೋರ, ಹೊಸ ಅಗೋರ, ಅಲ್ಲದೆ ಇನ್ನೂ ಅನೇಕ ನಗರಗಳಲ್ಲಿ ಅಂದಿನ ಅಭಿರುಚಿ, ಜೀವನಕ್ರಮ ಮುಂತಾದುವನ್ನು ಕಾಣಬಹುದು. ಮುಂದೆ ಬಂದ ರೋಮನರಂತೂ (ಕ್ರಿ. ಪೂ. 146 ರಿಂದ ಕ್ರಿ. ಶ. 365), ಅಧಿಕಾರವನ್ನು ಪ್ರತಿಬಿಂಬಿಸುವ ನಗರ ನಿರ್ಮಾಣ ಕಲೆಯಲ್ಲಿ ಎತ್ತಿದ ಕೈ. ನೇಪಲ್ಸ್ ನಗರದ ಸಮೀಪದ ಪಾಂಪೈ ನಗರದ ಅವಶೇಷಗಳು ಮತ್ತು ರೋಂ ನಗರದ ಹಳೆ ಭಾಗಗಳನ್ನು ನೋಡಿದವರು ಅಂದಿನ ನಾಗರಿಕತೆಯ ಮಟ್ಟವನ್ನು ತಿಳಿದು ದಂಗು ಬಡಿದಂತಾಗುತ್ತಾರೆ.

ಭಾರತದಲ್ಲಿ ನಗರ ಯೋಜನೆ


ನಗರ ಯೋಜನೆಯ ಕಲೆ ಭಾರತದಲ್ಲಿ ಪುರಾತನ ಕಾಲದಿಂದಲೂ ರೂಢಿಯಲ್ಲಿದೆ. ಪುರಾತನ ಗ್ರಂಥಗಳಾದ ವಾಸ್ತುಶಾಸ್ತ್ರ, ಮಾನಸಾರ ಶಿಲ್ಪ ಶಾಸ್ತ್ರ ಮತ್ತು ಕೌಟಿಲ್ಯನ ಅರ್ಥಶಾಸ್ತ್ರ ಮುಂತಾದುವನ್ನು ಓದಿದರೆ ಪೂರ್ವ ಕಾಲದಲ್ಲಿ ನಗರ ಯೋಜನೆ ಎಷ್ಟು ಮುಂದುವರಿದಿತ್ತೆಂಬುದು ತಿಳಿಯುತ್ತದೆ. ನಗರದ ಆವಶ್ಯಕತೆಗಳನ್ನು ಪೂರೈಸುವ, ನಿವೇಶನಕ್ಕೆ ಹೊಂದುವ ಆಕಾರದಲ್ಲಿ ನಗರಗಳನ್ನು ಕಟ್ಟಲು ಕೆಲವು ಸ್ಥೂಲ ನಕ್ಷೆಗಳನ್ನು ತಯಾರಿಸಿದ್ದರು. ಅವುಗಳಲ್ಲಿ ಮುಖ್ಯವಾದುವುವೆಂದರೆ :

1. ದಂಡಕ(ಚಿತ್ರ 2)	5. ಸ್ವಸ್ತಿಕ
2. ಸರ್ವತೋಭದ್ರ	6. ಪ್ರಸ್ತಾರ
3. ಸಂದ್ಯಾವರ್ತ	7. ಕಾರ್ಮುಕ
4. ಪದ್ಮಕ (ಚಿತ್ರ 3)	8. ಚತುರ್ಮುಖ



ಚಿತ್ರ ೨. ಭಾರತದ ಪ್ರಾಚೀನ ನಗರಯೋಜನೆ—ದಂಡಕ ಮಾದರಿ

1. ವಿಷ್ಣುದೇವಸ್ಥಾನ 2. ಶಿವದೇವಸ್ಥಾನ
3. ಅಶ್ರಮ ಮತ್ತು ತೋಟಗಳು



ಚಿತ್ರ ೩. ಪದ್ಮಕ ಮಾದರಿಯ ನಗರಯೋಜನೆ.

1. ದೇವಸ್ಥಾನ
2. ಅರಮನೆ
3. ತರಕಾರಿ ಅಂಗಡಿಗಳು
4. ಮಾಂಸದ ಅಂಗಡಿಗಳು
5. ಇತರ ಸಾಮಾನುಗಳ ಅಂಗಡಿಗಳು
6. ಕೊಳ

ಮಾನಸ ಶಿಲ್ಪಶಾಸ್ತ್ರದ ಪ್ರಕಾರ, ನಿವೇಶನ ಮತ್ತು ಭೂ ಪರೀಕ್ಷೆ ಮಾಡುವ ವಿಧಾನ, ಸೂಕ್ತ ನಿವೇಶನದ ಲಕ್ಷಣಗಳನ್ನು ಕಂಡು ಹಿಡಿಯುವ ರೀತಿ—ಮುಂತಾದ ವಿವರಗಳೆಲ್ಲವೂ ಶಾಸ್ತ್ರೋಕ್ತವಾಗಿ ನಡೆಯಬೇಕಾಗಿದ್ದು, ರಸ್ತೆಗಳನ್ನು ನಿವೇಶನದಲ್ಲಿ ಗುರುತಿಸುವ ಕ್ರಮ, ಅವುಗಳ ಅಂತರ ಹಾಗೂ ವಿವರ, ಕಟ್ಟಡಗಳನ್ನು ಕಟ್ಟುವ ವಿಧಾನ, ಸಾಕಷ್ಟು ಗಾಳಿ ಬೆಳಕು ಬರ ಬೇಕಾದರೆ ಬೇರೆ ಬೇರೆ ಭಾಗಗಳು ನಿರ್ದಿಷ್ಟ ದಿಕ್ಕಿನಲ್ಲಿ ಇರಬೇಕಾದ

ಪ್ರಾಮುಖ್ಯತೆ-ಇವುಗಳನ್ನೆಲ್ಲ ವಿವರಿಸಲಾಗಿದೆ. ಉದಾಹರಣೆಗೆ 'ಕಾಲ ಪ್ರಕಾಶಿಕ' ಶಿಲ್ಪ ಶಾಸ್ತ್ರದ ರೀತ್ಯಾ, ವಾಸದ ಕೊಠಡಿಗಳು ಪಶ್ಚಿಮದಲ್ಲೂ ದೇವರ ಮನೆ ವಾಯುವ್ಯದಲ್ಲೂ, ಖಣಜಗಳು ಆಗ್ನೇಯದಲ್ಲೂ, ಅಡಿಗೆ ಮನೆ ಈಶಾನ್ಯದಲ್ಲೂ ಇರಬೇಕೆಂದು ನಿಬಂಧನೆ ಇದೆ. ಮನೆಗಳನ್ನು ಕಟ್ಟುವ ವಿಧಾನ, ಅಂಕಣ ರೀತಿಯಲ್ಲಿ (Modular System) ಕಟ್ಟಡವನ್ನು ವಿಭಾಗಿಸಿ, ನಿಟ್ಟು, ತೊಟ್ಟಿಮನೆ, ಮಹಡಿ ಮನೆಗಳು-ಮುಂತಾದುವನ್ನು ಕಟ್ಟುವ ರೀತಿಯನ್ನೂ ತಿಳಿಸಲಾಗಿದೆ. ಹಿಂದಿನ ಸಾಮಾಜಿಕ ಪದ್ಧತಿಗೆ ತಕ್ಕಂತೆ, ಬ್ರಾಹ್ಮಣರು ನಾಲ್ಕು ಭಾಗವೂ ಕಟ್ಟಲ್ಪಟ್ಟಿರುವ ಒಳ ಅಂಗಳದ ತೊಟ್ಟಿ ಮನೆಯನ್ನು ಕಟ್ಟಲು ಅವಕಾಶವಿತ್ತಂತೆ. ಕ್ಷತ್ರಿಯರು ತೊಟ್ಟಿ ಮನೆಯ ಮೂರು ಭಾಗವನ್ನೂ, ವೈಶ್ಯರು ಎರಡು ಭಾಗವನ್ನೂ ಕಟ್ಟಲು ಅವಕಾಶವಿತ್ತು. ಶೂದ್ರರು ಒಂದು ಸಾಲಿನ ನಿಟ್ಟನ್ನು ಮಾತ್ರ ಕಟ್ಟಬೇಕಾಗಿತ್ತಂತೆ. ಹಾಗೆಯೇ ಮನೆಗಳ ಅಂತಸ್ಥಿನಲ್ಲಿಯೂ ವ್ಯತ್ಯಾಸವಿತ್ತು. ಬ್ರಾಹ್ಮಣರು ನಾಲ್ಕು ಮಹಡಿ, ಕ್ಷತ್ರಿಯರು ಮೂರು ಮಹಡಿ, ವೈಶ್ಯರು ಎರಡು ಮಹಡಿ ಹಾಗೂ ಶೂದ್ರರು ಒಂದು ಅಂತಸ್ಥಿನ ಮನೆಗಳನ್ನು ಕಟ್ಟಿ ವಾಸಿಸಲು ಅನುಮತಿ ಇತ್ತಂತೆ! ಇದೆಲ್ಲವೂ ಪುರಾಣ ಕಥೆಯಂತೆ ಕಾಲ್ಪನಿಕವಾಗಿ ಕಂಡರೂ ಇದರಲ್ಲಿ ಒಂದು ವಿಧವಾದ ಶಿಸ್ತು ಅಡಗಿರುವುದನ್ನು ನಾವು ಕಾಣಬಹುದು. ಕಾಲ ಬದಲಾವಣೆಯಾದಂತೆ ಇವೆಲ್ಲವೂ ಮಾಯವಾಗಿ, ಈಗ ನಾವೇನೋ ನಮ್ಮ ನಮ್ಮ ಶಕ್ತಿಗನುಗುಣವಾಗಿ ಮನೆ ಕಟ್ಟಿಕೊಳ್ಳುತ್ತಿದ್ದೇವೆ.

ಹೀಗೆಯೇ ನಗರದಲ್ಲಿ ವಾಸಿಸಲೂ ಸಹ ಕೆಲವು ನಿಬಂಧನೆಗಳಿದ್ದವು. ದೇವಸ್ಥಾನವು ಊರಿನ ಮಧ್ಯದಲ್ಲಿದ್ದು, ಅದರ ಸುತ್ತಲೂ ಬ್ರಾಹ್ಮಣರಿಗೆ ವಾಸಿಸಲು ನಿವೇಶನಗಳನ್ನು ಕಾದಿರಿಸಲಾಗುತ್ತಿತ್ತು. ಇದೇ ರೀತಿ ಇತರರಿಗೂ ಬೇರೆ ಬೇರೆ ವಿಭಾಗಗಳಿದ್ದು, ಅವೆಲ್ಲವೂ ಮುಖ್ಯವಾಗಿ ಕಸಬನ್ನು ಅವಲಂಬಿಸುತ್ತಿದ್ದುವು. ಇಂದಿಗೂ ನಮ್ಮ ಹಳೇ ಪಟ್ಟಣಗಳಲ್ಲಿ ಈ ರೀತಿಯ ವಲಯ ವಿಭಾಗಗಳನ್ನು ನಾವು ಕಾಣಬಹುದು.

ಭಾರತದ ನಗರ ರಚನೆಯಲ್ಲಿ ಕೆಲವಂಶಗಳು ಎದ್ದು ಕಾಣುತ್ತಿದ್ದುವು. ಶಿಲ್ಪ ಶಾಸ್ತ್ರದಲ್ಲಿ-ಅಂಗಡಿಸಾಲು. ಬೀದಿಗಳು, ದೇವಸ್ಥಾನಗಳು, ಹಳ್ಳಿಗಳು ಅರಮನೆಗಳು, ವಾಸದ ಮನೆಗಳು, ಕ್ರೀಡಾಂಗಣಗಳು, ಕುಡಿಯುವ ನೀರಿನ

ವ್ಯವಸ್ಥೆ ಮತ್ತು ಉದ್ಯಾನವನಗಳು- ಇವುಗಳ ವಿವರಗಳೆಲ್ಲಾ ಬರೆಯಲ್ಪಟ್ಟಿವೆ. ನೀರಿನ ಆಸರೆ ಇರುವ ನದಿ ಪಾತ್ರ ಮತ್ತು ಜಲಾಶಯಗಳ ಹತ್ತಿರ ಇವು ನಿರ್ಮಾಣವಾಗಿವೆ. ಹೀಗೆ ರಚಿತವಾದ ನಗರಗಳಲ್ಲಿ ಅಯೋಧ್ಯೆ, ಇಂದ್ರ ಪ್ರಸ್ಥ, ಪಾಟಲೀಪುತ್ರ, ಮಧುರೆ, ಕಂಚೀಪುರ, ಕಾವೇರಿ ಪಟ್ಟಣಂ ಮುಂತಾದುವುಗಳ ದಾಖಲೆಗಳಿವೆ. ಈ ನಗರಗಳಲ್ಲಿ ಎಲ್ಲಾ ಅನುಕೂಲತೆ ಗಳೂ ಇದ್ದು, ಬೇರೆ ಬೇರೆ ಕಸಬಿನವರು ವಾಸಿಸಲು ಪ್ರತ್ಯೇಕ ವಿಭಾಗಗಳಿ ದ್ದುವು. ಇವು ಅನೇಕ ಚಕ್ರಾಧಿಪತ್ಯಗಳ ರಾಜಧಾನಿಗಳಾಗಿದ್ದು, ಅಂದಿನ ವಾಸ್ತುಶಿಲ್ಪಕ್ಕೆ ಪ್ರಸಿದ್ಧವಾಗಿದ್ದುವು. ಅಯೋಧ್ಯೆ ನಗರವು 5,500 ಮೀಟರ್ ಉದ್ದ ಮತ್ತು 1,400 ಮೀಟರ್ ಅಗಲವಿದ್ದು, ವಿಶಾಲವಾದ, ಅಂದವಾದ ರಸ್ತೆಗಳನ್ನು ಸ್ಥಳಕ್ಕೆ ಹೊಂದುವಂತೆಯೂ, ವಾಹನ ಸಂಚಾರಕ್ಕೆ ಯೋಗ್ಯ ವಾಗಿರುವಂತೆಯೂ ನಿರ್ಮಿಸಲಾಗಿತ್ತು. ರಸ್ತೆಯ ಇಕ್ಕೆಲದಲ್ಲಿಯೂ ಅಂದ ವಾದಕಟ್ಟಡಗಳಿದ್ದುವು. ಸಭಾಂಗಣಗಳು, ಚೌಕಗಳು ಮತ್ತು ಹೆಂಗಸರಿಗೆ ಪ್ರತ್ಯೇಕ ಉದ್ಯಾನಗಳು ಏರ್ಪಟ್ಟಿದ್ದುವು.

ಮೆಗಾಸ್ತನೀಸನು ವರ್ಣಿಸಿರುವ ಪಾಟಲೀಪುತ್ರನಗರವು 16 ಕಿ.ಮೀ. ಉದ್ದ ಮತ್ತು 3 ಕಿ.ಮೀ. ಅಗಲವಿದ್ದು ಆಳವಾದ ಕಂದಕದಿಂದ ಸುತ್ತುವರಿ ದಿತ್ತಂತೆ. ಅರುವತ್ತು ದ್ವಾರಗಳಿಂದ ಕೂಡಿದ ಕೋಟೆಯನ್ನು ಅಲ್ಲಿ ಕಟ್ಟ ಲಾಗಿತ್ತು. ಚಕ್ರವರ್ತಿಯ ಅರಮನೆ ನಗರದ ಮಧ್ಯದಲ್ಲಿದ್ದು, ದೊಡ್ಡ ಉದ್ಯಾನವನದಿಂದ ಆವರಿಸಿದ್ದು, ನೀರಿನ ಬುಗ್ಗೆಗಳು ಹಾಗೂ ಕೊಳಗಳಿಂದ ಕೂಡಿದ್ದಿತು.

ಪಾಂಡ್ಯರ ರಾಜಧಾನಿಯಾದ ಮಧುರೆಯೂ ಸಹ ಕೋಟೆಯಿಂದ ಸುತ್ತುವರಿದ ನಗರವಾಗಿತ್ತು. ನಗರದಲ್ಲಿ ವಾಸಿಸುವ ಜನರು ಅವರವರ ಕಸಬನ್ನನುಸರಿಸಿ, ಬೇರೆ ಬೇರೆ ರಸ್ತೆಗಳಲ್ಲಿ ವಾಸಿಸುತ್ತಿದ್ದರು. ರಾಜಮನೆತನ ದವರ ಬೀದಿ, ಪೇಟೆ ಬೀದಿ, ಅಕ್ಕಸಾಲಿಗರ ಬೀದಿ, ಬಟ್ಟೆ ಅಂಗಡಿ ಸಾಲಿನ ಬೀದಿ, ಹೀಗೆ ಬೇರೆ ಬೇರೆ ಬೀದಿಗಳಿದ್ದುವು. ನಗರವನ್ನು ಕಟ್ಟುವ ಮೊದಲು ಎಲ್ಲಾ ಪರೀಕ್ಷೆಗಳನ್ನೂ ನಡೆಸಿ,ದೇವಸ್ಥಾನವನ್ನು ಕೇಂದ್ರವಾಗಿಟ್ಟುಕೊಂಡು, ನಗರ ಯೋಜನೆಯ ನಕ್ಷೆ ತಯಾರಿಸಿ ಆ ಪಟ್ಟಣವನ್ನು ಕಟ್ಟಲಾಯಿತು. ಹೀಗೆಯೇ ಇನ್ನೂ ಅನೇಕ ನಗರಗಳನ್ನು ರಚಿಸಲಾಗಿತ್ತು.

ಮೊಗಲರ ನಗರಗಳು

ಮೊಗಲರು ಬರುವುದಕ್ಕೆ ಮೊದಲು ಮತ್ತು ಅವರು ಬಂದಮೇಲೆ ಕೆಲವು ಹೊಸ ನಗರಗಳು ನಿರ್ಮಿತವಾದುವು. ಅವುಗಳಲ್ಲಿ ಮುಖ್ಯವಾದುವು ದೆಹಲಿ, ಲಕ್ನೋ, ಲಾಹೋರ್ ಮತ್ತು ಫತೇಪುರ್‌ಸಿಖ್ರಿ. ಇವಲ್ಲದೆ, ಆಗ್ರಾ ಮುಂತಾದ ಕಡೆಗಳಲ್ಲಿ ಅನೇಕ ಕೋಟೆಕೊತ್ತಳಗಳನ್ನು ನಿರ್ಮಿಸಿ 'ಮೊಗಲರ ಉದ್ಯಾನವನಗಳು' ಎಂದು ಚರಿತ್ರಾರ್ಹವಾದ ಅಂದವಾದ ವನಗಳನ್ನೂ ಇವರು ನಿರ್ಮಿಸಿದರು. ಆದರೆ ಇವರು ನಗರ ಯೋಜನೆಗೆ ಯಾವ ನವೀನತೆಯನ್ನೂ ಸೇರಿಸದೆ, ಹಿಂದಿನ ಭಾರತೀಯ ಪದ್ಧತಿಯನ್ನೇ ಅನುಸರಿಸಿ, ಅವುಗಳನ್ನು ನಿರ್ಮಿಸಿದರು. ಇವರ ಕಾಲದ ನಗರಗಳಲ್ಲಿ ನಾವು ಕಾಣಬಹುದಾದ ವೈಶಿಷ್ಟ್ಯವೆಂದರೆ; ಅಧಿಕಾರವನ್ನು ಪ್ರತಿಬಿಂಬಿಸುವ ಕಲೆಯನ್ನು ಎತ್ತಿ ತೋರಿಸುವ ಮತ್ತು ಚಿತ್ತಾಕರ್ಷಕವಾದ, ಅರಮನೆಗಳು, ಕೋಟೆಗಳು, ಮಸೀದಿಗಳು ಮತ್ತು ಗೋರಿಗಳ ನಿರ್ಮಾಣ. ಆದರೆ ನಾಗರಿಕರ ಅನುಕೂಲಕ್ಕಾಗಿ ಇವರು ಅಷ್ಟೇನೂ ಗಮನ ಕೊಟ್ಟಂತಿಲ್ಲ. ಸಾರ್ವಜನಿಕರು ತಮ್ಮ ಅನುಕೂಲತೆಗಳನ್ನು ತಾವೇ ಪೂರೈಸಿಕೊಳ್ಳಲು ಬಿಟ್ಟುಬಿಡುತ್ತಿದ್ದರು. ಇದರಿಂದಾಗಿ ಕೋಟೆಯೊಳಗಿನ ನಗರ ಭಾಗಕ್ಕೂ ಹೊರಗಿನ ನಗರಭಾಗಕ್ಕೂ ಬಹಳ ಅಂತರವಿರುತ್ತಿತ್ತು.

ಮೊಗಲರ ನಗರ ನಿರ್ಮಾಣ ಅಧಿಕಾರ ದರ್ಪವನ್ನು ಪ್ರದರ್ಶಿಸಲು ಮತ್ತು ದುಂದು ಜೀವನ ನಡೆಸಲು ಬೇಕಾದ ಸಾಧನವಾಗಿತ್ತು. ನಗರದ ಬೆಳವಣಿಗೆಗೆ ಅವಶ್ಯವಾದ, ನೀರುಸರಬರಾಜು, ಜನಾರೋಗ್ಯ ಕ್ರಮಗಳು ಮತ್ತು ಸಾರ್ವಜನಿಕರ ಸಂರಕ್ಷಣೆ—ಇವುಗಳಕಡೆ ಹೆಚ್ಚು ನಿಗಾಕೊಡುತ್ತಿರಲಿಲ್ಲ. ಆದ್ದರಿಂದಲೇ ಅಕ್ಬರ್ ಚಕ್ರವರ್ತಿ ಆಗ್ರಾದ ಬದಲು ಅಲ್ಲಿಂದ ಪಶ್ಚಿಮಕ್ಕೆ 30 ಕಿ.ಮೀ. ಆಚೆ, ಹೊಸದಾಗಿ ಉತ್ತಮ ವಾಸ್ತುಶಿಲ್ಪದಿಂದ ಕೂಡಿದ ಫತೇಪುರ್‌ಸಿಖ್ರಿ ಎಂಬ ಮತ್ತೊಂದು ರಾಜಧಾನಿಯನ್ನು ನಿರ್ಮಿಸಿ, ಅಲ್ಲಿಗೆ ತನ್ನ ಪರಿವಾರದೊಡನೆ ಹೋಗಿ ನೆಲಸಿದರೂ ಸಹ, ಆ ನಗರವು ಕೆಲವೇ ವರ್ಷಗಳಲ್ಲಿ ನೀರಿನ ಅಭಾವಕ್ಕೀಡಾಗಿ ಪಾಳುಬಿದ್ದಿತು; ಅಕ್ಬರ್ ಪುನಃ ಆಗ್ರಾಕ್ಕೆ ಹಿಂದಿರುಗಬೇಕಾಯಿತು. ಇಂದಿಗೂ ಶಿಲ್ಪಕಲೆಗೆ ಹೆಸರಾದ ಫತೇಪುರ್ ಸಿಖ್ರಿ ನಗರ ಪಾಳುಬಿದ್ದಿರುವುದನ್ನು ಎಲ್ಲರೂ ನೋಡ

ಬಹುದು, ಕೋಟೆಯೊಳಗಿನ ಕಟ್ಟಡಗಳು ಬಹಳ ಭವ್ಯವಾಗಿ ಇಂದಿಗೂ ತಲೆಯೆತ್ತಿ ನಿಂತಿದ್ದರೂ ಸಹ ಕೋಟೆಯ ಹೊರವಲಯದಲ್ಲಿ ನಾಗರಿಕರು ವಾಸಿಸುತ್ತಿದ್ದ ಜಾಗದಲ್ಲಿ ಯಾವ ಕಟ್ಟಡಗಳೂ ಉಳಿಯದೆ ಪಾಳುಬಿದ್ದಿರುವುದನ್ನು ನೋಡಿದರೆ ಅಂದಿನ ರಾಜರು ತಮ್ಮ ವಾಸಸ್ಥಳಗಳಿಗೆ ಕೊಡುತ್ತಿದ್ದ ಅತಿಹೆಚ್ಚಿನ ಪ್ರಾಶಸ್ತ್ಯ, ತದ್ವಿರುದ್ಧವಾಗಿ ಇತರ ನಾಗರಿಕರು ವಾಸಮಾಡುತ್ತಿದ್ದ ಭಾಗಗಳಿಗೆ ತೋರುತ್ತಿದ್ದ ಸಂಪೂರ್ಣ ನಿರ್ಲಕ್ಷ್ಯ ಸ್ಪಷ್ಟವಾಗಿ ಕಾಣುತ್ತದೆ. ಆದರೆ. ಭಾರತದ ಚರಿತ್ರೆಯಲ್ಲೇ ಹೆಸರಾಂತ ಶಿಲ್ಪಕಲೆಗೆ ಮೊಗಲರ ಕೊಡುಗೆ ಅಪಾರ; ಅದಕ್ಕೆ ಭಾರತ ತೆತ್ತ ಬೆಲೆಯೂ ಅಪಾರವೇ!

ವಿಜಯನಗರ

ಇದೇ ಕಾಲಕ್ಕೆ ದಕ್ಷಿಣದಲ್ಲಿ ನಿರ್ಮಿತವಾದ ಒಂದು ಮುಖ್ಯ ನಗರವೆಂದರೆ ವಿಜಯನಗರ. ತುಂಗಭದ್ರಾ ನದೀತೀರದಲ್ಲಿ, ವಿರೂಪಾಕ್ಷ ದೇವಾಲಯದ ಸುತ್ತಲೂ ಈ ನಗರವು ಬೆಳೆದು ಅಂತರರಾಷ್ಟ್ರೀಯ ಖ್ಯಾತಿಗಳಿಸಿತ್ತು. ಪೋರ್ಚುಗೀಸ್ ಸಂಚಾರಿಗಳು ವರ್ಣಿಸಿರುವಂತೆ ಈ ನಗರದ ವೈಭವವನ್ನು ನೋಡಿ ಆನಂದಿಸುವುದೇ ಜೀವನದಲ್ಲಿ ಪರಮ ಶ್ರೇಷ್ಠ ಕಾರ್ಯವೆಂದು ಆಗ ಪರಿಗಣಿಸಲಾಗಿತ್ತು. ವ್ಯಾಪಾರ. ರಾಜ್ಯಾಡಳಿತ. ಸೈನ್ಯ ಕಾರ್ಯಾಚರಣೆ, ನಾಗರಿಕ ಜೀವನ, ಅಲ್ಲದೆ ಲಲಿತ ಕಲೆಗಳಿಗಾಗಿ ಅನೇಕ ಭವನಗಳು ನಿರ್ಮಿತವಾಗಿದ್ದು ಜನರು ತುಂಬು ಜೀವನ ನಡೆಸಲು ನಗರದಲ್ಲಿ ಎಲ್ಲಾ ಏರ್ಪಾಡುಗಳೂ ಇದ್ದುವಂತೆ. ಆದರೆ ಬಹಮನಿ ರಾಜ್ಯಗಳ ಧಾಳಿಗೆ ಸಿಕ್ಕಿ ನುಚ್ಚುನೂರಾದ ಈ ಮಹಾನಗರದ ಜಾಗದಲ್ಲಿ ಇಂದು ಪಾಳು ಹಂಪೆಯನ್ನು ನಾವು ನೋಡುತ್ತೇವೆ. ಅಲ್ಲಲ್ಲೇ ಅಳಿದುಳಿದಿರುವ ಕಟ್ಟಡದ ಭಾಗಗಳನ್ನೂ ಕೋಟೆಯ ಗೋಡೆಗಳನ್ನೂ ಅರಮನೆಗಳ ಮತ್ತು ದೇವಾಲಯಗಳ ಅವಶೇಷಗಳನ್ನೂ ನೋಡಿದರೆ, ವಿಜಯನಗರವು ಎಷ್ಟು ಸಂಭ್ರಮದ ಜೀವನ ಸಾಗಿಸಿತ್ತೆಂಬುದು ಸ್ಪಷ್ಟವಾಗುವುದು. ಈ ನಗರದ ರಚನಾ ಕೌಶಲ್ಯವು ಸ್ಥಳೀಯ ಜ್ಞಾನದಿಂದ ಮೂಡಿ ಬಂದಿದ್ದೆಂದು ಚೆನ್ನಾಗಿ ತೋರುತ್ತದೆ. ನಗರದ ಜನಸಂಖ್ಯೆ 16ನೇ ಶತಮಾನದಲ್ಲಿ ಸುಮಾರು 2 ಲಕ್ಷದಿಂದ 5 ಲಕ್ಷದಷ್ಟು ಇದ್ದಿತೆಂದರೆ ಅಂದಿನ ನಾಗರಿಕತೆಯ ಮಟ್ಟವು ತಿಳಿಯುವುದು.

ಹದಿನೆಂಟನೇ ಶತಮಾನದಲ್ಲಿ ನಿರ್ಮಿತವಾದ ಜಯಪುರವು ನಗರ ಯೋಜನೆಯಲ್ಲಿ ಭಾರತದ ಪ್ರಗತಿಯನ್ನು ಎತ್ತಿ ತೋರಿಸುತ್ತದೆ. ಇಮ್ಮಡಿ ಜಯಸಿಂಗ್ ಮಹಾರಾಜ ಕಟ್ಟಿಸಿದ ಈ ನಗರ. ಬಹಳ ಎಚ್ಚರಿಕೆ ವಹಿಸಿ ನಕ್ಷೆಗನುಗುಣವಾಗಿ ನಡೆಸಿದ ಶ್ರಮದ ಫಲವಾಗಿದೆ. ಹೊಸ ಅರಮನೆಯ ಸುತ್ತಲೂ ಈ ನಗರವನ್ನು ನಿರ್ಮಿಸಿ ಹೊರಭಾಗದಲ್ಲಿ ಕೋಟೆಯು ಸುತ್ತು ವರಿಯುವಂತೆ ಮಾಡಲಾಗಿದೆ. ರಸ್ತೆಗಳು ನೇರವಾಗಿಯೂ, ಅಗಲವಾಗಿಯೂ ಮತ್ತು ಗ್ರಿಡ್ ಮಾದರಿಯಲ್ಲಿಯೂ ರಚಿತವಾಗಿವೆ. ಭಾರತದ ಇತರ ಹಳೆ ನಗರಗಳ ಕಿರಿದಾದ ರಸ್ತೆಗಳಿಗೆ ಹೋಲಿಸಿದರೆ, ಜಯಪುರವು ಒಂದು ಅಸಾ ಧಾರಣ ನಿರ್ಮಾಣ ಕಲೆಯಾಗಿ ಕಾಣುತ್ತದೆ. ಭಾರತೀಯ ಶಿಲ್ಪಶೈಲಿಯಲ್ಲಿ ನಿರ್ಮಿತವಾಗಿರುವ ಅರಮನೆಗಳು, ಕೋಟೆ ಕೊತ್ತಳಗಳು ಮತ್ತು ಸರ್ಕಾರಿ ಕಟ್ಟಡಗಳು. ದೊಡ್ಡ ದೊಡ್ಡ ರಾಜಬೀದಿಗಳಲ್ಲಿದ್ದು, ನಗರಕ್ಕೆ ಹೆಚ್ಚು ಕಳೆಯನ್ನು ಕೊಟ್ಟಿರುವುದಲ್ಲದೆ ನಗರ ರಚನಾ ಕೌಶಲ್ಯವನ್ನು ಎತ್ತಿತೋರಿ ಸುತ್ತಿವೆ.

ಆಂಗ್ಲರ ಆಗಮನ

ಭಾರತದಲ್ಲಿ ಬೆಳೆದು ಬಂದ ನಗರ ರಚನಾ ಕಲೆ ಆಂಗ್ಲರು ಇಲ್ಲಿಗೆ ಬಂದಮೇಲೆ ಸುಪ್ತಗತಿಯನ್ನು ಹೊಂದಿತು. ವೈಜ್ಞಾನಿಕ ಮನೋಭಾವದ ಆಂಗ್ಲರಿಗೆ, ವೈಜ್ಞಾನಿಕ ರೀತಿಯಲ್ಲಿ ಬೆಳೆದು ಬಂದಿದ್ದ ಭಾರತದ ನಗರ ಯೋಜನಾ ವಿಧಾನ ಅರ್ಥವಾಗಲಿಲ್ಲವೋ ಅಥವಾ ಭಾರತೀಯರೆಲ್ಲಾ ಅನಾಗರಿಕರು, ಅವರ ನಗರಗಳ ಪರಿಸ್ಥಿತಿ ಶೋಚನೀಯವಾಗಿರುವುದೇ ಅವರ ಅಜ್ಞಾನದ ಕುರುಹೆಂದು ಭಾವಿಸಿದರೋ, ಹೇಳುವುದು ಕಷ್ಟ. ಪರ ಕೀಯ ಧಾಳಿಗೀಡಾಗಿದ್ದ ಭಾರತೀಯರ ಕಡುಬಡತನ ಅವರ ಮನೆಗಳ ವಿಕಾರ ರೂಪದಿಂದ ಎದ್ದು ಕಾಣುತ್ತಿತ್ತು. ಆದರೆ ಭೂಮಿಯ ಮೇಲ್ಮೈಗೆ ಅಂಟಿದಂತಿದ್ದ ರಸ್ತೆಗಳು, ಉದ್ಯಾನಗಳು, ಕೆರೆಕಟ್ಟೆಗಳು. ಕೋಟೆ, ದೇವಾ ಲಯಗಳು-ಇವುಗಳ ರಚನಾ ಕೌಶಲ್ಯವನ್ನು ಆಂಗ್ಲರುಅರಿಯಲು ನಗರದನಕ್ಷೆ ಗಳೇ ಇರಲಿಲ್ಲ. ಇವುಗಳೆಲ್ಲಾ ಹಳೆಯ ಮನೆಗಳಿಂದಲೂ, ಗುಂಡಿಗಳಿಂದಲೂ, ಕೊಳಕಿನಿಂದ ತುಂಬಿದ ರಸ್ತೆಗಳಿಂದಲೂ ಮರೆಮಾಡಲ್ಪಟ್ಟಿದ್ದುವು, ಪರಿಕೀ

ಯರೂ ಮತ್ತು ದೇಶಭಾಷೆ ತಿಳಿಯದವರೂ ಆದ ಆಂಗ್ಲರು ಇದನ್ನೆಲ್ಲಾ ಅರಿಯಲು ಒಂದು ಶತಮಾನವೇ ಬೇಕಾಯಿತು. ಅಲ್ಲಿಯ ತನಕ ಅವರು ಬಂದು ನೆಲೆಸಲು ಹೊಸ ನಗರಗಳೂ, ಹಳೆ ನಗರಗಳಿಗೆ ಹೊಂದಿದಂತೆ ನಗರ ಬಡಾವಣೆಗಳೂ ನಿರ್ಮಾಣವಾಗಲೇಬೇಕಾಗಿತ್ತು. ಸರಿ, ಇಂಗ್ಲೆಂಡಿನಿಂದ ಬಂದರು– ಇಂಜಿನೀಯರುಗಳು, ಶಿಲ್ಪಿಗಳು ಮತ್ತು ಮೇಲ್ವಿಚಾರಕರು. ಐರೋಪ್ಯರ ನಗರ ರಚನಾ ವಿಧಾನದಲ್ಲಿ ಇಂಗ್ಲೀಷ್ ಜನರ ವಾಸಕ್ಕೆ ಕಂಟೋನ್‌ಮೆಂಟ್ ನಗರಗಳು ನಿರ್ಮಿತವಾದವು. ಭಾರತದ ರಾಜಧಾನಿಯಾಗಿ ಕಲ್ಕತ್ತಾ ರೂಪಿತವಾಯಿತು. ಮುಂಬಯಿ, ಮದ್ರಾಸ್ ಮುಂತಾದ ಗೌರ್ನರ್ ಆಡಳಿತ ಕೇಂದ್ರಗಳ ರಚನೆಯಾಯಿತು. ದೇಶೀಯ ಪಟ್ಟಣಗಳಿಗೆ ಲಗತ್ತಿಸಿದಂತೆ, ಆದರೆ ಮಧ್ಯೆ ದೊಡ್ಡ ಮೈದಾನ ಪ್ರದೇಶವನ್ನು ಬಿಟ್ಟು, ಕಂಟೋನ್‌ಮೆಂಟ್ ಎಂಬ ಹೊಸ ನಗರಗಳ ನಿರ್ಮಾಣ, ಬೆಂಗಳೂರು, ಹೈದರಾಬಾದ್, ಪೂನ, ದೆಹಲಿ, ಆಗ್ರಾ, ಅಂಬಾಲ, ಲಾಹೋರ್ ಮುಂತಾದ ಕಡೆಗಳಲ್ಲೆಲ್ಲಾ ಆಯಿತು. ಹಳೆನಗರ ಮತ್ತು ಹೊಸ ಕಂಟೋನ್‌ಮೆಂಟ್ ನಗರ (ದಂಡು) ಇವುಗಳಿಗೆ ಹೋಲಿಸಿ ನೋಡಿದರೆ ವ್ಯತ್ಯಾಸ ಎದ್ದು ಕಾಣುತ್ತದೆ. ಹೀಗೆಯೇ 1911 ರಲ್ಲಿ ರಾಜಧಾನಿ ಕಲ್ಕತ್ತದಿಂದ ದೆಹಲಿಗೆ ಬದಲಾವಣೆಯಾದಾಗ ಹಳೆ ದೆಹಲಿಯ ಉತ್ತರ ಭಾಗದಲ್ಲಿ ಹೊಸ ಬಡಾವಣೆ ನಿರ್ಮಿಸಿ ಅಲ್ಲಿಗೆ ಮೊದಲು ಬ್ರಿಟಿಷರು ಬಂದು ನೆಲೆಸಿದರು. ಆಮೇಲೆ ಹಳೆ ದೆಹಲಿಯ ದಕ್ಷಿಣ ಭಾಗದಲ್ಲಿ, ಎಂಟು ಪುರಾತನ ದೆಹಲಿಗಳು ಬೆಳೆದಿದ್ದ ತಾಣದಲ್ಲೇ, ಹೊಸ ದೆಹಲಿ ನಗರ ನಿರ್ಮಿತವಾಯಿತು. ಭಾರತದ ರಾಜಧಾನಿ ಹೊಸ ದೆಹಲಿ ಇಂದು ಆಕರ್ಷಣೀಯ ನಗರವಾಗಿ ಬೆಳೆಯುತ್ತಿದೆ. ಈ ನಗರವನ್ನು ಲೂಟಿಯನ್ಸ್ ಚಕ್ರಾಕಾರದಲ್ಲಿ, ಕನ್ನಾಟ್‌ಸರ್ಕಸ್ಸನ್ನು ಕೇಂದ್ರವಾಗಿಟ್ಟುಕೊಂಡು ನಿರ್ಮಿಸಿದ್ದಾನೆ.

ಆಧುನಿಕ ಮಾನವನ ಆಕಾಂಕ್ಷೆ ಬೆಳೆಯುತ್ತಲೇ ಇದೆ. ಇದರ ಪರಿಣಾಮವೇ ಸ್ವಾತಂತ್ರ್ಯದ ಅನಂತರ ನೆಹರೂರವರ ನೇತೃತ್ವದಲ್ಲಿ ನಿರ್ಮಿತವಾದ ಚಾಣಕ್ಯ ಪುರಿ ಎಂಬ ರಾಯಭಾರಿಗಳನಗರ. ದೆಹಲಿಯ ಪಶ್ಚಿಮದಲ್ಲಿ ಎಲ್ಲಾ ರಾಷ್ಟ್ರಗಳ ರಾಯಭಾರಿಗಳ ಕಛೇರಿಗಳಿಗೂ ನಮ್ಮ ದೇಶದ ವಿವಿಧ ರಾಜ್ಯಗಳ ಅತಿಥಿ ಗೃಹಗಳಿಗೂ ಇಲ್ಲಿ ಸ್ಥಳಾವಕಾಶ ಮಾಡಿ, ಉದ್ಯಾನ

ಗಳ ನಗರದಂತೆ ನಿರ್ಮಾಣವಾಗಿರುವ ಚಾಣಿಕ್ಯ ಪುರಿಯಲ್ಲಿ ಆಧುನಿಕ ಶಿಲ್ಪ ಕಲೆಗೆ ಹೆಸರಾಂತ ಅನೇಕ ಭವನಗಳು ನಿರ್ಮಾಣವಾಗುತ್ತಿವೆ.

ಇಂತಹ ಮತ್ತೊಂದು ನಗರ, ಭುವನೇಶ್ವರ, ಒರಿಸ್ಸಾದ ಹೊಸ ರಾಜಧಾನಿ. ಇದೂ ಸಹ ಪಾಶ್ಚಾತ್ಯ ಶಿಲ್ಪಿಯಿಂದ ರಚಿತವಾಗಿದೆ. ಆದರೆ, ಹಳೆನಗರ ಮತ್ತು ಪ್ರಸಿದ್ಧ ದೇವಾಲಯಗಳನ್ನು ನಗರ ಯೋಜನೆಯಿಂದ ಹೊರಗುಳಿಸಿರುವುದರಿಂದ ಹೊಸ ನಗರ ಕಾಲ್ಪನಿಕವಾಗಿ ಕಾಣುತ್ತಿದೆ. ಈ ನಗರ ಇನ್ನೂ ಬೆಳೆಯಬೇಕಾಗಿದೆ ಮತ್ತು ಮಾರ್ಪಾಟಾಗಬೇಕಾಗಿದೆ.

ಪಂಜಾಬಿಗೆ ರಾಜಧಾನಿಯನ್ನು ನಿರ್ಮಿಸುವ ಕೆಲಸ 1959 ರಲ್ಲಿ ಪ್ರಾರಂಭವಾಯ್ತು. ಫ್ರೆಂಚ್ ಶಿಲ್ಪಿ ಲಾ ಕಾರ್ಬುಸೇ ಅವರ ಶಿಲ್ಪಿಕಲೆಯ ಪ್ರತಿಫಲ ಚಂದೀಘರ್ ನಗರ. ಸುಮಾರು 5 ಲಕ್ಷ ಜನರಿಗಾಗಿ ನಿರ್ಮಿಸಿ ರುವ ಈ ಹೊಸ ರಾಜಧಾನಿ ಪಾಶ್ಚಾತ್ಯ ರೀತಿಯಲ್ಲಿದ್ದರೂ, ಆಧುನಿಕ ಮಾನವ—ಅವನು ಭಾರತೀಯನಾಗಲಿ, ಪರಕೀಯನಾಗಲಿ—ಬಯಸುವ ನಾಗರಿಕ ಸೌಲಭ್ಯಗಳೆಲ್ಲದರಿಂದಲೂ ಕೂಡಿ ಶೋಭಿಸುತ್ತಿದೆ. ಭಾರತೀಯ ಶಿಲ್ಪಿಗಳನ್ನೂ, ತಂತ್ರಜ್ಞರನ್ನೂ, ಯೋಚಿಸಿ ಕೆಲಸ ಮಾಡುವಂತೆ ಹುರಿದುಂಬಿ ಸಿರುವ ಕೆಲವೇ ಆಧುನಿಕ ಸಾಧನೆಗಳಲ್ಲಿ ಚಂದೀಘರ್ ಘಟಕವೂ ಒಂದು.

ಇತ್ತೀಚೆಗೆ, ಅಂದರೆ 1970 ರಲ್ಲಿ, ಗುಜರಾತಿನ ರಾಜಧಾನಿ ಗಾಂಧಿ ನಗರ ಅಹಮುದಾಬಾದಿಗೆ 25 ಕಿ.ಮಿ. ಆಚೆ ನಿರ್ಮಾಣವಾಗಿದೆ. ಭಾರತೀ ಯರೇ ರಚಿಸಿರುವ ಈ ಹೊಸ ನಗರ ಪಾಶ್ಚಾತ್ಯ ವಿಧಾನಗಳನ್ನು ಬಳಸಿ ಕಾಲಕ್ಕೆ ಹೊಂದುವಂತೆ ಆಧುನಿಕವಾಗಿ ನಿರ್ಮಾಣವಾಗಿದೆ. ಪಾಂಡುಚೇರಿಯ ಬಳಿ ಶ್ರೀ ಅರವಿಂದಾಶ್ರಮದ ಆಶ್ರಯದಲ್ಲಿ ಅರೋವಿಲ್ ಎಂಬ ಉಪನಗರ ನಿರ್ಮಾಣವಾಗುತ್ತಿದ್ದು, ಮಾನವನ ಪಾರಮಾರ್ಥಿಕ ಧ್ಯೇಯವನ್ನು ನಿರೂಪಿ ಸುವ ದೃಷ್ಟಿಯಿಂದ ಅದನ್ನು ಕಟ್ಟಲಾಗುತ್ತಿದೆ.

ಕೈಗಾರಿಕಾಕ್ರಾಂತಿ

18 ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಪ್ರಾರಂಭವಾದ ಕೈಗಾರಿಕಾ ಕ್ರಾಂತಿ, ಬ್ರಿಟಿಷರೊಂದಿಗೆ ಭಾರತವನ್ನೂ ಪ್ರವೇಶಿಸಿತು. ದೊಡ್ಡ ದೊಡ್ಡ ಕೈಗಾರಿಕೆಗಳು ಸ್ಥಾಪಿತವಾದಂತೆ ಕಾರ್ಮಿಕರೂ, ವಾಣಿಜ್ಯೋದ್ಯಮಿಗಳೂ,

ಇತರ ಕಸಬಿನವರೂ ಅಂತಹ ಕೈಗಾರಿಕಾ ನಗರಗಳಿಗೆ ವಲಸೆ ಬಂದು ನೆಲೆಸುವುದು ಪ್ರಾರಂಭವಾಯಿತು. ಕಾರ್ಮಿಕರಂತೂ ಕೈಗಾರಿಕೆಗೆ ಹತ್ತಿರದಲ್ಲೇ ನೆಲೆಸಲು ಪ್ರಾರಂಭಿಸಿ ಜನಸಂದಣಿ ಹೆಚ್ಚುವಂತಾಯಿತು. ತತ್ಪರಿಣಾಮವಾಗಿ ಅನಾರೋಗ್ಯ ಪರಿಸ್ಥಿತಿ,ಕೊಳಚೆ ಪ್ರದೇಶಗಳ ನಿರ್ಮಾಣ ಮತ್ತು ಘೋರ ವ್ಯಾಧಿಗಳ ಉಪಟಳ ಪ್ರಾರಂಭವಾದುವು. ಜಲ ಮತ್ತು ವಾಯುವಿನಲ್ಲಿ ಕೈಗಾರಿಕೆಯ ಹೊಗೆ ಮತ್ತು ವಿಷಮಿಶ್ರಿತ ಕೊಳಚೆ ಸೇರಿ ನಗರ ನೈರ್ಮಲ್ಯ ವಿಪರೀತವಾಗಿ ಕೆಡುವಂತಾಯಿತು. ಜನಸಂದಣಿ ಹೆಚ್ಚಿದಂತೆ ನಗರಗಳೂ ಸಹ ವಿಶಾಲವಾಗಿ ಬೆಳೆಯುತ್ತಾ ಬಂದು, ನಾಗರಿಕರಿಗೆ ಬೇಕಾದ ಸಾಧಾರಣ ಆವಶ್ಯಕತೆಗಳ ಪೂರೈಕೆಯಲ್ಲೂ ಕೊರತೆಯುಂಟಾಯಿತು. ಕುಡಿಯುವ ನೀರಿನ ವ್ಯವಸ್ಥೆ, ಶಾಲೆ, ಆಸ್ಪತ್ರೆ ಮುಂತಾದ ಸೌಕರ್ಯ, ಒಳಚರಂಡಿ, ದೀಪ, ಸಾರಿಗೆ ಮೊದಲಾದ ಸೌಲಭ್ಯ—ಯಾವುದೂ ಸಾಲದೆ, ಜನರಿಗೆ ನಗರ ಜೀವನ ಬೇಸರ ತರುವಂತಾಯಿತು. ಆದರೂ, ಗ್ರಾಮಾಂತರ ಪ್ರದೇಶದಲ್ಲಿ ಕಡು ಬಡತನದ ಕಹಿಯನ್ನುಂಡ ಈ ಜನರಿಗೆ ಎಷ್ಟೇ ತೊಂದರೆಯಿದ್ದರೂ, ಸಂಪಾದನೆಗೆ ಮಾರ್ಗ ತೋರಿಸುವ ನಗರಗಳ ಕಡೆಗೆ ಆಕರ್ಷಣೆ ಕಡಿಮೆಯಾಗಲಿಲ್ಲ. ಕಲ್ಕತ್ತ, ಮುಂಬಯಿ, ಮದರಾಸು, ಬೆಂಗಳೂರು, ಮುಂತಾದ ನಗರಗಳಲ್ಲಿ ಹೆಚ್ಚು ಕೈಗಾರಿಕೆಗಳು ಸ್ಥಾಪಿತವಾಗಲು ಆರಂಭವಾಯಿತು. ಇದಲ್ಲದೆ ಹೊಸ ಕೈಗಾರಿಕಾ ನಗರಗಳೂ, ರೈಲ್ವೇ ಕೇಂದ್ರಗಳೂ, ಬಂದರುಗಳೂ ಬೆಳೆಯಲು ಪ್ರಾರಂಭಿಸಿದುವು. ಈ ರೀತಿ ನಗರಗಳಲ್ಲಿ ಒಂದೇ ಸಮನೆ ಹೆಚ್ಚುತ್ತಿರುವ ಜನಸಂಖ್ಯೆಯ ಒತ್ತಡದಿಂದ ಉದ್ಭವಿಸುವ ಪರಿಸ್ಥಿತಿಯ ಪರಿಹಾರಕ್ಕೆ ಸೂಕ್ತ ಕ್ರಮಗಳನ್ನು ಕುರಿತು ಸರ್ಕಾರವೇ ಆಲೋಚಿಸುವುದು ಆವಶ್ಯವೆನಿಸಿತು. ಇಂಗ್ಲೆಂಡಿನಲ್ಲಿ ಬೃಹದಾಕಾರದಲ್ಲಿ ಬೆಳೆದಿದ್ದ ಈ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದ ಬ್ರಿಟಿಷರಿಗೆ ಅದೇ ಪರಿಹಾರ ಕ್ರಮಗಳನ್ನು ಭಾರತದಲ್ಲೂ ಪ್ರಯೋಗಿಸಲು ಅನುಕೂಲವಾಯ್ತು. ಆದರೆ, ಜನರ ವಿದ್ಯಾಮಟ್ಟದ ವ್ಯತ್ಯಾಸದ ಕಾರಣ, ಈ ಪ್ರಯತ್ನಗಳು ಎಲ್ಲಾ ಕಡೆಗೂ ಹಬ್ಬಲು ಸಾಧ್ಯವಾಗಲಿಲ್ಲ. ಆದರೂ ಈ ಪ್ರಯತ್ನ ಮುಂದುವರಿಯುತ್ತಲೇ ಬಂತು.

ಈ ಕೆಳಗೆ ವಿವರಿಸಿರುವುದು 19 ನೇ ಶತಮಾನದ ಮಧ್ಯಭಾಗದಿಂದ ಇಂದಿನ ವರೆಗೂ ನಡೆದಿರುವ ಪ್ರಯತ್ನಗಳ ಪಕ್ಷಿನೋಟ.

ನಗರಾಭಿವೃದ್ಧಿ ಕಾರ್ಯಕ್ರಮ

ಆಂಗ್ಲರು ಬಂದಮೇಲೆ ಭಾರತದಲ್ಲಿ ಮೊಟ್ಟಮೊದಲಿಗೆ ನಗರ ಯೋಜನೆಗೆ ಸಂಬಂಧಿಸಿ ಕೈಗೊಂಡ ಕಾರ್ಯಕ್ರಮವೆಂದರೆ 1864 ರಲ್ಲಿ ಅಂದಿನ ಮದರಾಸು, ಬಂಗಾಳ ಮತ್ತು ಮುಂಬಯಿ ಪ್ರಾಂತಗಳಲ್ಲಿ ಸ್ಥಾಪಿಸಿದ 'ನಿರ್ಮಲೀಕರಣ ಸಂಸ್ಥೆಗಳು' ಅಂದರೆ, ಸ್ಯಾನಿಟರಿ ಕಮಿಷನ್ ಗಳು. ಭಾರತದ ನಗರಗಳ ಸಾರ್ವಜನಿಕ ಆರೋಗ್ಯ, ನಿರ್ಮಲೀಕರಣ, ಘೋರವ್ಯಾಧಿಗಳ ನಿವಾರಣಾ ಕ್ರಮ—ಮುಂತಾದುವುಗಳ ಕುರಿತು ಸ್ಥಳೀಯ ಸಂಸ್ಥೆಗಳಿಗೆ ತಿಳುವಳಿಕೆ ನೀಡಿ ಸಹಾಯ ಮಾಡುವುದೇ, 1859 ರಲ್ಲಿ ಬ್ರಿಟಿಷ್ ಪಾರ್ಲಿಮೆಂಟು ರಚಿಸಿದ್ದ, ಬ್ರಿಟಿಷ್ ನಿರ್ಮಲೀಕರಣ ಸಂಸ್ಥೆಯ ಆದೇಶದ ಪ್ರಕಾರ ಸ್ಥಾಪಿತವಾದ, ಈ ಸಂಸ್ಥೆಗಳ ಉದ್ದೇಶವಾಗಿತ್ತು. ದೊಡ್ಡ ದೊಡ್ಡ ನಗರಗಳ ಆಡಳಿತವನ್ನು ಸರ್ಕಾರವೇ ನೇರವಾಗಿ ನೋಡಿ ಕೊಳ್ಳಲು ಸಾಧ್ಯವಾಗುವುದಿಲ್ಲವೆಂಬುದನ್ನು ಅರಿತು, ನಗರಾಡಳಿತ ಮಂಡಲಿ (Municipalites) ಗಳನ್ನು ಸ್ಥಾಪಿಸಲಾಯಿತು.ಇವುಗಳ ವರಮಾನದ ಜೊತೆಗೆ ಸರ್ಕಾರದ ಧನ ಸಹಾಯವನ್ನೂ ಸೇರಿಸಿ, ನಗರನೈರ್ಮಲ್ಯ, ರಸ್ತೆ ಗಳ ದುರಸ್ತಿ, ಕುಡಿಯುವ ನೀರು ಮತ್ತು ಇತರ ನಾಗರಿಕ ಸೌಕರ್ಯ ಗಳನ್ನು ಒದಗಿಸುವ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ನಮ್ಮ ಮೈಸೂರು ರಾಜ್ಯದ ಉದಾಹರಣೆಯನ್ನೇ ತೆಗೆದುಕೊಂಡರೆ, ಬೆಂಗಳೂರಿನ ನಗರ ಸಭೆ 1862ರಲ್ಲಿ ಅಸ್ತಿತ್ವಕ್ಕೆಬಂತು. ಅನಂತರ1906 ರಲ್ಲಿ ಚುನಾ ಯಿತ ನಗರಸಭೆ ಸ್ಥಾಪಿತವಾಯಿತ್ತು.ದಂಡಿನ ಪ್ರದೇಶಕ್ಕೆ ಪ್ರತ್ಯೇಕ ಆಡಳಿತ ಕ್ಕಾಗಿ 1862 ರಲ್ಲಿ ಪ್ರತ್ಯೇಕವಾಗಿ ನೇಮಿಸಲ್ಪಟ್ಟ ಸಮಿತಿ 1881 ರಲ್ಲಿ ಬ್ರಿಟಿಷ್‌ರೆಸಿಡೆಂಟ್‌ರ ಆಡಳಿತಕ್ಕೆ ಸೇರಿತು. 1949 ರಲ್ಲಿ ಇದು ನಗರದೊಡನೆ ವಿಲೀನವಾಯಿತು ಮತ್ತು ಅಂದಿನಿಂದ ಬೆಂಗಳೂರು ಕಾರ್ಪೊರೇಷನ್‌ನ ಆಡಳಿತದಲ್ಲಿ ಎರಡು ನಗರಗಳೂ ಸೇರಿವೆ. ಮೈಸೂರು ನಗರದ ಮುನಿಸಿಪಲ್ ಕಮಿಟಿ 1862 ರಲ್ಲಿ ಅಸ್ತಿತ್ವಕ್ಕೆ ಬಂದು 1892 ರಲ್ಲಿ

ಮುನಸಿಪಲ್ ಕೌನ್ಸಿಲ್ ಆಗಿ ಮಾರ್ಪಟ್ಟಿತು. ಆದರೆ ಚುನಾಯಿತ ಅಧ್ಯಕ್ಷರು ನಗರ ಸಭೆಗೆ ನೇಮಿಸಲ್ಪಟ್ಟದ್ದು ಸ್ವಾತಂತ್ರ್ಯ ನಂತರ, 1949 ರಿಂದೀಚೆಗೆ ಮಾತ್ರ. ಮತ್ತೊಂದು ಮುಖ್ಯ ನಗರವಾದ ಮಂಗಳೂರಿಗೂ, ಬಳ್ಳಾರಿ ಜಿಲ್ಲೆಯ ಹೊಸಪೇಟೆಗೂ ಮುನಸಿಪಾಲಟಿ ರಚಿತವಾಗಿ ಒಂದು ಶತ ಮಾನದ ಮೇಲಾಯಿತು.

ನಗರ ಸಭೆಗಳು ತಮ್ಮ ದೈನಂದಿನ ಕಾರ್ಯಕ್ರಮಗಳ ಜತೆಗೆ ನಗರಾಭಿವೃದ್ಧಿಯ ಕಡೆಗೆ ವಿಶೇಷ ಗಮನ ಕೊಡುವುದು ಕಷ್ಟವೆನಿಸಿತು. ಇದರಿಂದ ನಗರ ಸಭೆಗಳೊಂದಿಗೆ,ಬಹಳ ಮುಖ್ಯವಾದ ನಗರಗಳಿಗೆ ನಗರಾಭಿ ವೃದ್ಧಿ ಮಂಡಲಿಗಳ ಆವಶ್ಯಕತೆ ಕಂಡುಬಂತು. 1898 ರಲ್ಲಿ ಮುಂಬಯಿ ನಗರಾಭಿವೃದ್ಧಿ ಮಂಡಲಿ ರಚಿತವಾಗಿ 35 ವರ್ಷ ಕೆಲಸ ಮಾಡಿತು. ಆದರೆ, ಮುಂದೆ ತೊಂದರೆಗೀಡಾಗಿ, 1933 ರಲ್ಲಿ ಮುಂಬಯಿ ನಗರಸಭೆಯೊಡನೆ ವಿಲೀನಹೊಂದಿತು. ಭಾರತದಲ್ಲಿ ಈಗಿರುವ ನಗರಾಭಿವೃದ್ಧಿ ಮಂಡಲಿ ಗಳಲ್ಲೆಲ್ಲಾ ಮೊದಲನೆಯದೆಂದರೆ 1903 ರಲ್ಲಿ ಸ್ಥಾಪಿತವಾದ ಮೈಸೂರು ನಗರಾಭಿವೃದ್ಧಿ ಮಂಡಲಿ. ಸುಮಾರು ಏಳು ದಶಕಗಳ ಕಾಲದ ಪರಿಶ್ರಮ ದಿಂದ ಮೈಸೂರು ನಗರವನ್ನು 'ಉದ್ಯಾನಗಳ ನಗರ' ಎಂಬ ಕೀರ್ತಿಗೆ ಏರಿಸಿದ್ದು ನಗರಾಭಿವೃದ್ಧಿ ಮಂಡಲಿಯೆಂದೇ ಧಾರಾಳವಾಗಿ ಹೇಳಬಹುದು. ಸರ್ಕಾರದ ಧನ ಸಹಾಯ,ನಗರ ಸಭೆಯ ಪ್ರೋತ್ಸಾಹ,ಶ್ರೀಮನ್ಮಹಾರಾಜರ ಕೃಪಾದೃಷ್ಟಿ–ಇವು ಮೈಸೂರಿನ ಸರ್ವತೋಮುಖ ಬೆಳವಣಿಗೆಗಾಗಿ ನಗರಾಭಿ ವೃದ್ಧಿ ಮಂಡಲಿ ದುಡಿಯಲು ಪ್ರೇರಕವಾದವು. ಜನರ ಸಹಕಾರ, ನಗರ ಯೋಜನಾ ಕಾರ್ಯಗಳಲ್ಲಿ ಆಸಕ್ತಿ, ಸುಂದರವಾದ ಮನೆಗಳನ್ನು ಕಟ್ಟಿ ವಾಸಿಸುವ ಕಲೆ–ಇವು ಮೈಸೂರು ನಗರದ ಅಂದವನ್ನು ಹೆಚ್ಚಿಸಿದುವು.

ಅನಂತರ ನಗರಾಭಿವೃದ್ಧಿ ಕಾಯಿದೆಯನ್ವಯ ರಚಿತವಾದ ನಗರಾಭಿ ವೃದ್ಧಿ ಮಂಡಲಿಗಳು ಈ ಕೆಳಗೆ ಕಂಡಂತಿವೆ.

ಕಲ್ಕತ್ತ	1911	ಅಲಹಾಬಾದ್	1920
ಲಖನೌ	1919	ಲಾಹೋರ್	1936
ಕಾನಪುರ	1919	ನಾಗಪುರ	1937

ದೆಹಲಿ	1937	ಮದರಾಸು	1946
ಬೆಂಗಳೂರು	1945		

ಇವಲ್ಲದೆ 1912 ರಲ್ಲಿ ಹೈದರಾಬಾದ್ ಅಭಿವೃದ್ಧಿ ಮಂಡಲಿ ನೈಜಾಮರ ಫರ್ಮಾನ್ ಆಜ್ಞೆಯಂತೆ ಸ್ಥಾಪಿತವಾಯಿತು. ಕಾನ್‌ಪುರ ಅಭಿವೃದ್ಧಿ ಮಂಡಲಿ ಅನಂತರ ಅಭಿವೃದ್ಧಿ ಸಮಿತಿ (Development Board)ಆಗಿ ಮಾರ್ಪಾಟಾಗಿದೆ. ದೆಹಲಿಯಲ್ಲಿ ಹೊಸ ಅಭಿವೃದ್ಧಿ ಸಮಿತಿಯು, 1957 ರಿಂದ ಅಭಿವೃದ್ಧಿ ಮಂಡಲಿಯ ಕೆಲಸಗಳನ್ನೆಲ್ಲಾ ವಹಿಸಿಕೊಂಡಿದೆ ನಗರಾಭಿವೃದ್ಧಿ ಮಂಡಲಿಗಳ (City Improvement Trust Boards) ಕಾರ್ಯ ಯಾವಾಗಲೂ ಸುಸೂತ್ರವಾಗಿಯಾಗಲೀ, ಪ್ರಭಾವಯುತ ವಾಗಿಯಾಗಲೀ ನಡೆದಿಲ್ಲ. ಕೆಲವು ಮಂಡಲಿಗಳಂತೂ ವಿಶೇಷ ತೊಂದರೆಗೀಡಾ ಗಿವೆ. ಸ್ವಾತಂತ್ರ್ಯನಂತರ ಗೃಹನಿರ್ಮಾಣ ಮಂಡಲಿ, ಸಹಕಾರಿ ಗೃಹ ನಿರ್ಮಾಣ ಸಂಘ ಮುಂತಾದ ಹೊಸ ಸಂಸ್ಥೆಗಳು ಸ್ಥಾಪಿತವಾದ ಮೇಲಂತೂ, ನಗರಾಭಿವೃದ್ಧಿ ಮಂಡಲಿಗಳ ಆವಶ್ಯಕತೆ ಇದೆಯೇ ಎಂಬ ವಾದ ಎದ್ದಿದೆ. ಸ್ಥಳೀಯ ಸಂಸ್ಥೆಗಳು ಪ್ರಬಲವಾದಂತೆಲ್ಲಾ ತಮ್ಮ ಕಾರ್ಯಭಾರದಲ್ಲಿ ಈ ಮಂಡಲಿಗಳು ತಲೆಹಾಕುತ್ತಿವೆಯೆಂಬ ಶಂಕೆ ತಲೆದೋರುತ್ತಿದೆ. ಮಾತ್ರವಲ್ಲದೆ, ಇವೆರಡು ಸಂಸ್ಥೆಗಳಿಗೂ ಪೈಪೋಟಿ ನಡೆಯುತ್ತಲೇ ಇದೆ.

ಆದರೆ ಬೃಹತ್‌ನಗರಗಳಲ್ಲಿ (metropolis) ನಗರ ಸಭೆಗಳೇ ಎಲ್ಲಾ ಕೆಲಸಗಳನ್ನೂ ನೋಡಿಕೊಳ್ಳುವುದು ಅಸಾಧ್ಯ. ಅಂತಹಕಡೆ ಬೇರೆ ಬೇರೆ ಅಂಗ ಸಂಸ್ಥೆಗಳು, ಗೃಹನಿರ್ಮಾಣ, ನಗರ ಯೋಜನೆ ಮತ್ತು ಅಭಿವೃದ್ಧಿ, ನೀರು ಸರಬರಾಜು, ಸಂಚಾರ ಸೌಲಭ್ಯ, ವಿದ್ಯುಚ್ಛಕ್ತಿ ಸರಬರಾಜು, ವಿದ್ಯಾ ಭ್ಯಾಸ, ವೈದ್ಯಕೀಯ ಸೌಲಭ್ಯ, ಕ್ರೀಡಾ ಚಟುವಟಿಕೆಗಳು—ಮುಂತಾದ ಮುಖ್ಯಕಾರ್ಯಗಳನ್ನು ಪ್ರತ್ಯೇಕವಾಗಿ ನೋಡಿಕೊಳ್ಳುವ ವ್ಯವಸ್ಥೆ ಇದ್ದರೆ ಉತ್ತಮವೆಂಬ ಅಭಿಪ್ರಾಯ ಬೆಳೆಯುತ್ತಿದೆ.

ನಗರಾಭಿವೃದ್ಧಿ ಮಂಡಲಿಗಳು ನಗರ ಬಡಾವಣೆ ಮುಂತಾದ ಹೆಚ್ಚು ಪ್ರತಿಫಲ ಕೊಡುವ ಕಾರ್ಯಗಳತ್ತ ಗಮನ ಹರಿಸಿದವೇ ಹೊರತು ಸಾರ್ವ ಜನಿಕರಿಗೆ ಉಪಯುಕ್ತವಾದ ಮತ್ತು ಹಳೇ ನಗರ ಪ್ರದೇಶಗಳನ್ನು

ಸರ್ಕಾರದ ಸಹಾಯದೊಡನೆ ಅಭಿವೃದ್ಧಿ ಪಡಿಸುವ ಕಡೆ ಮುತುವರ್ಜಿ ವಹಿಸ ಲಿಲ್ಲ. ಇದಕ್ಕೆ ಹೊರತಾದದ್ದು ಎಂದರೆ ಮೈಸೂರು ನಗರಾಭಿವೃದ್ಧಿ ಮಂಡಲಿ. ಅದು ಹೊಸ ಬಡಾವಣೆಗಳ ಜತೆಗೆ ಹಳೆಯ ಮೈಸೂರನ್ನು ಅಚ್ಚುಕಟ್ಟು ಮಾಡಿ ಹೊಸ ರೂಪವನ್ನೇ ಕೊಟ್ಟಿತು. ಆದರೆ ಉಳಿದ ಮಂಡಲಿಗಳು ಅಂತಹ ಕಷ್ಟಕರವಾದ ಕೆಲಸಗಳಿಗೆ ಕೈ ಹಚ್ಚಲು ಪ್ರಯತ್ನಿಸಲಿಲ್ಲವೆಂದೇ ಹೇಳಬಹುದು. ಪ್ರಯತ್ನಿಸಿದ ಕೆಲವು ಮಂಡಲಿಗಳು ಹಣಕಾಸಿನ ಮುಗ್ಗ ಟ್ಟನ್ನು ಎದುರಿಸಿ ತೊಂದರೆಗೀಡಾದುವು. ಆದ್ದರಿಂದ ನಗರ ಬಡಾವಣೆಗಳ ಕಡೆಯೇ ಅವು ವಾಲಿದುವು. ಇದರಿಂದಾಗಿ ನಗರದ ಒಟ್ಟು ಅಭಿವೃದ್ಧಿ ಸಾಧ್ಯ ವಾಗಲಿಲ್ಲ. ಸಾರ್ವಜನಿಕರ ಆವಶ್ಯಕತೆಗಳು ನಗರದ ಹೊಸ ಬಡಾವಣೆ ಗಳಲ್ಲಿ ಮಾತ್ರ ದೊರೆತವೇ ಹೊರತು ನಗರದ ಸಮಗ್ರ ಕೊರತೆಯನ್ನು ನೀಗಿ ಸುವಲ್ಲಿ ನಗರ ಸಭೆಗಳಿಗೂ, ನಗರಾಭಿವೃದ್ಧಿ ಮಂಡಲಿಗಳಿಗೂ ಜಿಜ್ಞಾಸೆ ತಪ್ಪಲಿಲ್ಲ; ಸರಿಯಾದ ಪರಿಹಾರ ಸಾಧ್ಯವಾಗಲಿಲ್ಲ.

ನಗರ ಯೋಜನೆಯ ಯುಗ

ಈ ಸಮಸ್ಯೆಗಳಿಂದಾಗಿ ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ಹೊಸ ಮಾರ್ಗವನ್ನು, ಅಂದರೆ ನಗರಸಭೆಗೆ ಹೊಂದಿದಂತೆ ಕೆಲಸಮಾಡುವ ಆಡಳಿತ ಕ್ರಮವನ್ನು, ಕಂಡುಹಿಡಿಯಲು ಆಲೋಚನೆ ಪ್ರಾರಂಭವಾಯಿತು. ಆ ಸಮಯದಲ್ಲಿ, ಅಂದರೆ 1915ರಲ್ಲಿ ಭಾರತಕ್ಕೆ ಸ್ಕಾಟ್ಲೆಂಡಿನ ಡಾ. ಪ್ಯಾಟ್ರಿಕ್ ಗೆಡ್ಡಿಸ್ ಆಗಮಿಸಿದರು. ನಗರದ ಅಭಿವೃದ್ಧಿಗಾಗಿ ಹೊಸ ಭಾವನೆ, ಹೊಸ ತತ್ವ ಮತ್ತು ಹೊಸ ಮಾರ್ಗವನ್ನು ಇವರು ತೋರಿಸಿದರು. ನಗರಗಳ ಬೀದಿಗಳು ಮತ್ತು ಕಟ್ಟಡ ಗಳಲ್ಲಿಯೇ ನಗರದ ಅಭಿವೃದ್ಧಿ ಅಡಕವಾಗಿಲ್ಲ. ಜನರ ಆಶೆ ಆಕಾಂಕ್ಷೆಗಳನ್ನು ಪೂರೈಸುವಲ್ಲಿ, ಅವರ ಆರ್ಥಿಕ ಮತ್ತು ಸಾಮಾಜಿಕ ಜೀವ ನಕ್ಕನುಗುಣವಾಗಿ ನಗರಾಭಿವೃದ್ಧಿಯಾಗಬೇಕೆಂದು ಅವರು ಸಾದರ ಪಡಿಸಿದರು.

ಮದರಾಸಿನ ಗವರ್ನರರಿಗೆ ತಾಂತ್ರಿಕ ಸಲಹೆಗಾರರಾಗಿ ಬಂದ ಇವರು ಆ ಪ್ರಾಂತದ ಅನೇಕ ನಗರಗಳಲ್ಲಿ ಸಂಚರಿಸಿ, ಹಳೇ ಪಟ್ಟಣಗಳ ಅಭಿವೃದ್ಧಿ ಗಾಗಿ ತಮ್ಮದೇ ಆದ ರೀತಿಯ, ಅಂದರೆ 'ತಾಳ್ಮೆಯ ಶಸ್ತ್ರಚಿಕಿತ್ಸೆ'

(Conservative Surgery) ಎಂಬ ವಿಧಾನವನ್ನು ಅನುಸರಿಸಿ ವರದಿಗಳನ್ನು ಸರ್ಕಾರಕ್ಕೆ ಒಪ್ಪಿಸಿದರು. ಇವರ ಇನ್ನೊಂದು ಪ್ರಸಿದ್ಧ ಸಿದ್ಧಾಂತ 'ಜನ–ಮನೆ–ಕೆಲಸ' (Folk-Place-Work) ಇವು ಮೂರಕ್ಕಿರುವ ಸಂಬಂಧವನ್ನು ಅನುಸರಿಸಿ ನಗರಯೋಜನೆಯನ್ನು ತಯಾರಿಸಬೇಕೆಂಬುದಾಗಿದೆ. ಮುಂಬಯಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿಯೂ, ರಾಜಾಸ್ಥಾನದ ಅನೇಕ ನಗರಗಳಿಗೆ ಸಲಹೆಗಾರರಾಗಿಯೂ ಮುಂದಿಟ್ಟ ಹೊಸ ವಿಧಾನಗಳು ಭಾರತದಲ್ಲಿ ನಗರ ಯೋಜನೆಗೆ ಇವರು ನೀಡಿದ ಕೊಡುಗೆಗಳಾಗಿವೆ. ಇದರ ಪರಿಣಾಮವೇ ಭಾರತ ಸರ್ಕಾರವು ಶ್ರೀ ಎಚ್. ವಿ. ಲ್ಯಾಂಚೆಸ್ಟರ್‌ರನ್ನು ನಗರಯೋಜನಾ ಸಲಹೆಗಾರರಾಗಿ ನೇಮಿಸಲು ತೀರ್ಮಾನಿಸುವಂತೆ ಮಾಡಿದ್ದು. ಅಲ್ಲದೆ 1909 ರ ಬ್ರಿಟಿಷ್ ನಗರ ಯೋಜನಾ ಕಾಯಿದೆಯ ಮಾದರಿಯಲ್ಲಿ ಮುಂಬಯಿ ಆಧಿಪತ್ಯದಲ್ಲಿ 1915ರ ನಗರಯೋಜನೆ ಕಾಯಿದೆಯೂ, ಮದರಾಸಿನಲ್ಲಿ 1920ರ ಕಾಯಿದೆಯೂ ಜಾರಿಗೆ ಬರಲು ಪ್ರೇರಕವಾಯಿತು. ಆದರೆ 1920 ರಿಂದ 1940 ರ ವರೆಗೆ ಈ ದಿಶೆಯಲ್ಲಿ ಕೈಗೊಂಡ ಕಾರ್ಯಗಳು ಅಷ್ಟೇನೂ ಕ್ರಿಯಾತ್ಮಕವಾಗಿರಲಿಲ್ಲ. ಜೆಮ್ಷೆಡ್‌ಪುರ ಮುಂತಾದ ಕೈಗಾರಿಕಾ ನಗರಗಳ ಸ್ಥಾಪನೆ ಮತ್ತು ಹಲ ಕೆಲವು ನಗರಾಭಿವೃದ್ಧಿ ಕಾರ್ಯಗಳನ್ನು ಬಿಟ್ಟರೆ, ಈ ಕಾರ್ಯಕ್ರಮಗಳು ಬಹಳ ನಿಧಾನವಾಗಿದ್ದುವು. ಎರಡನೇ ಮಹಾಯುದ್ಧದ ವೇಳೆಯಲ್ಲಿ ಇವು ಹೆಚ್ಚು ಕಡಿಮೆ ನಿಂತೇಹೋದುವು.

ಯುದ್ಧಾನಂತರ, ಯೋಜನೆಗಳು ಪ್ರಾರಂಭವಾದ ಮೇಲೆ ಪುನಃ ನಗರಯೋಜನೆಯತ್ತ ಸರ್ಕಾರಗಳ ಗಮನ ಹರಿಯಲು ಪ್ರಾರಂಭವಾಯಿತು. ಭಾರತ ಸರ್ಕಾರ ಸರ್ ಜೋಸೆಫ್ ಭೋರ್‌ರವರ ಅಧ್ಯಕ್ಷತೆಯಲ್ಲಿ 'ಸಾರ್ವಜನಿಕ ಆರೋಗ್ಯ ಸಮೀಕ್ಷೆ ಮತ್ತು ಅಭಿವೃದ್ಧಿ ಸಮಿತಿ' ಯೊಂದನ್ನು ರಚಿಸಿತು. 1946 ರಲ್ಲಿ ಪ್ರಕಟಿತವಾದ ಈ ಸಮಿತಿಯ ವರದಿ, ಬಹಳ ಮುಂದಾಲೋಚನೆಯಿಂದ ಕೂಡಿದೆ ಮತ್ತು ಮುಂದಿನ ಸಮಸ್ಯೆಗಳನ್ನು ಎದುರಿಸಲು ಕೈಗೊಳ್ಳಬೇಕಾದ ಕಾರ್ಯಗಳಿಗೆ ಸಂಬಂಧಿಸಿದ ಬಹಳ ಉಪಯುಕ್ತ ವಿವರಗಳನ್ನೊಳಗೊಂಡಿದೆ. ನಗರಯೋಜನೆಗಾಗಿ ಕೇಂದ್ರದಲ್ಲಿಯೂ, ಪ್ರಾಂತಗಳಲ್ಲಿಯೂ ಪ್ರತ್ಯೇಕ ಇಲಾಖೆಗಳಿರಬೇಕೆಂದೂ, ಈ ವಿಷಯದಲ್ಲಿ

ಪರಿಣತಿ ಪಡೆದ ತಜ್ಞರನ್ನು ನೇಮಿಸಬೇಕೆಂದೂ ವರದಿಯಲ್ಲಿ ಸಲಹೆ ಮಾಡಲಾಗಿತ್ತು. ತಜ್ಞರನ್ನು ತರಬೇತಿ ಮಾಡಲು ವಿಶ್ವವಿದ್ಯಾನಿಲಯಗಳಲ್ಲಿ ಪ್ರತ್ಯೇಕ ಬೋಧನ ವಿಭಾಗವನ್ನು ಏರ್ಪಡಿಸಬೇಕೆಂದು ಸಲಹೆಮಾಡಲಾಗಿತ್ತು. ಪ್ರಕೃತ, ದೇಶದಲ್ಲಿ ಕೈಗೊಳ್ಳಲಾಗಿರುವ ನಗರ ಯೋಜನಾ ಕಾರ್ಯಕ್ರಮಗಳು ಹಾಗೂ ಈ ವಿಷಯವನ್ನು ಬೋಧಿಸಲು ದೆಹಲಿ, ಮದರಾಸು, ಖರಗಪುರ ಮತ್ತು ಪೂನಾಗಳಲ್ಲಿ ಶಿಕ್ಷಣ ಕೇಂದ್ರಗಳು ತೆರೆಯಲ್ಪಟ್ಟು, ಸ್ನಾತಕೋತ್ತರ (Post-graduate) ಮಟ್ಟದಲ್ಲಿ ನಗರಯೋಜನಾ ಶಿಕ್ಷಣ ನೀಡಲಾಗುತ್ತಿರುವುದು-ಇವು ಭೋರ್ ಸಮಿತಿಯವರ ಮುಂದಾಲೋಚನೆ ಮತ್ತು ಉಪಯುಕ್ತ ಸಲಹೆಗಳ ಮಹತ್ತರ ಪರಿಣಾಮ. ಈ ಸಮಿತಿಯವರು, ದೊಡ್ಡ ನಗರಗಳಿಂದ ಪ್ರಾರಂಭಿಸಿ ಸಣ್ಣ ನಗರಗಳು, ಮುಖ್ಯ ಗ್ರಾಮಗಳು, ಅನಂತರ ಹಳ್ಳಿಗಳೂ ಯೋಜನಾಬದ್ಧವಾಗಿ ಬೆಳೆಯುವಂತೆ ಕಾರ್ಯಕ್ರಮಗಳನ್ನು ಸಿದ್ಧಗೊಳಿಸುವ ವಿಧಾನಗಳನ್ನು ಶಿಫಾರಸು ಮಾಡಿದ್ದಲ್ಲದೆ, ಇವುಗಳನ್ನು ಜಾರಿಗೆ ತರಲು ಎಲ್ಲಾ ರಾಜ್ಯಗಳೂ ನಗರ ಯೋಜನಾ ಕಾಯಿದೆಗಳನ್ನು ಶೀಘ್ರವೇ ರೂಪಿಸಲು ಸಹಾಯವಾಗುವಂತೆ ಕೇಂದ್ರವು ಮಾದರಿ ಕಾಯಿದೆಯೊಂದನ್ನು ತಯಾರಿಸಬೇಕೆಂದೂ ಸಲಹೆ ಮಾಡಿದ್ದು-ಇವೆಲ್ಲವೂ ಈಗ ಕಾರ್ಯಗತವಾಗುತ್ತಿದೆ.

ಆದರೆ, ಭಾರೀ ಪ್ರಮಾಣದ ನಗರಗಳ ಬೆಳವಣಿಗೆ ನಗರ ಸಭೆಗಳ ಎಲ್ಲೆಯೊಳಗೇ ಸೀಮಿತವಾಗಿರಲಿಲ್ಲವೆಂಬುದು ಎಲ್ಲಾ ಕಡೆಯೂ ಗೋಚರವಾಗಿರುವ ಅಂಶ. ಹಾಗಾದರೆ ನಗರದ ಹೊರವಲಯಗಳಲ್ಲಿ ಬೆಳೆಯುತ್ತಿರುವ ನಗರ ಭಾಗವನ್ನು (suburbs) ನೋಡಿಕೊಳ್ಳುವವರಾರು? ಅವುಗಳನ್ನು ಹಾಗೇ ಬಿಟ್ಟರೆ ಮುಂದೆ ಕೊಳಚೆ ಪ್ರದೇಶವಾಗಿ ನಗರವನ್ನೇ ವಿಲಕ್ಷಣ ಮಾಡುವುದಿಲ್ಲವೇ? ಇವೆಲ್ಲಾ ಪ್ರಶ್ನೆಗಳನ್ನೂ ಪರಿಹರಿಸಲು ನಗರ ಪ್ರದೇಶವನ್ನಲ್ಲದೆ ಸುತ್ತಲೂ ನಾಲ್ಕಾರು ಮೈಲಿಗಳ ಗ್ರಾಮಾಂತರ ಪ್ರದೇಶವನ್ನೂ ಸೇರಿಸಿ ನಗರ ಯೋಜನೆಯ ಗಡಿಯನ್ನು ನಿರ್ಮಿಸಬೇಕೆಂದು ತಜ್ಞರು ಅಭಿಪ್ರಾಯಪಟ್ಟರು. ಅದರಂತೆ ನಗರ ಯೋಜನೆ ಕಾಯಿದೆಗಳು ಎಲ್ಲ ರಾಜ್ಯಗಳಲ್ಲೂ ಶಾಸನವಾಗುತ್ತಿವೆ. ಮೈಸೂರು ರಾಜ್ಯದಲ್ಲಿ 1965 ರಿಂದ ಅಂತಹ ಕಾಯಿದೆ ಜಾರಿಗೆ ಬಂದಿದೆ. ಇವುಗಳ ಜತೆಗೆ ಮೊದಲನೆ ಮೂರು ಪಂಚ

ವಾರ್ಷಿಕ ಯೋಜನೆಗಳಲ್ಲಿ ನಗರ ಮತ್ತು ಗ್ರಾಮಾಂತರ ಯೋಜನೆಗಳಿಗೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗಿದೆ ಮತ್ತು ವಸತಿ ಯೋಜನೆಯನ್ನೂ ನಗರ ಯೋಜನೆಯನ್ನೂ ಸ್ವಲ್ಪ ಮಟ್ಟಿಗೆ ಸಂಯೋಜಿಸಲೂ ಪ್ರಯತ್ನ ನಡೆದಿದೆ. ನಗರಗಳನ್ನು ಅವುಗಳ ಸುತ್ತಲ ಪ್ರದೇಶದೊಡನೆ ಸೇರಿಸಿ ನೋಡುವ ಪಕ್ಷಿನೋಟದತ್ತ (Regional Concept) ಯೋಜಕರ ಗಮನ ಹರಿದಿದೆ. ಆರ್ಥಿಕ ಯೋಜನೆಗಳನ್ನು ಭೌತಿಕ ಯೋಜನೆಗಳೊಡನೆ ಕೂಡಿಸಿ ಪ್ರಾಂತೀಯ ಯೋಜನೆಗಳನ್ನು ತಯಾರಿಸುವ ಪ್ರಯತ್ನ ಸಾಗಿದೆ. ಆದರೆ ಪರಿಣಾಮ ಅಷ್ಟೇನೂ ಆಗಿಲ್ಲ.

2. ನಗರಗಳ ಲಕ್ಷಣಗಳು

ನಗರಗಳ ಬೆಳವಣಿಗೆ, ಅವು ಯೋಜಿತ ರೀತಿಯಲ್ಲಿ ಬೆಳೆಯಬೇಕಾದರೆ ಕೈಗೊಳ್ಳಬೇಕಾದ ಕ್ರಮಗಳು–ಮುಂತಾದುವುಗಳನ್ನು ಕುರಿತು ತಿಳಿದದ್ದಾಯಿತು. ಅವುಗಳ ಲಕ್ಷಣ, ಕಾಲಕ್ಕೆ ತಕ್ಕಂತೆ ಅವುಗಳ ಬದಲಾವಣೆ ಹಾಗೂ ಅವುಗಳು ನಾಗರಿಕತೆಯನ್ನುಹೇಗೆ ಪ್ರತಿಬಿಂಬಿಸುತ್ತವೆ ಎಂಬುದನ್ನು ಈಗ ನೋಡೋಣ. ಅದಕ್ಕಾಗಿ ಓದುಗರು ತಮ್ಮ ಮನೋಪಥದಲ್ಲಿ ಆದಿಮಾನವನಿಂದ ಆಧುನಿಕ ಮಾನವನ ವರೆಗೆ ಮತ್ತೆ ಪ್ರಯಾಣ ಬೆಳೆಸಬೇಕಾಗುತ್ತದೆ. ಇಲ್ಲಿ ಪ್ರಸ್ತಾಪಿಸುವ ಒಂದೆರಡು ಉದಾಹರಣೆಗಳಿಂದ ತಮ್ಮ ಮನೋಭೂಮಿಕೆಯಲ್ಲಿ ಸಮಷ್ಟಿ ಚಿತ್ರವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಹೆಚ್ಚಿನ ವಿವರಗಳಿಗೆ ಇದು ಸೂಕ್ತ ಸಂದರ್ಭವೂ ಅಲ್ಲ,ಅಂತಹ ಆವಶ್ಯಕತೆಯೂ ಇಲ್ಲಿಲ್ಲ.

ವೇದಗಳ ಕಾಲ

ಮಾನವನು ಮನೆ ಕಟ್ಟುವುದನ್ನು ಅಲ್ಪಸ್ವಲ್ಪ ಕಲಿತಮೇಲೆ ಸಾಮೂಹಿಕ ಜೀವನ ನಡೆಸುವುದನ್ನು ಕಲಿಯಲು ಪ್ರಾರಂಭಿಸಿದನು. ಮೊದಲು, ಕೆಲವು ಮಂದಿ ಮಾನವರು ಗುಂಪುಗುಂಪಾಗಿ ಹತ್ತಾರು ಮನೆಗಳನ್ನು ಕಟ್ಟಿಕೊಂಡು ಕಳ್ಳಕಾಕರಿಂದಲೂ, ವನ್ಯ ಮೃಗಗಳಿಂದಲೂ ತಮ್ಮ ಕಿಂಚಿತ್ ಒಡವೆ ವಸ್ತುಗಳನ್ನು ಹಾಗೂ ಜಾನುವಾರು ಮತ್ತು ಒಡನಾಡಿಗಳನ್ನು ಸಂರಕ್ಷಿಸಲು ಏರ್ಪಾಡುಮಾಡಿಕೊಂಡಿರಬೇಕು. ಅದೇ, ಗ್ರಾಮಗಳ ಬೆಳವಣಿಗೆಯ ಆದಿ ಎಂದು ಭಾವಿಸಬಹುದು. ಇದೆಲ್ಲಾ ಸುಮಾರು 25,000 ವರ್ಷಗಳ ಹಿಂದೆ ಪ್ರಾರಂಭವಾಗಿ ನಾಗರಿಕತೆ ಬೆಳೆದಂತೆ, ಇಂತಹ ಗ್ರಾಮಗಳ ಗಾತ್ರ ಹಾಗೂ ವೈವಿಧ್ಯತೆ ಹೆಚ್ಚುತ್ತಾ ಬಂದುವು. ರಕ್ಷಣೆಗಾಗಿ ಊರಿನ ಸುತ್ತಲೂ ಬೇಲಿಗಳನ್ನೂ ಹಳ್ಳಗಳನ್ನೂ ನಿರ್ಮಿಸಿ, ಗುಡಿಸಿಲುಗಳನ್ನು ಊರಿನ ಒಳಭಾಗಕ್ಕೆ ಮುಖಮಾಡಿ ಕಟ್ಟಿಕೊಂಡು ಅವರು ವಾಸಿಸಲು ಆರಂಭಿಸಿರಬೇಕು. ಈ ಕುರಿತು ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ. ಈ ರೀತಿ ಜಾಣ್ಮೆಯಿಂದ ಬಾಳುವ ಕಲೆ ವಿಕಾಸ ಹೊಂದುತ್ತಾ, ಈ ಮೊದಲೇ ಪ್ರಸ್ತಾಪಿಸಿರುವಂತೆ ಕ್ರಿ. ಪೂ. 3000 ವೇಳೆಗೆ

ಪ್ರಪಂಚದ ಅನೇಕ ಭಾಗಗಳಲ್ಲಿ ನಾಗರಿಕತೆ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿ ನಗರಗಳ ಬೆಳವಣಿಗೆಯಲ್ಲಿ ಕೊನೆಗೊಂಡಿತು. ಆರ್ಯರು ಭಾರತಕ್ಕೆ ವಲಸೆ ಬಂದ ವರೆಗಿನ ಅವಧಿಯ ಇತಿಹಾಸ ಇನ್ನೂ ವಿಶೇಷವಾಗಿ ಬೆಳಕಿಗೆ ಬಂದಿಲ್ಲ. ಆ ಕಾಲದ ನಾಗರಿಕತೆಯನ್ನು ಕುರಿತು ಹರಪ್ಪ,ಮೊಹೆಂಜೊದಾರೊ ನಗರಗಳ ಅವಶೇಷಗಳಿಂದ ತಿಳಿದುಬಂದುದಕ್ಕಿಂತ ಹೆಚ್ಚಾಗಿ ಅರಿಯಲು ಸಾಧ್ಯವಾಗಿಲ್ಲ. ಆದರೂ ಅಂದಿನ ನಗರಗಳಲ್ಲಿ ಮಾನವನ ಆವಶ್ಯಕತೆಗೆ ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಿಕೊಂಡು, ಕೋಟೆಗಳನ್ನು ನಿರ್ಮಿಸಿ, ನಗರವನ್ನು ರಕ್ಷಿಸುತ್ತಿದ್ದರೆಂಬುದು ಗೋಚರವಾಗಿದೆ. ಅದೇನು ಪ್ರಕೃತಿ ನಿಯಮವೋ, ಅಥವಾ ವಿಧಿಯ ವೈಚಿತ್ರ್ಯವೋ,ಅಂತಹ ನಾಗರಿಕತೆ ಹೇಳ ಹೆಸರಿಲ್ಲದಂತೆ ಭೂಮಿಯೊಳಗೆ ಹೂತುಹೋಗಬೇಕೆ !

ಇದಾದ 1,500 ವರ್ಷಗಳ ಮೇಲೆ ಅಂದರೆ ಕ್ರಿ. ಪೂ. 1500ರ ಸುಮಾರಿಗೆ ಭಾರತಕ್ಕೆ ಆರ್ಯರು ಬಂದು ತಮ್ಮ ವ್ಯವಸಾಯದ ಕಸಬಿಗೆ ಹೊಂದುವ ಗ್ರಾಮಗಳನ್ನು ಪುನಃ ಆದಿಮಾನವನಂತಯೇ ಪ್ರಾರಂಭಿಸಿರುವುದು ಚರಿತ್ರೆಗಳಲ್ಲಿ ಉಲ್ಲೇಖಿತವಾಗಿದೆ. ನದೀಪಾತ್ರ ನಾಗರಿಕತೆಯ ಕಾಲದವರು ವ್ಯಾಪಾರಿಗಳೂ, ವಿಶೇಷತಃ ನಗರವಾಸಿಗಳೂ ಆಗಿದ್ದರೆ, ಆಮೇಲೆ ಬಂದ ವೇದ ಕಾಲದ ಆರ್ಯರು ವ್ಯವಸಾಯಗಾರರೂ ಗ್ರಾಮ ಜೀವಿಗಳೂ ಆಗಿದ್ದರು. ಅವರು ಸಾಮಾನ್ಯವಾಗಿ ತಮ್ಮ ಜಮೀನುಗಳಲ್ಲೂ ಕಾಡುಗಳಲ್ಲೂ ವಾಸಿಸುತ್ತಿದ್ದರು. ಅಲ್ಲದೆ ತಮ್ಮ ಮನೆಗಳನ್ನು ಕಟ್ಟುವ ಕೆಲಸವನ್ನು ಆದಿಮಾನವನಂತೆಯೇ, ಅಪಕ್ವ ತಿಳುವಳಿಕೆಯಿಂದಲೇ ಪ್ರಾರಂಭಿಸಿದರು. ಬಿದಿರು, ಜೊಂಡುಗಳಿಂದ ಗುಡಿಸಿಲುಗಳನ್ನು ಕಟ್ಟಿ ಸೊಪ್ಪು ಹೊದಿಸುತ್ತಿದ್ದ ಅವರಿಗೆ ಹಿಂದಿನ ನಾಗರಿಕತೆಯ ಸಂಪರ್ಕವೇ ಇಲ್ಲಿಲ್ಲವೆನ್ನುವುದು ಖಚಿತ. ಇವರೂ ಸಹ ತಮ್ಮ ಗುಡಿಸಿಲುಗಳನ್ನು ಗುಂಪುಗಳಾಗಿ ನಿರ್ಮಿಸಿ, ಸುತ್ತಲೂ ಬೇಲಿ ಹಾಕಿ, ಗ್ರಾಮವನ್ನು ಸಂರಕ್ಷಿಸುತ್ತಿದ್ದರು. ಅನೇಕ ಶತಮಾನಗಳು ಕಳೆದಮೇಲೆ ಹಸಿ ಇಟ್ಟಿಗೆ ಉಪಯೋಗಿಸಲು ಪ್ರಾರಂಭಿಸಿ, ಪೀಪಾಯಿ ಮಾದರಿಯ ಛಾವಣಿ ಕಟ್ಟುವುದನ್ನೂ ಬೆಳಕಿಗಾಗಿ ಗೋಡೆಯಲ್ಲಿ ಕಮಾನಿನ ಕಿಂಡಿ ಬಿಡುವುದನ್ನೂ ಕಲಿತರು. ಇಂತಹ ಕಿಂಡಿಯೇ ಮುಂದೆ ಬೌದ್ಧರ ಚೈತ್ಯ ಕಿಟಕಿಯಾಗಿ ಅವರ ಗುಹೆ

ಗಳಲ್ಲಿ ಉಪಯೋಗಕ್ಕೆ ಬಂತು. ಗೋಡೆಗಳಿಗೆ ಮಣ್ಣಿನ ಬಣ್ಣ ಬಳಿಯು ವುದು,ಇತ್ಯಾದಿ ಕಲೆಗಳು ಪ್ರಾರಂಭವಾಗಿ ಇಂದಿಗೂ ಹಳ್ಳಿಗಳಲ್ಲಿ ಬಳಕೆ ಯಲ್ಲಿರುವುದನ್ನು ನಾವು ಕಾಣಬಹುದು. ಕ್ರಿ. ಪೂ. 500ರ ವೇಳೆಗೆ ವೇದಯುಗದ ಆರ್ಯರ ನಾಗರಿಕತೆ ಮುಂದುವರಿದು ನಗರಗಳು ಬೆಳೆಯಲು ಪ್ರಾರಂಭವಾದುವು.

ಈ ರೀತಿ ನಿರ್ಮಿತವಾದ ನಗರಗಳು ಕೂಡ ಹಿಂದಿನ ಹಳ್ಳಿಗಳ ಮಾದರಿಯಲ್ಲೇ ದೊಡ್ಡ ಪ್ರಮಾಣದಲ್ಲಿ ಬೆಳೆದುವೆಂಬುದು ಸ್ಪಷ್ಟವಾಗು ತ್ತದೆ. ಕ್ರಮೇಣ ಕೆಲವೊಂದು ಸುಧಾರಣೆಗಳೂ ಆದುವು. ಊರಿನ ಸುತ್ತಲೂ ಬೇಲಿಗೆ ಬದಲಾಗಿ ಕೋಟೆಗಳು ನಿರ್ಮಾಣವಾದುವು. ದನಗಳು ಊರೊಳಗೆ ಬರಲು ಬಿದಿರಿನಲ್ಲಿ ಕಟ್ಟಿದ್ದ ಎರಡು ಕಂಬ, ಅವುಗಳ ಮೇಲೆ ಅಡ್ಡ ಪಟ್ಟಿಯ ರೀತಿಯಲ್ಲಿ ಮಾಡಿದ ಬಾಗಿಲಿಗೆ ಬದಲು 'ಗೋಪುರ'ಗಳ ರಚನೆ ಪ್ರಾರಂಭವಾಯಿತು. ದೇವಸ್ಥಾನದ ಪ್ರಾಕಾರದ ಒಳಗೆ ವಾಸಿಸು ವುದು ಸಾಧ್ಯವಾಗದೆ, ದೇವಾಲಯದ ಹೊರಗೆ ಪಟ್ಟಣ ಬೆಳೆಯುತ್ತಾ ಬಂತು. ಜಾತಿ ಪದ್ಧತಿ ಬೆಳೆದಂತೆ ದೇವಸ್ಥಾನಕ್ಕೆ ತೀರ ಸಮೀಪದಲ್ಲಿ ಉತ್ತಮ ಕುಲದವರೂ, ಹೊರವಲಯದಲ್ಲಿ ಕೆಳದರ್ಜೆಯವರೂ ವಾಸಿಸಲು ಏರ್ಪಾಡುಗಳಾದುವು. ಮರಗಳನ್ನೇ ವಿಶೇಷವಾಗಿ ಉಪಯೋಗಿಸಿ ಮನೆ ಕಟ್ಟಲು ಪ್ರಾರಂಭವಾಯಿತು. ಕ್ರಿ. ಪೂ. ಐದನೇ ಶತಮಾನದಲ್ಲಿ ಮಹಾ ಗೋವಿಂದನೆಂಬ ಶಿಲ್ಪಿ ಉತ್ತರ ಭಾರತದಲ್ಲಿ ಅನೇಕ ರಾಜಧಾನಿಗಳ ಯೋಜನೆಗಳನ್ನು ಸಿದ್ಧಪಡಿಸಿದ. ಇವನೇ ಭಾರತದ ಪ್ರಪ್ರಥಮ ವಾಸ್ತು ಶಿಲ್ಪಿಯೆಂದು ಚರಿತ್ರೆಯಲ್ಲಿ ಉಲ್ಲೇಖಿತವಾಗಿದೆ. ಮುಂದಕ್ಕೆ, ಇವನನ್ನನು ಸರಿಸಿ ಅನೇಕರು ಅರಮನೆಗಳನ್ನೂ, ಸಾರ್ವಜನಿಕ ಭವನಗಳನ್ನೂ ರೂಪಿಸಿ ದರು. ಅಂತೆಯೇ ಕಲ್ಲು ಮುಂತಾದ ಬಾಳಿಕೆ ಬರುವ ಸಾಮಗ್ರಿಗಳನ್ನು ಉಪಯೋಗಿಸಿ ನಗರಗಳನ್ನು ನಿರ್ಮಿಸುವುದು ಪ್ರಾರಂಭವಾಯಿತು. ಪಾಟ್ನ ನಗರದ ಬಳಿಯ 'ರಾಜಗೃಹ' ಎಂಬ ಮಗಧ ರಾಜ್ಯದ ರಾಜಧಾನಿಯ ಅವಶೇಷಗಳಿಂದ, ಕೋಟೆ ಗೋಡೆಗಳನ್ನು ದಪ್ಪವಾದ ಕಾಡುಗಲ್ಲುಗಳಿಂದ ನಿರ್ಮಿಸಿದ್ದರೆಂಬುದು ಕಂಡುಬರುತ್ತದೆ. ಹೀಗೆ, ಗೃಹನಿರ್ಮಾಣಕ್ಕೆ

ಹೊಸ ಹೊಸ ವಿಧಾನಗಳನ್ನು ಬಳಸುವ ಅಭಿಲಾಷೆ ಈ ಕಲೆಯ ಬೆಳವಣಿಗೆಗೆ ಕಾರಣವಾಯಿತು.

ನಗರ ವೈವಿಧ್ಯತೆ

ನಗರಗಳ ವಿಂಗಡಣೆ ಅಷ್ಟೇನೂ ಶಾಸ್ತ್ರೋಕ್ತವಾಗಿ ಮಾಡಬಹುದಾದ ಕೆಲಸವಲ್ಲ. ಇದು ನಮ್ಮ ಅಭಿಲಾಷೆಯನ್ನು ಹಾಗೂ ಅವುಗಳಿಂದ ನಾವು ಅಪೇಕ್ಷಿಸುವ ಕಾರ್ಯಕಲಾಪಗಳನ್ನು ಅವಲಂಬಿಸಿರುತ್ತದೆ. ಆದರೆ, ನಗರಗಳಲ್ಲಿ ನಡೆಯುವ ಕಾರ್ಯಕಲಾಪಗಳೆಲ್ಲ ಒಂದೇ ವಿಧವಾಗಿರುವುದಿಲ್ಲ. ವಿವಿಧ ಚಟುವಟಿಕೆಗಳು ಪ್ರತಿಯೊಂದು ನಗರದಲ್ಲೂ ನಡೆಯುತ್ತಲೇ ಇರುತ್ತವೆ ಮತ್ತು ಒಂದಕ್ಕೊಂದು ಸಂಬಂಧಿಸಿರುತ್ತವೆ. ಇಂತಹ ಕಾರ್ಯಗಳಲ್ಲೆಲ್ಲಾ ಯಾವುದಾದರೂ ಒಂದು ಅತ್ಯಂತ ಪ್ರಭಾವ ಪೂರ್ಣ ಚಟುವಟಿಕೆ, ಸಂಬಂಧಪಟ್ಟ ನಗರಕ್ಕೆ ಒಂದು ವಿಶಿಷ್ಟ ರೂಪ ಹಾಗೂ ವೈವಿಧ್ಯತೆಗೆ ಕಾರಣವಾಗುತ್ತದೆ. ಉದಾಹರಣೆಗೆ, ಕೈಗಾರಿಕೆಗಳೇ ವಿಶೇಷವಾಗಿರುವ ನಗರಗಳು ಕೈಗಾರಿಕಾನಗರಗಳಾಗುತ್ತವೆ. ಕೆಲವು ವಿದ್ಯಾ ಕೇಂದ್ರಗಳಾಗಿಯೂ, ಮತ್ತೆ ಕೆಲವು ವಾಣಿಜ್ಯ ಕೇಂದ್ರಗಳಾಗಿಯೂ ಬೆಳೆಯಬಹುದು. ರಾಜಧಾನಿಗಳೂ, ಸೇವಾಕೇಂದ್ರಗಳೂ ಇದೇ ರೀತಿ ಬೆಳೆಯುತ್ತವೆ. ಇಂತಹ ದೃಷ್ಟಿಯಿಂದ ನಗರಗಳನ್ನೆಲ್ಲಾ ಸಾಮಾನ್ಯವಾಗಿ ಈ ಕೆಳಗೆ ಕಂಡಂತೆ ವಿಂಗಡಿಸಬಹುದು.

1) ಸಂಸ್ಥಾ ಕೇಂದ್ರಗಳು
2) ವಾಣಿಜ್ಯ ಕೇಂದ್ರಗಳು
3) ಕೈಗಾರಿಕಾ ಕೇಂದ್ರಗಳು
4) ಜಾತ್ರೆ ಮತ್ತು ಕ್ರೀಡಾಕೇಂದ್ರಗಳು
5) ಮಹಾನಗರಗಳು

ಇವುಗಳಲ್ಲೇ ಯಾತ್ರಾಸ್ಥಳಗಳು, ಬಂದರುಗಳು, ದುರ್ಗಗಳು, ಯೋಜನಾಕೇಂದ್ರಗಳು ಹಾಗೂ ಸೈನ್ಯ ಶಿಬಿರಗಳು ಕೂಡ ಸೇರುತ್ತವೆ.

ಸಂಸ್ಥಾ ಕೇಂದ್ರಗಳು

ಹಿಂದೆ, ದೇವಸ್ಥಾನಗಳು, ಚರ್ಚುಗಳು—ಮುಂತಾದ ಸಂಸ್ಥೆಗಳ

ಸುತ್ತಲೂ ಗ್ರಾಮಗಳು ಮತ್ತು ನಗರಗಳು ಬೆಳೆಯುತ್ತಿದ್ದುವು. ಇವುಗಳೊಂದಿಗೆ ಅರಮನೆಗಳ ಹಾಗೂ ಸರ್ಕಾರಿ ಕಛೇರಿಗಳ ಕೇಂದ್ರವಾದ ರಾಜಧಾನಿಯಂತಹ ನಗರಗಳೂ ಬೆಳೆಯಲು ಪ್ರಾರಂಭಿಸಿದುವು. ಇವುಗಳಲ್ಲದೆ ರೈಲ್ವೇ ಕೇಂದ್ರಗಳು, ವಿಶ್ವವಿದ್ಯಾಲಯ ಮತ್ತು ವಿದ್ಯಾ ಸಂಸ್ಥೆಗಳ ಕೇಂದ್ರಗಳೂ ಸಹ ಬೆಳೆದುವು. ಇವುಗಳಲ್ಲಿ ಮೈಸೂರು ನಗರದ ಉದಾಹರಣೆಯನ್ನು ನಾವು ತೆಗೆದುಕೊಳ್ಳಬಹುದು. ಅರಮನೆಯ ಕೇಂದ್ರ ಮತ್ತು ರಾಜಧಾನಿಯಾಗಿ ಬೆಳೆದು ಮುಂದಕ್ಕೆ ಈ ನಗರ ರೈಲ್ವೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಕೇಂದ್ರವಾಯಿತು. ಇಂದಿಗೂ ಈ ಎಲ್ಲ ಸಂಸ್ಥೆಗಳೂ ಮೈಸೂರಿನ ಬೆಳವಣಿಗೆಗೆ ಪೂರಕವಾಗಿವೆ. 'ಮಾನಸ ಗಂಗೋತ್ರಿ' ಯಲ್ಲಿ ಸ್ನಾತಕೋತ್ತರ ವಿದ್ಯಾಸಂಸ್ಥೆಗಳು ಪ್ರಾರಂಭವಾದ ಮೇಲಂತೂ ಈ ನಗರಕ್ಕೆ ಹೊಸಕಳೆ ಬಂದಿದೆ. ಇನ್ನೂರು ಹೆಕ್ಟೇರ್ ಪ್ರದೇಶದಲ್ಲಿ ಹೊಸ ವಿಶ್ವವಿದ್ಯಾನಿಲಯದ ಬಡಾವಣೆ ಯೋಜಿತ ರೀತಿಯಲ್ಲಿ ಬೆಳೆಯುತ್ತಿದೆ. ವಿದ್ಯಾಸಂಸ್ಥೆಗಳೇ ಅಲ್ಲದೆ ಪ್ರಸಾರಾಂಗ, ವಿದ್ಯಾರ್ಥಿ ನಿಲಯಗಳು, ಪುಸ್ತಕ ಭಂಡಾರ, ಬೋಧಕರ ವಸತಿಗೃಹಗಳು ಮತ್ತು ಕ್ರೀಡಾಂಗಣಗಳಿಂದ ಈ ಉಪನಗರ ಕೂಡಿದೆ. ಮಹಾರಾಜ ಕಾಲೇಜಿನ ಸುತ್ತಲೂ ಇದ್ದ ವಿಶ್ವವಿದ್ಯಾನಿಲಯದ ಹಳೆಯ ಭವನಗಳಿಗೂ, ಮಾನಸ ಗಂಗೋತ್ರಿಯ ಹೊಸ ಭವನಗಳಿಗೂ ಮಧ್ಯೆ ಕುಕ್ಕರಹಳ್ಳಿ ಕೆರೆ ಮತ್ತು ಉದ್ಯಾನವನವಿದ್ದು, ಇಡೀ ಮೈಸೂರಿನ ವಿಶೇಷ ಆಕರ್ಷಣೆಗೆ ಕಾರಣವಾಗಿದೆ. ನಗರದ ಪಶ್ಚಿಮ ಬಡಾವಣೆಗಳು ತೀವ್ರವಾಗಿ ಬೆಳೆದು ಜನಪ್ರಿಯವಾಗಲೂ ಈ ವಿದ್ಯಾಕೇಂದ್ರವೇ ಮೂಲ. ಮತ್ತೊಂದು ಇಂತಹ ಸಂಸ್ಥಾನಗರ ಧಾರವಾಡ. ಕರ್ಣಾಟಕ ವಿಶ್ವವಿದ್ಯಾನಿಲಯದ ಕೇಂದ್ರವಲ್ಲದೆ ಜಿಲ್ಲಾ ಕೇಂದ್ರವೂ ಆಗಿರುವ ಧಾರವಾಡದ ಬೆಳೆವಣಿಗೆ, ಈ ಸಂಸ್ಥೆಗಳನ್ನೇ ಪೂರ್ಣವಾಗಿ ಅವಲಂಬಿಸಿದೆ. ಈ ನಗರದ ನಿವಾಸಿಗಳಲ್ಲಿ ಬಹು ಮಂದಿ ಈ ಸಂಸ್ಥೆಗಳಲ್ಲಿ ಕೆಲಸಮಾಡಿ ಜೀವಿಸುತ್ತಿರುವುದಲ್ಲದೆ, ನಗರದ ಸಾಕಷ್ಟು ಪ್ರದೇಶವು (ಶೇ. 15ರಿಂದ20) ಈ ಸಂಸ್ಥೆಗಳ ಉಪಯೋಗಕ್ಕೆ ಮೀಸಲಾಗಿದೆ. ಹೀಗೆಯೇ ಇನ್ನೂ ಅನೇಕ ನಗರಗಳನ್ನೂ ಉದಾಹರಿಸಬಹುದು. ಚಂದೀಘರ್, ಗಾಂಧಿನಗರ (ಗುಜರಾತ್), ಭುವನೇಶ್ವರ, ಸಿಮ್ಲಾ

ಮುಂತಾದ ರಾಜಧಾನಿಗಳು ಇಂತಹ ನಗರಗಳಲ್ಲಿ ಪ್ರಖ್ಯಾತವಾದುವು. ಸಣ್ಣ ಪಟ್ಟಣಗಳಲ್ಲಿ ಅನೇಕ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳು ಸಾಧಾರಣವಾಗಿ ಈ ಗುಂಪಿಗೇ ಸೇರುತ್ತವೆ. ಇಂಗ್ಲೆಂಡಿನ ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಮುಂತಾದ ವಿಶ್ವವಿದ್ಯಾನಿಲಯ ಕೇಂದ್ರಗಳ ಬೆಳವಣಿಗೆಗೆ ಇಂತಹ ಸಂಸ್ಥೆಗಳೇ ಬಹುಮಟ್ಟಿಗೆ ಕಾರಣ. ಕ್ಯಾಥೊಲಿಕ್ ಗುರುಗಳ ವ್ಯಾಟಿಕನ್ ನಗರ ಇದಕ್ಕೆ ಇನ್ನೊಂದು ಉದಾಹರಣೆ. ಶ್ರೀರಂಗಪಟ್ಟಣ ದಿಂದ ರಾಜಧಾನಿ ಮೈಸೂರಿಗೆ ಬದಲಾದ ಮೇಲೆ ಆ ಪಟ್ಟಣದ ಬೆಳವಣಿಗೆ ಪೂರ್ಣ ಕುಂಠಿತವಾಯಿತು. ಈಗಲೂ ತಾಲ್ಲೂಕು ಕಛೇರಿ ಮತ್ತು ಸಾರ್ವಜನಿಕ ಸಂಸ್ಥೆಗಳೇ ಇದರ ಬೆಳವಣಿಗೆಗೆ ಅಲ್ಪಸ್ವಲ್ಪ ಸಹಾಯಕ ವಾಗಿವೆ; ಹೆಚ್ಚಿನ ಜನ ಬೇಸಾಯದ ಮೇಲೆ ಹೊಂದಿಕೊಂಡಿದ್ದಾರೆ. ಆದರೆ, ಈ ನಗರವನ್ನು ರಚಿಸಿದ ಮೂಲ ಉದ್ದೇಶ ಸೈನ್ಯ ಕಾರ್ಯಾ ಚರಣೆಯದು ಮತ್ತು ವೈರಿಗಳಿಗೆ ದುರ್ಗಮವೆನಿಸುವ ರಾಜಧಾನಿಯ ನಿರ್ಮಾಣವಾಗಿತ್ತು. ತಿರುಮಲ–ತಿರುಪತಿಯ ಉದಾಹರಣೆ ತೆಗೆದು ಕೊಂಡರೆ ದೇವಸ್ಥಾನಗಳು ನಗರ ಬೆಳವಣಿಗೆಗೆ ಎಷ್ಟು ಸಹಾಯಕವಾಗಿವೆ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ತಿರುಪತಿ ದೇವಸ್ಥಾನದ ವರಮಾನ ದಿಂದ ಸ್ಥಾಪಿತವಾದ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ, ಈ ನಗರ ಬೆಳವಣಿಗೆಗೆ ಮತ್ತಷ್ಟು ಪ್ರೇರಕವಾಗಿರುವುದೂ ವಿಶದವಾಗುತ್ತದೆ. ಅಲ್ಲಿಯ ಜನರ ಜೀವನ ದೇವಸ್ಥಾನವನ್ನು ಒಂದಲ್ಲ ಒಂದು ರೂಪದಲ್ಲಿ ಅವಲಂಬಿ ಸಿರುವುದರಿಂದ, ನಗರ ಬೆಳವಣಿಗೆಗೆ ಈ ಯಾತ್ರಾಸ್ಥಳ ಬಹುಪಾಲು ಸಹಾಯಕವಾಗಿದೆ. ಬೆಟ್ಟದ ಮೇಲ್ಗಡೆ ದೇವಸ್ಥಾನಕ್ಕೆ ಬರುವ ಯಾತ್ರಾರ್ಥಿ ಗಳಿಗಾಗಿ ದೇವಸ್ಥಾನದವರೂ, ಆಂಧ್ರ, ಮೈಸೂರು ಮತ್ತು ಮದರಾಸು ಸರಕಾರದವರೂ, ಖಾಸಗಿಯವರೂ, ವಸತಿಗೃಹಗಳನ್ನು ನಿರ್ಮಿಸಿ ಒಂದು ನಗರವೇ ಅಲ್ಲಿ ಬೆಳೆಯುವಂತೆ ಮಾಡಿದ್ದಾರೆ. ಬೆಟ್ಟದ ಕೆಳಗಿನ ತಿರುಪತಿ ನಗರವೂ ಸಹ ದೇವಾಲಯಗಳು ವಿಶ್ವವಿದ್ಯಾಲಯದ ಸಂಸ್ಥೆಗಳು, ಛತ್ರ ಗಳು, ವಾಸಸ್ಥಳಗಳು, ಅಂಗಡಿಗಳು ಹಾಗೂ ಕಛೇರಿಗಳಿಂದ ಕೂಡಿ, ತೀವ್ರ ಗತಿಯಲ್ಲಿ ಬೆಳೆಯುತ್ತಿದೆ.

ಇದೇ ರೀತಿ ನಂಜನಗೂಡು, ಉಡುಪಿ, ಮಣಿಪಾಲ, ಮಹದೇಶ್ವರಬೆಟ್ಟ

ಮುಂತಾದ ಸ್ಥಳಗಳಲ್ಲೂ, ಇಂತಹ ಸಂಸ್ಥೆಗಳಿಂದ ನಗರಗಳ ಬೆಳವಣಿಗೆ ಆಗುತ್ತಿರುವುದನ್ನು ನಾವು ನೋಡಬಹುದು.

ವಾಣಿಜ್ಯಕೇಂದ್ರಗಳು

ನಗರ ಬೆಳವಣಿಗೆಗೆ ಆದಿಯಲ್ಲಿ ಹೆಚ್ಚು ಪ್ರೇರಕವಾದದ್ದು ವಾಣಿಜ್ಯ. ಜನರು ವ್ಯವಸಾಯವನ್ನೇ ಅವಲಂಬಿಸಿದ್ದ ಕಾಲದಲ್ಲಿ, ಹತ್ತಾರು ಹಳ್ಳಿಗಳ ಮಧ್ಯೆ ವಾರಕ್ಕೊಮ್ಮೆ ಸಂತೆ ನಡೆಯುತ್ತಿದ್ದ ಗ್ರಾಮಗಳೂ, ಮತ್ತು ಸುತ್ತ ಮುತ್ತಲ ನೂರಾರು ಗ್ರಾಮಗಳಿಗೂ, ಹಳ್ಳಿಗಳಿಗೂ, ದೊಡ್ಡ ನಗರಗಳಿಗೂ ಸಂಬಂಧ ಕಲ್ಪಿಸಿ, ಒಂದರ ಸಾಮಾನುಗಳನ್ನು ಮತ್ತೊಂದು ಭಾಗಕ್ಕೆ ಪೂರೈಸಿಕೊಟ್ಟು ಜನರ ಜೀವನಕ್ಕೆ ಅನುಕೂಲವಾಗುವಂತೆ ಮಂಡಿ ನಗರ ಗಳೂ ಬೆಳೆದುವು. ಇವಲ್ಲದೆ, ಕೆಲವು ಭಾರೀ ನಗರಗಳು ಪ್ರಾಂತಮಟ್ಟದಲ್ಲಿ ಬೆಳೆದು ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಸಾಮಾನುಗಳನ್ನು ಒದಗಿಸುವ ವಾಣಿಜ್ಯ ಸಂಸ್ಥೆಗಳಿಂದ ಕೂಡಿದ್ದುವು. ಇವುಗಳಲ್ಲಿ ಬಂದರು ನಗರಗಳೂ, ಭಾರೀ ಸಂತೇಪೇಟೆಗಳನ್ನೊಳಗೊಂಡ ಪಟ್ಟಣಗಳೂ ಮುಖ್ಯ ವಾದುವು. ಹಿಂದೆ, ವಿಜಯನಗರ ಅಂತಹ ವಾಣಿಜ್ಯ ಕೇಂದ್ರವಾಗಿ ಬೆಳೆ ದಿದ್ದಿತಂತೆ. ಪೋರ್ಚುಗೀಸರು ಅರಬ್ಬೀ ಕುದುರೆಗಳನ್ನು ಮರ್ಮಗೋವಾ ಬಂದರು ಮೂಲಕ ತಂದು, ವಿಜಯನಗರಕ್ಕೂ ಬಹಮನಿ ರಾಜ್ಯಕ್ಕೂ ಸರಬರಾಜು ಮಾಡುತ್ತಿದ್ದುದು ಚರಿತ್ರಾರ್ಹ ವಿಷಯ. ಅದೇರೀತಿ, ಈ ಕಡೆಯಿಂದ ಮುತ್ತು, ರತ್ನ, ಸಾಂಬಾರ ಪದಾರ್ಥಗಳು ಮುಂತಾದುವನ್ನೆಲ್ಲಾ ಪರದೇಶಗಳಿಗೆ ಈ ಬಂದರು ಮೂಲಕ ಮಾತ್ರವೇ ಅಲ್ಲದೆ ಕಲ್ಲಿಕೋಟೆ, ಕೊಚ್ಚಿನ್ ಮುಂತಾದ ಬಂದರುಗಳ ಮೂಲಕವೂ ಸಾಗಿಸುತ್ತಿದ್ದು, ಇಂತಹ ವ್ಯಾಪಾರದಿಂದಾಗಿ ಆ ನಗರಗಳು ಬೆಳೆಯಲು ವಿಶೇಷ ಅನುಕೂಲವಾಗಿತ್ತು.

ಇತರ ಅನೇಕ ಬಂದರು ನಗರಗಳೂ ಸಹ ಮೊದಲು ವಾಣಿಜ್ಯ ಕೇಂದ್ರಗಳಾಗಿಯೇ ಬೆಳೆದು ಬ್ರಿಟಿಷರು ಭಾರತದ ಸಾಮಗ್ರಿಗಳನ್ನು ತಮ್ಮ ದೇಶಕ್ಕೆ ಸಾಗಿಸಲು ಮತ್ತು ಆಮದು ಮಾಡಿದ ಸಾಮಾನುಗಳನ್ನು ದೇಶದ ವಿವಿಧ ಭಾಗಗಳಿಗೆ ಹಂಚಲು ಅಂತಹ ನಗರಗಳಲ್ಲಿ ಏರ್ಪಾಡುಮಾಡಿದ್ದರು.

ಅಂತಹಕಡೆ ಅನೇಕ ಭಾರೀ ವಾಣಿಜ್ಯ ಸಂಸ್ಥೆಗಳೂ, ಬ್ಯಾಂಕುಗಳೂ, ಜೀವ ವಿಮಾ ಸಂಸ್ಥೆಗಳೂ ಬೆಳೆದುವು.

ದೇಶದ ಒಳಭಾಗದಲ್ಲೂ ಸಹ ಸಂಪರ್ಕಮಾರ್ಗಗಳು ಸಂಧಿಸುವ ಮತ್ತು ವ್ಯವಸಾಯ ಪ್ರಾಧಾನ್ಯತೆಯ ಸ್ಥಳಗಳಲ್ಲಿ ವಾಣಿಜ್ಯ ಕೇಂದ್ರಗಳು ಬೆಳೆದುವು. ಬೆಂಗಳೂರು, ದಾವಣಗೆರೆ, ಗದಗ್, ಹುಬ್ಬಳ್ಳಿ, ರಾಯಚೂರು, ಗಂಗಾವತಿ, ತಿಪಟೂರು, ಅರಸೀಕೆರೆ ಹಾಗೂ ಸಿರಸಿ ಮುಂತಾದ ಪಟ್ಟಣಗಳು ಇಂತಹ ಕೇಂದ್ರಗಳಿಗೆ ಉದಾಹರಣೆಗಳು. ಹಾಗೆಯೇ ಇತರ ರಾಜ್ಯಗಳಲ್ಲಿಯೂ ಬೇಕಾದಷ್ಟು ನಗರಗಳು ವಾಣಿಜ್ಯಕೇಂದ್ರಗಳಾಗಿ ಬೆಳೆಯುತ್ತಿವೆ. ಒಟ್ಟಿನಲ್ಲಿ ಹೇಳುವುದಾದರೆ ಎಲ್ಲಾ ನಗರಗಳಲ್ಲಿಯೂ ವಾಣಿಜ್ಯ ಮುಖ್ಯ ಚಟುವಟಿಕೆಗಳಲ್ಲೊಂದು. ಆದರೆ, ಕೆಲವು ನಗರಗಳಲ್ಲಿ ವಾಣಿಜ್ಯವೇ ಪ್ರಧಾನವಾಗಿದ್ದು ಅಂತಹ ನಗರಗಳನ್ನು ವಾಣಿಜ್ಯಕೇಂದ್ರಗಳಾಗಿ ವಿಂಗಡಿಸಬಹುದಾಗಿದೆ. ಅಂತಹ ಕೇಂದ್ರಗಳಲ್ಲಿ ಸಗಟು ವ್ಯಾಪಾರ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಉಳಿದಕಡೆ ಚಿಲ್ಲರೆ ವ್ಯಾಪಾರವೇ ಅಧಿಕ. ಕೈಗಾರಿಕಾ ಯುಗದಲ್ಲಿ ವಾಣಿಜ್ಯ ಕೇಂದ್ರಗಳಿಗೆ ಉತ್ತಮ ಭವಿಷ್ಯವಿದೆ. ಅನೇಕ ಕೈಗಾರಿಕೆಗಳು ಇಂತಹ ನಗರಗಳಲ್ಲಿಯೇ ಸ್ಥಾಪನೆಯಾಗುತ್ತವೆ.

ಕೈಗಾರಿಕಾ ಕೇಂದ್ರಗಳು

'ಕೈಗಾರಿಕಾ ಕ್ರಾಂತಿ' ಆದ ಮೇಲೆ, ದೊಡ್ಡ ದೊಡ್ಡ ಉದ್ದಿಮೆಗಳು ಸ್ಥಾಪನೆಯಾಗುತ್ತಾ ಬಂದುವು. ಪ್ರಪಂಚವು ಹಿಂದೆಂದೂ ನೋಡದಿದ್ದ ಭಾರೀ ಪ್ರಮಾಣದ ಕೈಗಾರಿಕೆಗಳು ಸ್ಥಾಪನೆಯಾದಂತೆಲ್ಲಾ, ಉದ್ಯೋಗ ನಿರೀಕ್ಷೆಯಿಂದ ಗ್ರಾಮಾಂತರ ಜನರು ಅಂತಹ ಕೈಗಾರಿಕಾ ಕೇಂದ್ರಗಳಿಗೆ ವಲಸೆ ಬರಲಾರಂಭಿಸಿದುದು, ನಗರಗಳು ರಭಸದಿಂದ ಬೆಳೆಯಲು ಪೂರಕವಾಯಿತು. ಮೊದಮೊದಲು ವಾಣಿಜ್ಯ ನಗರಗಳಲ್ಲಿ ಕೈಗಾರಿಕೆಗಳು ಸ್ಥಾಪಿತವಾದರೂ, ಕಾಲಕ್ರಮೇಣ ಕೆಲವು ಹೊಸ ಕೈಗಾರಿಕಾ ನಗರಗಳೇ ಸ್ಥಾಪಿತವಾಗಲಾರಂಭಿಸಿದುವು. ಭಾರತದಲ್ಲಿ ಅಂತಹ ನಗರವೆಂದರೆ ಜೆಮ್ಷೆದ್‌ಪುರ. ಈ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕಾನಗರ ಭಾರತದಲ್ಲೇ ಪ್ರಸಿದ್ಧವಾಗಿದೆ. ಮೈಸೂರಿನ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಹಾಗೂ

ಸಿಮೆಂಟ್ ಮತ್ತು ಕಾಗದ ಕಾರ್ಖಾನೆಗಳಿಂದಾಗಿ, ಭದ್ರಾವತಿ ಕೈಗಾರಿಕಾ ನಗರವಾಗಿ ಬೆಳೆದಿದೆ. ಕೋಲಾರದ ಚಿನ್ನದಗಣಿ ಪ್ರದೇಶದಲ್ಲಿ ಚಿನ್ನದಗಣಿ ಕೆಲಸಕ್ಕಾಗಿಯೇ ಒಂದೂವರೆ ಲಕ್ಷ ಜನಸಂಖ್ಯೆಯ ಒಂದು ನಗರ ಬೆಳೆಯಿತೆಂದರೆ, ಜನರಿಗೆ ಜೀವನೋಪಾಯವನ್ನೊದಗಿಸಿ, ನಗರ ಬೆಳವಣಿಗೆಗೆ ಪ್ರೋತ್ಸಾಹ ನೀಡುವಲ್ಲಿ ಕೈಗಾರಿಕೆಗಳು ವಹಿಸುವ ಮಹತ್ತರ ಪಾತ್ರವೇನೆಂಬುದನ್ನು ಅರಿಯಬಹುದು. ಇತ್ತೀಚೆಗೆ ದಾಂಡೇಲಿ ಕೂಡ ಕೈಗಾರಿಕಾ ನಗರವಾಗಿ ಬೆಳೆಯುತ್ತಿದೆ.

ಸ್ವಾತಂತ್ರ್ಯಾನಂತರ, ಭಾರತವು ಕೈಗಾರಿಕೆಯ ಪ್ರಗತಿಯತ್ತ ವಿಶೇಷಗಮನ ಹರಿಸಿತು. ಇದರ ಫಲವೇ ನಾಲ್ಕು ಭಾರೀ ಉಕ್ಕಿನ ಕಾರ್ಖಾನೆಗಳ ಸ್ಥಾಪನೆ. ತಲಾ ಸುಮಾರು 3 ದಶ ಲಕ್ಷ ಟನ್ ಉಕ್ಕು ಉತ್ಪಾದನಾ ಸಾಮರ್ಥ್ಯದ ಈ ಕಾರ್ಖಾನೆಗಳಲ್ಲಿ ಪ್ರತಿಯೊಂದರಲ್ಲೂ ಸುಮಾರು 25,000 ಜನರು ಕೆಲಸಮಾಡುವ ಅವಕಾಶವಿದೆ. ಇದೇರೀತಿ ಒಂದೊಂದರಲ್ಲಿ ಸುಮಾರು 3 ಲಕ್ಷ ಜನರಿರುವ ಕೈಗಾರಿಕಾನಗರಗಳು, ರೂರ್ಕೆಲ, ಭಿಲಾಯ್, ದುರ್ಗಾಪುರ ಮತ್ತು ರಾಂಚಿಯಲ್ಲಿ ನಿರ್ಮಿತವಾದುವು. ಹೊಸಪೇಟೆ, ಸೇಲಂ ಮತ್ತು ವಿಶಾಕಪಟ್ಟಣದ ಬಳಿ ಇಂತಹ ನಗರಗಳು ಮುಂದಕ್ಕೆ ನಿರ್ಮಾಣವಾಗಲಿವೆ. ಅಲ್ಲದೆ, ಗಣಿ ಪ್ರದೇಶಗಳಲ್ಲೂ ಕೈಗಾರಿಕಾ ನಗರಗಳು ಬೆಳೆಯುತ್ತಿವೆ.

ಮತ್ತೊಂದು ವಿಧವಾದ ಬೆಳವಣಿಗೆಯನ್ನೂ ನಾವು ಕಾಣಬಹುದು. ಅನೇಕ ನಗರಗಳಲ್ಲಿ ಭಾರೀ ಕಾರ್ಖಾನೆಗಳು ಸ್ಥಾಪಿತವಾಗಿ, ಇವು ಹಿಂದೆ ವಾಣಿಜ್ಯ ನಗರಗಳಾಗಿದ್ದರೂ, ಕ್ರಮೇಣ ಕೈಗಾರಿಕಾ ನಗರಗಳಾಗಿ ಪರಿವರ್ತನೆಗೊಂಡಿವೆ.

ಕೈಗಾರಿಕಾ ನಗರಗಳಲ್ಲಿ ಅನೇಕ ವಿಧಗಳಿವೆ. ಒಂಟಿ ಕಾರ್ಖಾನೆಯ ನಗರಗಳ ಆಯುಸ್ಸು ಆ ಕಾರ್ಖಾನೆಯ ಭವಿಷ್ಯದ ಮೇಲೆ ಅವಲಂಬಿಸಿರುತ್ತದೆ. ಕೋಲಾರದ ಚಿನ್ನದಗಣಿಯಲ್ಲಿ ಚಿನ್ನದ ಉತ್ಪನ್ನ ಕಡಿಮೆಯಾದಂತೆ, ನಗರದಿಂದ ಅನೇಕ ಸಂಸಾರಗಳು 1951 ರಿಂದೀಚೆಗೆ ಹೊರ ಹೋದವು. ಇದನ್ನು ತಪ್ಪಿಸುವ ಉದ್ದೇಶದಿಂದ ಭಾರತ ಸರ್ಕಾರ ಭಾರೀ

ಮಣ್ಣೆತ್ತುವ ಯಂತ್ರ ಕಾರ್ಖಾನೆಯನ್ನು 1965 ರಲ್ಲಿ ಸ್ಥಾಪಿಸಿ ಅಧೋಗತಿ ಗಿಳಿಯುತ್ತಿದ್ದ ಆ ನಗರವನ್ನು ರಕ್ಷಿಸಿತು.

ಜರ್ಮನಿಯಲ್ಲಿ ಹನೋವರ್ ಹತ್ತಿರ ಸಾಲಿಸ್ಕಿಟರ್ ಎಂಬ ಉಕ್ಕಿನ ಕಾರ್ಖಾನೆಯ ನಗರವೂ ಸಹ ಇಂತಹ ಪರಿಸ್ಥಿತಿಗೊಳಗಾಗಿದೆ. ಇಂಗ್ಲೆಂಡಿನಲ್ಲಿ ಅನೇಕ ಕಲ್ಲಿದ್ದಲು ಗಣಿ ಪಟ್ಟಣಗಳು, ಗಣಿಗಳು ಖಾಲಿಯಾದ ಮೇಲೆ ನಿರ್ಜನವಾಗಿ 'ಭೂತಗಳ ಪಟ್ಟಣ'ಗಳಾಗಿವೆ.ಆದರೆ ತದ್ವಿರುದ್ಧವಾಗಿ ವಿವಿಧ ಕೈಗಾರಿಕೆಗಳಿರುವ ನಗರಗಳು ಅತಿವೇಗದಿಂದ ಬೆಳೆದು ಹೆಚ್ಚು ಜನರನ್ನು ಆಕರ್ಷಿಸಿ, ನಗರ ಸಮಸ್ಯೆಗಳನ್ನು ಹೆಚ್ಚಿಸುತ್ತಿವೆ. ಕೈಗಾರಿಕಾ ಕೇಂದ್ರಗಳ ಶ್ರೇಣಿಗೆ ಸೇರುವ ಇತರ ನಗರಗಳೆಂದರೆ, ಭಾರೀ ಪ್ರಮಾಣದ ಕಣಿವೆ ಯೋಜನೆಗಳಿಗಾಗಿ ನಿರ್ಮಿಸಿರುವ ಪಟ್ಟಣಗಳು. ಕೈಗಾರಿಕೆ ಮತ್ತು ನಗರ ಬೆಳವಣಿಗೆ ಅವಳಿ– ಜವಳಿಯಂತೆ ಮುಂದುವರಿಯುತ್ತಿರುವ ಈ ಕಾಲದಲ್ಲಿ, ಅನೇಕ ನಗರಗಳು ಕೈಗಾರಿಕಾ ನಗರಗಳಾಗಲು ಪೈಪೋಟಿಯೇ ನಡೆಯುತ್ತಿದೆ. ಆದರೆ, ಜಪಾನ್ ದೇಶದಲ್ಲಿ ಕೈಗಾರಿಕೆಗಳ ಮಲಿನತೆಯಿಂದ ಅಲ್ಲಿನ ನಗರಗಳಲ್ಲಿ ಜನಾರೋಗ್ಯ ವಿಪರೀತವಾಗಿ ಹದಗೆಡಲೂ ಪ್ರಾರಂಭವಾಗಿದೆಯಂತೆ. ಅಂದರೆ, ಕೈಗಾರಿಕಾ ನಗರಗಳ ಸಮಸ್ಯೆಗಳೂ ಅಪಾರವೆಂದಾಯಿತು. ಆರ್ಥಿಕ ಬೆಳವಣಿಗೆಗೆ ಕೈಗಾರಿಕೆಗಳು ಹೆಚ್ಚು ಆವಶ್ಯಕವಾದುದರಿಂದ ಅವುಗಳಿಗೆ ಸ್ಥಳ ನಿಗದಿ ಮಾಡುವಾಗ ವಿಶೇಷ ಎಚ್ಚರಿಕೆ ವಹಿಸಬೇಕಾಗುತ್ತದೆ. ಇದು ಕೈಗಾರಿಕಾಯುಗವಾದುದರಿಂದ ಕೈಗಾರಿಕಾ ನಗರಗಳ ಬೆಳವಣಿಗೆ ಭಾರತದಲ್ಲಿ ಇನ್ನೂ ಹೆಚ್ಚುವುದು ಖಂಡಿತ.

ಜಾತ್ರೆ ಮತ್ತು ಕ್ರೀಡಾ ಕೇಂದ್ರಗಳು


ಭಾರತದಲ್ಲಿ ಕ್ರೀಡಾಕೇಂದ್ರಗಳಿಗಿಂತಲೂ ತೀರ್ಥಯಾತ್ರಾ ಕೇಂದ್ರಗಳೂ, ಜಾತ್ರಾ ಕೇಂದ್ರಗಳೂ ವಿಶೇಷವಾಗಿವೆ. ಇಂತಹ ಗ್ರಾಮ ಅಥವಾ ಹಳ್ಳಿಗಳಲ್ಲಿ ಕೆಲವುಕಾಲ ಜನ ಸಂಖ್ಯೆ ಅತಿಯಾಗಿದ್ದು ಮಿಕ್ಕವೇಳೆಗಳಲ್ಲಿ ಬಹಳ ಕಡಿಮೆ ಇರುತ್ತದೆ. ಜಾತ್ರೆಗಳಂತೂ ವರ್ಷದಲ್ಲಿ ಕೆಲವು ವಾರಗಳು ಮಾತ್ರ ನಡೆದು ಆಗ ಸೇರುವ ಜನ ದನಗಳ ಮೇಳಕ್ಕೆ ಬೇಕಾಗುವ ನೀರು, ದೀಪ, ಆಸ್ಪತ್ರೆ, ರಸ್ತೆ ಮುಂತಾದುವುಗಳನ್ನು ಶಾಶ್ವತವಾಗಿ ಏರ್ಪಡಿಸಬೇಕಾ

ಗುತ್ತದೆ. ನಮ್ಮ ರಾಜ್ಯದಲ್ಲಿ ಇಂತಹ ಜಾತ್ರಾ ಕೇಂದ್ರಗಳಲ್ಲಿ ಮುಖ್ಯವಾದುವೆಂದರೆ ಮೈಸೂರು ಜಿಲ್ಲೆಯ ಮಹದೇಶ್ವರ ಮತ್ತು ಚುಂಚನಕಟ್ಟೆ, ಹಾಸನ ಜಿಲ್ಲೆಯ ಹೇಮಗಿರಿ, ಬೆಂಗಳೂರು ಜಿಲ್ಲೆಯ ಘಾಟಿಸುಬ್ರಹ್ಮಣ್ಯ, ಬೆಳಗಾವಿ ಜಿಲ್ಲೆಯ ಎಲ್ಲಮ್ಮ ಗುಡ್ಡ, ಉತ್ತರ ಕನ್ನಡ ಜಿಲ್ಲೆಯ ಉಳವಿ ಕ್ಷೇತ್ರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯ. ಇವಲ್ಲದೆ ಇನ್ನೂ ಅನೇಕ ಕಡೆ ಇರುವ ನಗರಗಳೂ ಸಹಾ ಜಾತ್ರಾ ಕೇಂದ್ರಗಳಾಗಿವೆ. ಆದ್ದರಿಂದ ಅಂತಹ ನಗರಗಳ ಜನಸಂಖ್ಯೆಯ ಜೊತೆಗೆ ಜಾತ್ರೆಯ ಜನರೂ ಸೇರುತ್ತಾರೆ.ಉದಾಹರಣೆಗೆ, ಹಾಸನ, ನಂಜನಗೂಡು, ತೀರ್ಥಹಳ್ಳಿ, ಉಡುಪಿ, ಗೋಕರ್ಣ, ಗುಲ್ಬರ್ಗ, ಗಂಜಾಂ ಮುಂತಾದುವನ್ನು ಕಾಣಬಹುದು. ತಿರುಪತಿಯಲ್ಲಂತೂ ಪ್ರತಿನಿತ್ಯ ಜಾತ್ರೆ. ಹಾಗೆಯೇ, ಪಂಡರೀಪುರ, ಹರಿದ್ವಾರ, ಕಾಶಿ, ರಾಮೇಶ್ವರ, ಕಂಚೀಪುರ, ಪುರಿ ಮುಂತಾದ ಕಡೆ ಪ್ರತಿನಿತ್ಯ ಯಾತ್ರಾರ್ಥಿಗಳ ಪ್ರವಾಹ ಇದ್ದೇ ಇರುತ್ತದೆ. ಇವರಿಗೆಲ್ಲಾ ಅನುಕೂಲತೆಗಳನ್ನು ಏರ್ಪಡಿಸಿ ಈ ನಗರಗಳು ಬೆಳೆಯುತ್ತಿರುತ್ತವೆ.

ಕ್ರೀಡಾ ಕೇಂದ್ರಗಳು ಅಷ್ಟೇನೂ ಅದ್ಭುತವಾಗಿ ಗೋಚರಿಸದಿದ್ದರೂ ಈ ಕೆಳಗೆ ಕಂಡ ಸ್ಥಳಗಳನ್ನು ನೋಡಿದರೆ ಇಂತಹ ಕೇಂದ್ರಗಳ ಭವಿಷ್ಯ ಉತ್ತಮವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಮೈಸೂರು :	ಬೃಂದಾವನ	ಉದ್ಯಾನವನ (ಚಿತ್ರ 4)
	ಜೋಗ್	ಪ್ರವಾಸೀಕೇಂದ್ರ
	ಕೆಮ್ಮಣ್ಣುಗುಂಡಿ	ಗಿರಿಧಾಮ
	ನಂದಿ ಬೆಟ್ಟ	ಬೇಸಿಗೆ ಕೇಂದ್ರ
ತಮಿಳುನಾಡು :	ಊಟಿ	ಬೇಸಿಗೆ ರಾಜಧಾನಿ
ಉತ್ತರ ಪ್ರದೇಶ :	ಮುಸ್ಸೋರಿ	ಬೇಸಿಗೆ ರಾಜಧಾನಿ
ಕಾಶ್ಮೀರ :	ಶ್ರೀನಗರ	ಪ್ರವಾಸೀ ಕೇಂದ್ರ
	ಗುಲ್ಮಾರ್ಗ್	ಚಳಿಗಾಲದ ಆಟಗಳ ತಾಣ
	ಪಹಲ್ಗಾಂವ್	ವಿಶ್ರಾಂತಿಧಾಮ

ಮುಸ್ಸೋರಿಯಲ್ಲಿ ಜನಸಂಖ್ಯೆ ಬೇಸಿಗೆಯಲ್ಲಿ ಇತರ ಕಾಲದ ಜನಸಂಖ್ಯೆಗಿಂತ ನಾಲ್ಕು ಪಟ್ಟು ಜಾಸ್ತಿಯಾಗಿರುವುದು. ಚಳಿಗಾಲದಲ್ಲಿ ಬಂಗಲೆ



ಚಿತ್ರ ೪. ಬೃಂದಾವನದ ನೋಟ

ಗಳನ್ನು ನೋಡಿಕೊಳ್ಳುವ ಮತ್ತು ಇತರ ಸಿಬ್ಬಂದಿ ವರ್ಗವನ್ನು ಬಿಟ್ಟರೆ ಹೆಚ್ಚಿನ ಜನರೆಲ್ಲಾ ತಮ್ಮ ತಮ್ಮ ಊರುಗಳಿಗೆ ತೆರಳುವರು. ಕಾಶ್ಮೀರದ ರಾಜಧಾನಿ ಶ್ರೀನಗರದಿಂದ ಜಮ್ಮುವಿಗೆ ನವೆಂಬರ್ 1 ರಿಂದ ಏಪ್ರಿಲ್ 1 ರ ವರೆಗೆ ಬದಲಾಗುವುದು. ಇದೇರೀತಿ ಇತರ ದೇಶಗಳಲ್ಲೂ ಅನೇಕ ಕ್ರೀಡಾ ಕೇಂದ್ರಗಳೂ ಹವಾಮಾನ ಬದಲು ಜಾಗಗಳೂ ನಿರ್ಮಿತವಾಗಿವೆ. ಶೀತ ವಲಯದ ಜನರು ಚಳಿಗಾಲದಲ್ಲಿ ತಮ್ಮ ಊರುಗಳಿಂದ ಹೊರಟು, ಅಮೆರಿಕ ದಲ್ಲಿ ಫ್ಲಾರಿಡಾ, ಹವಾಯ್ ಮುಂತಾದ ಕಡೆಗೂ,ಯೂರೋಪಿನಲ್ಲಿ ಗ್ರೀಸ್, ಇಟಲಿ ಮುಂತಾದ ಮೆಡಿಟರೇನಿಯನ್ ಸಮುದ್ರತೀರ ಪ್ರದೇಶಗಳಿಗೂ ಹೋಗಿ ಕಾಲ ಕಳೆದು ಬರುವುದು ರೂಢಿಯಾಗುತ್ತಿದೆ. ಇದರಿಂದಾಗಿ ಪ್ರವಾಸೀ ಕೇಂದ್ರಗಳೂ. ಕ್ರೀಡಾ ಕೇಂದ್ರಗಳೂ, ಹವಾ ಬದಲಾವಣಾ ಸ್ಥಳಗಳೂ ಅಭಿವೃದ್ಧಿಯಾಗುತ್ತಾ ಬರುತ್ತಿವೆ. ಈ ಕೇಂದ್ರಗಳ ಸಮಸ್ಯೆ ಗಳಿಗೂ ಇತರ ಸಾಧಾರಣ ನಗರಗಳ ಸಮಸ್ಯೆಗಳಿಗೂ ವ್ಯತ್ಯಾಸವಿರುತ್ತದೆ. ಈ ಸಮಸ್ಯೆಗಳನ್ನು ಅರಿತುಕೊಂಡು ಇಂತಹ ಕೇಂದ್ರಗಳನ್ನು ಯೋಜನಾ ಬದ್ಧವಾಗಿ ನಿರ್ಮಿಸಬೇಕಾಗುತ್ತದೆ.

ಮಹಾನಗರಗಳು

ಹತ್ತು ಲಕ್ಷಕ್ಕಿಂತ ಅಧಿಕ ಜನಸಂಖ್ಯೆ ಇರುವ ನಗರಗಳನ್ನು ಮೆಟ್ರೋಪಾಲಿಟನ್ ನಗರಗಳು ಅಥವಾ ಮಹಾನಗರಗಳೆಂದು ಕರೆಯು ವುದು ವಾಡಿಕೆ. ಇಂತಹ ನಗರಗಳಲ್ಲಿ ಯಾವುದೇ ಒಂದು ಚಟುವಟಿಕೆ ಇತರ ಕಾರ್ಯಗಳನ್ನು ತಗ್ಗಿಸಿ ಆ ನಗರಗಳಿಗೆ ಪ್ರತ್ಯೇಕವಾದ ವಿಶಿಷ್ಟತೆ ಯನ್ನು ದೊರಕಿಸುವುದು ಅಷ್ಟೇನೂ ಸುಲಭವಲ್ಲ. ಅಂತಹ ನಗರಗಳಲ್ಲಿ ಒಂದಕ್ಕಿಂತ ಹೆಚ್ಚು ಕಾರ್ಯಗಳು ಸರಿಸಮಾನ ಪ್ರಭಾವವನ್ನು ಬೀರು ತ್ತಿರುತ್ತವೆ. ಅಲ್ಲದೆ ವಿವಿಧ ಭಾಷೆಯ ಹಾಗೂ ಬೇರೆ ಬೇರೆ ಸಂಸ್ಕೃತಿಯ ಜನರ ಸಮ್ಮಿಳನವನ್ನು ಅಲ್ಲಿ ನೋಡಬಹುದು. ಇಂತಹ ನಗರಗಳು ಇಡೀ ಪ್ರಾಂತಕ್ಕೆ ರಾಜಧಾನಿಗಳಂತೆ ಪ್ರಭಾವಯುತವಾಗಿರುತ್ತವೆ.

ಮಹಾನಗರಗಳ ಬೆಳವಣಿಗೆ ಇತ್ತೀಚಿನದು. 1800 ರಿಂದ 1850ರ ಮಧ್ಯೆ, 10 ಲಕ್ಷವನ್ನು ಮೀರಿ ಜನಸಂಖ್ಯೆ ಹೊಂದಿದ್ದ ಎರಡೇ ನಗರ

ಗಳೆಂದರೆ ಲಂಡನ್ ಮತ್ತು ಪ್ಯಾರಿಸ್. 1900ರ ವೇಳೆಗೆ, ಬರ್ಲಿನ್, ಚಿಕಾಗೋ, ನ್ಯೂಯಾರ್ಕ್, ಫಿಲೆಡೆಲ್ಫಿಯ, ಲೆನಿನ್‌ಗ್ರಾಡ್, ಟೋಕಿಯೋ ಮತ್ತು ವಿಯನ್ನಾ–ಈ ಏಳು ನಗರಗಳು ಮಹಾನಗರಗಳ ಸಾಲಿಗೆ ಸೇರಿದವು. ಈ ಶತಮಾನದ ಪೂರ್ವಾರ್ಧದಲ್ಲಿ ಸುಮಾರು 65 ಪಟ್ಟಣಗಳು ಅಂತಹ ಮಹಾನಗರಗಳ ಶ್ರೇಣಿಗೆ ಏರಿವೆ. ಲಂಡನ್, ನ್ಯೂಯಾರ್ಕ್ ಮತ್ತು ಟೋಕಿಯೋ ನಗರಗಳಂತೂ ಒಂದು ಕೋಟಿ ಜನಸಂಖ್ಯೆಯನ್ನು ಮೀರಿಸಿವೆ.

ನಮ್ಮ ದೇಶದಲ್ಲಿ ಕಲ್ಕತ್ತ ಹಾಗೂ ಮುಂಬಯಿ 60 ಲಕ್ಷ ಜನಸಂಖ್ಯೆಯನ್ನು ಮೀರಿಸಿವೆ. ಹತ್ತು ಲಕ್ಷ ಜನಸಂಖ್ಯೆಯನ್ನು ದಾಟಿರುವ ಇತರ ನಗರಗಳು ಏಳು. ಅವುಗಳೆಂದರೆ :

1. ದೆಹಲಿ
2. ಮದರಾಸು
3. ಹೈದರಾಬಾದ್
4. ಬೆಂಗಳೂರು
5. ಅಹ್ಮದಾಬಾದ್
6. ಕಾನ್‌ಪುರ
7. ಪೂನ

ದುರ್ಗಗಳು

ಹಿಂದೆ ನಿರ್ಮಿಸಿದ ನಗರಗಳೆಲ್ಲವೂ ನೀರಿನ ವಸತಿ ಇದ್ದ ಕಡೆಯೋ ಹೆಚ್ಚಾಗಿದ್ದುದೂ ಮತ್ತು ರಾಜರೂ, ಪಾಳಯಗಾರರೂ ತಮ್ಮ ರಾಜಧಾನಿಗಳನ್ನು ಶತ್ರುಗಳ ಧಾಳಿಗೆ ನಿಲುಕದಂತೆ ಕಟ್ಟುತ್ತಿದ್ದುದೂ ಸಾಮಾನ್ಯವಾಗಿತ್ತು. ಇವುಗಳಲ್ಲಿ ಸಾಮಾಜಿಕ ಆವಶ್ಯಕತೆಗಳಿಗಿಂತ ಸೈನಿಕ ಬೇಡಿಕೆಗಳಿಗೇ ಹೆಚ್ಚು ಪ್ರಾಧಾನ್ಯತೆ ಇತ್ತು. ರೋಮನ್ ಶಿಬಿರಗಳೂ, ಮಧ್ಯಯುಗದ ನಗರಗಳೂ, ಕೋಟೆಗಳಿಂದ ಸುತ್ತುವರಿದು ಸೈನ್ಯ ಕಾರ್ಯಾಚರಣೆಗೆ ಅನುಕೂಲವಾಗಿರುವಂತೆ ನಿರ್ಮಿತವಾಗಿದ್ದುವು. ಭಾರತದಲ್ಲಿ ಕೂಡ, ಇಂತಹ ನಗರಗಳು ಬೇಕಾದಷ್ಟಿವೆ. ಪುರಾತನ ನಗರಗಳಲ್ಲದೆ ಚರಿತ್ರೆಯು ಪ್ರಾರಂಭವಾದ ಮೇಲೆ ನಿರ್ಮಿತವಾದ ನಗರಗಳೆಲ್ಲವೂ ಶತ್ರುಗಳಿಗೆ ದುರ್ಗಮವಾದ ರೀತಿಯಲ್ಲಿ ಕಟ್ಟಲ್ಪಟ್ಟಿದ್ದುವು. ಮೊಗಲರ ಕಾಲದಲ್ಲಿ ಸಹ ಆಗ್ರ, ದೆಹಲಿ, ಫತೇಪುರ್‌ಸಿಕ್ರಿ ಮುಂತಾದ ನಗರಗಳು

ದೊಡ್ಡ ಕೋಟೆಗಳಿಂದಲೂ, ಕಂದಕಗಳಿಂದಲೂ ಸುತ್ತುವರಿದಿದ್ದು, ನಗರಗಳಿಗೆ ಸುರಕ್ಷತೆಯನ್ನು ದೊರಕಿಸಿದ್ದುವು. ಬಹುಮನಿ ರಾಜ್ಯದ ರಾಜಧಾನಿಗಳಾದ ಬಿಜಾಪುರ, ಗುಲ್ಬರ್ಗ, ರಾಯಚೂರು, ಬೀದರ್ ಮತ್ತು ಅಹ್ಮದ್ ನಗರಗಳೂ, ಕುತುಬ್‌ಷಾಹಿಗಳ ರಾಜಧಾನಿ ಗೋಲ್ಕೊಂಡ, ವಿಜಯನಗರ ರಾಜಧಾನಿ ವಿಜಯನಗರ–ಇವೆಲ್ಲವೂ ದೊಡ್ಡ ಕೋಟೆಗಳಿಂದ ರಕ್ಷಣೆ ಪಡೆದಿದ್ದುವು. ಕೆಲವು ಕಡೆ ಬೆಟ್ಟಗಳ ಮೇಲೆ ಬಹಳ ಜಾಣ್ಮೆಯಿಂದ ಕೋಟೆಗಳನ್ನು ನಿರ್ಮಿಸಿ ರಾಜಧಾನಿಗಳನ್ನು ದುರ್ಗಗಳಲ್ಲಿ ಸ್ಥಾಪಿಸಿದ್ದುದು ಚರಿತ್ರಾರ್ಹವಾಗಿದೆ. ಇವುಗಳಲ್ಲಿ, ಮಹಮದ್ ಬಿನ್ ತೊಗಲಕನು ದೆಹಲಿಯಿಂದ ಭಾರತದ ರಾಜಧಾನಿಯನ್ನು ಬದಲಿಸಿದ್ದ ದೇವಗಿರಿ, ಔರಂಗಾಬಾದ್‌ಗೆ ಹತ್ತಿರದಲ್ಲಿ ಇಂದಿಗೂ ನೋಡಬಹುದಾದ ದುರ್ಗವಾಗಿದೆ. ಚಿತ್ರದುರ್ಗ ಮತ್ತು ನಂದೀದುರ್ಗ ನಮ್ಮ ಮೈಸೂರು ಸೀಮೆಯ ಪ್ರಸಿದ್ಧ ದುರ್ಗಗಳು. ಹಾಗೆಯೇ ರಾಜಾಸ್ಥಾನದಲ್ಲೂ, ಮಹಾರಾಷ್ಟ್ರದಲ್ಲೂ, ರಜಪೂತರಾಜರೂ, ಶಿವಾಜಿಯೂ ಕಟ್ಟಿದ ಅನೇಕ ದುರ್ಗಗಳಿವೆ. ಟಿಪ್ಪುಸುಲ್ತಾನನು ಶ್ರೀರಂಗಪಟ್ಟಣವನ್ನು ಕಾವೇರಿ ನದಿಯ ಮಧ್ಯೆ ದ್ವೀಪದಲ್ಲಿ ತನ್ನ ರಾಜಧಾನಿಯಾಗಿ ಮಾಡಿಕೊಂಡು, ದೊಡ್ಡ ಕಂದಕ ಮತ್ತು ಕೋಟೆಯಿಂದ ಸಂರಕ್ಷಿಸಿದ್ದ. ಆದುದರಿಂದಲೇ ಆಂಗ್ಲರು ಇವನನ್ನು ಸೋಲಿಸಲು ನಾಲ್ಕು ಸಾರಿ ಯುದ್ಧ ಮಾಡಬೇಕಾಯಿತು. ಬ್ರಿಟಿಷರೂ ಸಹ ಅನೇಕ ಕೋಟೆಕೊತ್ತಳಗಳನ್ನು ಕಲ್ಕತ್ತ, ಮುಂಬಯಿ, ಮದರಾಸು ಮುಂತಾದ ಕಡೆಗಳಲ್ಲಿ ನಿರ್ಮಿಸಿದ್ದರು. ಆದರೆ, ಯುದ್ಧಕಲೆಯಲ್ಲಿ ಬದಲಾವಣೆಯಾಗಿ ವಿಮಾನಗಳು ಹಾಗೂ ಬಾಂಬು ಥಾಳಿ ಮುಂತಾದುವು ಪ್ರಚಾರಕ್ಕೆ ಬಂದಂತೆ, ಕೋಟೆಗಳು ನಗರಗಳನ್ನು ಸಂರಕ್ಷಿಸಲು ಅಸಮರ್ಥವಾದವು. ಪ್ರಕೃತ, ಕೋಟೆಗಳು ಕೇವಲ ಚರಿತ್ರಾ ರಚನೆಯ ಸಾಧನಗಳಾಗಿ, ಹೊಲಕ್ಕೆ ಬೇಲಿ ಇದ್ದಂತೆ ಉಳಿದಿವೆ. ಕೆಲವು ಕಡೆ ಕೋಟೆಗಳೆಲ್ಲಾ ಮುರಿದು ಬೀಳುತ್ತಿವೆ. ಕಂದಕಗಳು ಹೂತು ಹೋಗಿ ನಗರಕ್ಕೆ ಕಂಟಕಪ್ರಾಯವಾಗಿವೆ.

ಈ ರೀತಿ ನಗರಗಳ ಬೆಳವಣಿಗೆ ವೈವಿಧ್ಯಮಯವಾಗಿತ್ತು. ಆಧುನಿಕತೆಗೆ ಹೊಂದುವಂತೆ ಅವು ಮಾರ್ಪಾಡಾಗುತ್ತಲೂ ಇವೆ. ಆಧುನಿಕ ಸಂಚಾರ ವ್ಯವಸ್ಥೆ–ಕಾರುಗಳು, ರೈಲು ಮತ್ತು ವಿಮಾನ–ಇವುಗಳಿಂದಾಗಿ

ನಗರಗಳ ರಚನೆಯಲ್ಲಿ ಹೊಸ ವಿಧಾನಗಳು ಬಳಕೆಯಲ್ಲಿ ಬರುತ್ತಿವೆ. ಈಗ ಜನರ ಆವಶ್ಯಕತೆಗಳು ನಗರಗಳನ್ನು ರೂಪಿಸುತ್ತಿವೆ. ವಿಜ್ಞಾನ ಮತ್ತು ತಂತ್ರಗಳು ಪ್ರಗತಿ ಹೊಂದಿದಂತೆ, ನಗರಗಳ ಬೆಳವಣಿಗೆ ಬದಲಾವಣೆ ಹೊಂದಿ, ಒಂದು ರೀತಿಯ ನವಶಕ್ತಿ ಹಾಗೂ ಹೊಸ ರೂಪ ನಗರಗಳಿಗೆ ಬರುತ್ತಿದೆ. ಮುಖ್ಯ ಕಾರ್ಯಗಳನ್ನವಲಂಬಿಸಿ ನಗರಗಳು ಬೆಳೆಯುತ್ತಿದ್ದು ಸಾಮಾನ್ಯವಾಗಿ ತಮ್ಮ ವೈಶಿಷ್ಟ್ಯವನ್ನು ಕಳೆದುಕೊಳ್ಳುತ್ತಿರುವಂತೆ ಕಂಡು ಬರುತ್ತಿದ್ದರೂ, ಸೂಕ್ಷ್ಮವಾಗಿ ಪರಿಶೀಲಿಸಿದರೆ, ನಗರದಲ್ಲಿರುವ ವೈವಿಧ್ಯತೆ ನಮಗೆ ಗೋಚರವಾಗುತ್ತದೆ. ಮೇಲೆ ಪ್ರಸ್ತಾಪಿಸಿದ ಐದು ವಿಧದಲ್ಲಿ ಯಾವುದಾದರೂ ಒಂದರಲ್ಲಿ ಪ್ರತಿ ನಗರವೂ ಸೇರಬೇಕಾಗುತ್ತದೆ.

ಆದರೆ ಗ್ರಾಮಗಳಲ್ಲಿ ಈ ರೀತಿಯ ವಿಂಗಡಣೆ ಬಹಳ ಕಷ್ಟ. ಸಾಮಾನ್ಯ ವಾಗಿ ವ್ಯವಸಾಯ, ಮೀನುಗಾರಿಕೆ, ಜಾತ್ರೆ, ಸಂತೆ, ಗೃಹಕೈಗಾರಿಕೆ ಮುಂತಾದ ಕಸಬಿಗನುಗುಣವಾಗಿ, ಅವನ್ನು ವಿಂಗಡಿಸಬಹುದು. ಭಾರತದ ಹಳ್ಳಿಗಳಲ್ಲಿ ನೂರಕ್ಕೆ ತೊಂಬತ್ತು ವ್ಯವಸಾಯವನ್ನೇ ಅವಲಂಬಿಸಿವೆಯೆಂದು ಧಾರಾಳವಾಗಿ ಹೇಳಬಹುದು. ಶೇಕಡಾ 75ರಷ್ಟು ಜನರು ಗ್ರಾಮಗಳಲ್ಲಿ ಈಗ ವಾಸಿಸುತ್ತಿದ್ದರೂ, ಮುಂದೆ ನಗರಗಳು ಬೆಳೆದಂತೆ ಈ ಸಂಖ್ಯೆ ಕಡಿಮೆ ಯಾಗಿ ನಗರಗಳಲ್ಲಿ ಶೇಕಡಾ 50 ರಷ್ಟು ಜನರು ವಾಸಿಸುವ ಕಾಲ ಈ ಶತಮಾನದ ಅಂತ್ಯದ ವೇಳೆಗೆ ಬರಬಹುದೆಂದು ಕಾಣುತ್ತದೆ.

೩. ನಗರ ರಚನಾ ಕೌಶಲ

ಪಟ್ಟಣ ಮತ್ತು ಗ್ರಾಮಗಳ ಯೋಜನೆಯನ್ನು ಸಾಮಾನ್ಯವಾಗಿ 'ನಗರ ಯೋಜನೆ' ಎಂದೇ ಸಂಬೋಧಿಸಲಾಗುತ್ತಿದೆ. ಈ ಸಮಗ್ರ ದೃಷ್ಟಿಯಲ್ಲಿ 'ನಗರ ಯೋಜನೆ' ಹಳ್ಳಿಗಳು, ನಗರಗಳು ಮತ್ತು ಮಹಾನಗರಗಳು ಮಾತ್ರವೇ ಅಲ್ಲದೆ, ಪ್ರಾಂತೀಯ ಹಾಗೂ ಇಡೀ ದೇಶದ ಯೋಜನೆಗಳಿಗೂ ಸಂಬಂಧಿಸುತ್ತದೆ. ನಗರ ಯೋಜನೆ ಎಂದರೆ ಬರೀ ರಸ್ತೆಗಳನ್ನು ನಿರೂಪಿಸಿ ಮನೆ ಮತ್ತು ಸಾರ್ವಜನಿಕ ಭವನಗಳನ್ನು ನಿರ್ಮಿಸುವುದೆಂಬ ಸಂಕುಚಿತ ಕಲ್ಪನೆ ಅನೇಕವೇಳೆ ಜನರಲ್ಲಿ ಕಂಡುಬರುತ್ತದೆ. ಆದರೆ, ನಗರ ಯೋಜನೆ ಫಲಪ್ರದವಾಗಬೇಕಾದರೆ ಗ್ರಾಮ ಯೋಜನೆಯಿಂದ ಮೊದಲ್ಗೊಂಡು ಇಡೀ ದೇಶವನ್ನೇ ಅದು ಆವರಿಸಬೇಕು ; ಅದರ ವಾಸ್ತವಿಕ ಆವಶ್ಯಕತೆಯನ್ನು ಕುರಿತು ಸಾರ್ವಜನಿಕರಲ್ಲಿ ತಿಳುವಳಿಕೆ ಉಂಟಾಗಬೇಕು.

ಗ್ರಾಮಗಳ ಮಟ್ಟದಲ್ಲಿ ಇಂತಹ ಯೋಜನೆ ಅಷ್ಟೇನೂ ಕ್ಲಿಷ್ಟವಾಗಿರುವುದಿಲ್ಲ. ಅಲ್ಲಿ ಮನೆಗಳ ನಿವೇಶನಗಳಿಗೂ, ಶಾಲೆ, ಅಂಗಡಿ, ಗ್ರಾಮ ಕೈಗಾರಿಕೆ ಮತ್ತು ಹಿತ್ತಲುಗಳಿಗೂ ನಿವೇಶನಗಳನ್ನು ಆರಿಸುವ ಸಂಬಂಧವಾಗಿ ವಿಶೇಷ ಗಮನ ಅಗತ್ಯ. ಪಟ್ಟಣಗಳಲ್ಲಿ ನಗರ ಯೋಜಕನು ಸ್ವಲ್ಪ ಗಡುಸಾದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ವಾಸಸ್ಥಳ ಮತ್ತು ಕೈಗಾರಿಕೆಗೆ ಆವಶ್ಯಕವಾದ ಸ್ಥಳಗಳನ್ನು ವಿಂಗಡಿಸುವುದು, ವಾಸದ ಸ್ಥಳಗಳಿಂದ ಉದ್ಯೋಗ ಕೇಂದ್ರಗಳಿಗೆ ಜನಸಂಚಾರ ಮತ್ತು ಸಾಮಾನು ಸಾಗಣೆಯ ವ್ಯವಸ್ಥೆ, ನೀರು ಹಾಗೂ ದೀಪ ಪೂರೈಕೆ ಮತ್ತು ವಲಯವಿಭಾಗ ಮುಂತಾದವುಗಳಿಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ.

ಮಹಾನಗರದಲ್ಲಿ ನಗರ ಯೋಜಕನು ಅದೊಂದೇ ನಗರದ ದೃಷ್ಟಿಯಿಂದಾಗಲೀ, ಅಥವಾ ಒಂದು ಭಾಗದ ದೃಷ್ಟಿಯಿಂದಾಗಲೀ ಯೋಜನೆಯನ್ನು ತಯಾರಿಸುವಂತಿಲ್ಲ. ಬದಲಾಗಿ ಅಂತಹ ನಗರಗಳೂ ಅವುಗಳ ಸುತ್ತಮುತ್ತಲ ಗ್ರಾಮಗಳೂ ಒಂದಕ್ಕೊಂದು ಪೂರಕವಾಗಿ ಬೆಳೆಯುವ ರೀತಿಯಲ್ಲಿ ಹಾಗೂ ಅಂತಹ ಪ್ರದೇಶದ ಸಂಪನ್ಮೂಲಗಳನ್ನು ಬೆಳೆಸಿ

ಕೊಳ್ಳಲು ಸಹಾಯಕವಾಗುವ ರೀತಿಯಲ್ಲಿ ಯೋಜನೆಯನ್ನು ತಯಾರಿಸ ಬೇಕಾಗುವುದು. ಪ್ರಾದೇಶಿಕ ಮಟ್ಟದಲ್ಲಿ ಆ ಪ್ರದೇಶದ ಸಂಪತ್ತನ್ನು ಅತ್ಯುತ್ತಮವಾಗಿ ಬಳಸುವ ವಿಧಾನ, ಅಂತಹ ಪ್ರದೇಶದ ಒಳವಲಯ ಹಾಗೂ ಹೊರವಲಯಗಳಿಗೆ ಸಂಬಂಧಿಸಿದ ಸಂಚಾರ ಮತ್ತು ಸಂಪರ್ಕ ವ್ಯವಸ್ಥೆ, ಜನಸಾಂದ್ರತೆ ಸರಿಯಾಗಿ ಪಸರುವಂತೆ ಏರ್ಪಾಡು, ನಗರಗಳ ಅಭಿವೃದ್ಧಿ ವ್ಯವಸ್ಥೆ ಹಾಗೂ ಪ್ರಾದೇಶಿಕ ಅಭಿವೃದ್ಧಿಗೆ ಅವಶ್ಯವಿರುವ ಸೌಕರ್ಯಗಳು, ಇವುಗಳಿಗಾಗಿ ಸಮರ್ಪಕ ಪ್ರಾದೇಶಿಕ ಯೋಜನೆಗಳನ್ನು (Regional Development Plan)ತಯಾರಿಸುವುದು ನಗರಯೋಜಕನ ಹೊಣೆಗಾರಿಕೆ.

ಸಾಮಾನ್ಯವಾಗಿ ನೋಡುವಾಗ ನಗರಯೋಜನೆಯು ಕೆಲವರ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತೆ ಕೆಲವರಿಗೆ ಅವರಿಷ್ಟ ಬಂದ ಉಪಯೋಗಕ್ಕೆ ಬೇಕಾಗುವ ಕಟ್ಟಡಗಳನ್ನು ಕಟ್ಟುವ ಅವಕಾಶ ವನ್ನು ನಿರಾಕರಿಸುವ, ವ್ಯವಸ್ಥೆಯಂತೆ ಕಾಣಬಹುದು. ಆದರೆ ಇವೆಲ್ಲ ನಿರ್ಬಂಧಗಳೂ ಸಾರ್ವಜನಿಕರ ಅನುಕೂಲಕ್ಕಾಗಿಯೇ ಜಾರಿಯಲ್ಲಿವೆ ಎಂಬು ದನ್ನು ಮರೆಯಬಾರದು. ಕೆಲವರ ಜಮೀನನ್ನು ಸ್ವಾಧೀನಪಡಿಸಿಕೊಳ್ಳು ವುದು, ಸಾರ್ವಜನಿಕ ರಸ್ತೆಗಳ ನಿರ್ಮಾಣಕ್ಕಿರಬಹುದು, ಅಥವಾ ಶಾಲೆ, ವೈದ್ಯಕೀಯ ಸೌಲಭ್ಯ, ಉದ್ಯಾನವನ ಮುಂತಾದ ಅನುಕೂಲತೆಗಳಿಗಾಗಿರ ಬಹುದು. ಒಂದುಕಡೆ ಸಿನಿಮಾ ಮಂದಿರ ನಿರ್ಮಾಣಕ್ಕೆ ಅನುಮತಿ ನಿರಾ ಕರಿಸಿದ್ದರೆ, ಪ್ರಾಯಶಃ ಅಂತಹ ಸ್ಥಳದಲ್ಲಿ ಸಿನಿಮಾ ಮಂದಿರ ಸ್ಥಾಪನೆ ಯಿಂದ ಸಾರ್ವಜನಿಕರ ನೆಮ್ಮದಿಗೆ ಬರಬಹುದಾದ ಧಕ್ಕೆಯ ಅಥವಾ ವಾಹನ ಸಂಚಾರಕ್ಕೆ ಆಗುವ ಅನಾನುಕೂಲತೆಯ ದೃಷ್ಟಿಯಿಂದ ಈ ನಿರ್ಧಾ ರಕ್ಕೆ ಬಂದಿರಬಹುದು. ಜನರು ಈ ವಿಷಯಗಳನ್ನೆಲ್ಲಾ ಅರ್ಥಮಾಡಿಕೊಳ್ಳ ದಿದ್ದರೆ ನಗರ ಯೋಜನೆಯ ಸಂಬಂಧವಾಗಿ ಕೆಲವು ಪಟ್ಟಭದ್ರಹಿತಾಸಕ್ತರು ತಪ್ಪು ಅಭಿಪ್ರಾಯ ಬೆಳೆಯುವಂತೆ ಮಾಡಿ ನಗರ ಯೋಜನಾ ಕಾರ್ಯಗಳ ಪ್ರಗತಿಗೆ ಆತಂಕ ಒಡ್ಡಬಹುದು. ಈ ಕಾರಣದಿಂದಾಗಿ ಸಾರ್ವಜನಿಕರು, ತಮ್ಮ ಹಿತಕ್ಕಾಗಿಯೇ ಇರುವ ಈ ಯೋಜಿತ ಕಾರ್ಯದಲ್ಲಿ ಮನಃ ಪೂರ್ತಿ ಸಹಕರಿಸಬೇಕಾದುದು ಅವಶ್ಯ.

ನಗರಯೋಜನೆ

ಮಾನವನ ಅನುಕೂಲ, ಸುಖ–ಸಂತೋಷ, ಮತ್ತು ರಕ್ಷಣೆಗಾಗಿ ಪ್ರಕೃತಿದತ್ತವಾದ ಪ್ರದೇಶಗಳನ್ನು ಅಳವಡಿಸುವ ತಂತ್ರವೇ ನಗರ ಯೋಜನಾ ಕಲೆ. ನಾಗರಿಕರಿಗೆ ಬೇಕಾಗುವ ವಾಸದ ಮನೆಗಳು, ಸಾರ್ವ ಜನಿಕ ಸಂಸ್ಥೆಗಳು, ಶಾಲೆಗಳು, ಕೈಗಾರಿಕೆ ಮತ್ತು ವಾಣಿಜ್ಯ ಕೇಂದ್ರಗಳು, ವೈದ್ಯಕೀಯ ಸೌಲಭ್ಯಗಳು, ಆಟದ ಮೈದಾನ ಮತ್ತು ಉದ್ಯಾನಗಳು, ಇವುಗಳನ್ನು ಸರಿಯಾದ ಕಡೆ ಒದಗಿಸುವ ವ್ಯವಸ್ಥೆಯೆಂಬುದೇ 'ಅನು ಕೂಲ' ಎಂಬುದರ ತಾತ್ಪರ್ಯ. 'ಸುಖ-ಸಂತೋಷ'ವೆಂದರೆ, ಸ್ವಚ್ಛವಾದ ಮತ್ತು ಅಂದವಾದ ನಗರದಲ್ಲಿ ವಾಸಿಸುವ ಜನರ ಮನಸ್ಸಿನಮೇಲೆ ಉಂಟಾ ಗುವ ಆಹ್ಲಾದ ಮತ್ತು ಆರೋಗ್ಯ ಚಿಹ್ನೆ. ಹಾಗೆಯೇ 'ರಕ್ಷಣೆ' ಯೆಂದರೆ ಜನರು ನಗರದಲ್ಲಿ ನಿರ್ಭೀತರಾಗಿಯೂ ವಾಹನ ಮುಂತಾದುವುಗಳಿಂದಾಗಿ ಅವಗಡಕ್ಕೀಡಾಗುವ ಹೆದರಿಕೆ ಇಲ್ಲದೆಯೂ ಚಲಿಸಲು ಸಾಧ್ಯವಾಗುವಂತಿರ ಬೇಕು ; ಅಲ್ಲದೆ ವಾಸಸ್ಥಳದಲ್ಲಿ ಕೊಳಚೆ ಪ್ರದೇಶ, ಬೆಂಕಿಯ ಅಪಾಯ ಹಾಗೂ ಕಿಷ್ಕಿಂದ ಪರಿಸ್ಥಿತಿ ಇಲ್ಲದೆ, ಪರಿಶುದ್ಧವಾದ ಗಾಳಿ, ನೀರು ಪೂರೈಕೆ ಯಾಗುವ ಮತ್ತು ಯಾವುದೇ ರೀತಿಯ ಅನಾರೋಗ್ಯ ಪರಿಸ್ಥಿತಿಯಿಂದ ಕೂಡಿರದ ನಗರಗಳನ್ನು ನಿರ್ಮಿಸುವಿಕೆ ಎನ್ನಬಹುದು.

ಇವೆಲ್ಲವೂ ಕೇವಲ ಆದರ್ಶಗಳೆಂದು ಕಂಡುಬಂದರೂ, ಈ ಧ್ಯೇಯ ಸಾಧನೆಗೆ ಮಾನವನು ಸತತ ಪ್ರಯತ್ನ ಮಾಡುತ್ತಿದ್ದಾನೆ. ಇದಕ್ಕಾಗಿ, ನಗರಯೋಜನೆಯನ್ನು ರೂಪಿಸುವ ಮುನ್ನ, ಎಚ್ಚರಿಕೆಯ ಅಧ್ಯಯನ, ಸಮಸ್ಯೆಗಳ ಪರಿಶೀಲನೆ ಮತ್ತು ಸೂಕ್ತ ಪರಿಹಾರ, ಇವುಗಳನ್ನು ಕೈಗೊಂಡು ಸುಭದ್ರ ಶಿಫಾರಸುಗಳನ್ನು ಮಾಡಬೇಕಾಗುತ್ತದೆ. ಹಿಂದಿನಿಂದಲೂ, ಯೋಜಕರು ಈ ದಿಶೆಯಲ್ಲಿ ಅಪಾರ ಪ್ರಯತ್ನ ನಡೆಸಿದ್ದಾರೆ. ಕೆಲವರು ಸಿದ್ಧಾಂತ ರೂಪದ ಪರಿಹಾರಗಳನ್ನು ಕಂಡುಹಿಡಿಯಲೂ ಪ್ರಯತ್ನಿಸಿ ದ್ದಾರೆ. ಆದರೆ, ಕೆಲವು ಪ್ರಯೋಗಗಳು ಕಾಲ ಮುಂದುವರಿದಂತೆ, ಮಾನ ವನ ನಾಗರಿಕತೆ, ಆಶೆ ಆಕಾಂಕ್ಷೆ ಹಾಗೂ ವೈಜ್ಞಾನಿಕ ಪ್ರಗತಿಯ ಕಾರಣ ಅಷ್ಟೇನು ಉಪಯೋಗವಾಗದಿರಬಹುದು. ಅಂತಹ ಪರಿಸ್ಥಿತಿಗಳಲ್ಲಿ ಹೊಸ ಸಿದ್ಧಾಂತದ ಆವಶ್ಯಕತೆ ಉಂಟಾಗುವುದು, ನಗರ ಯೋಜನೆಯ ಇತಿಹಾಸ

ವನ್ನು ಹಿಂದಿನಿಂದಲೂ ಪರಿಶೀಲಿಸಿದರೆ ನಾಲ್ಕು ವಿಧವಾದ ನಗರ ರಚನಾ ಕೌಶಲ ರೂಢಿಗೆ ಬಂದಿರುವುದು ವೇದ್ಯವಾಗುತ್ತದೆ. ಈ ನಾಲ್ಕು ವಿಧಾನ ಗಳನ್ನು 4 ರಿಂದ 7ರ ವರೆಗಿನ ಚಿತ್ರಗಳಲ್ಲಿ ಕಾಣಬಹುದು.


1. ಉದ್ದನೆಯ ವಿನ್ಯಾಸ (Linear pattern)
2. ಚಕ್ರವಿಧಾನ (Radial pattern)
3. ಸಮಾನಾಂತರ-ಲಂಭವಿಧಾನ (Grid-iron pattern)
4. ಸೂರ್ಯವ್ಯೂಹಮಾದರಿ (Concentric pattern)

ಇವುಗಳಲ್ಲಿ ಒಂದನ್ನೊಂದು ಸೇರಿಸಿ ನಗರ ನಿರ್ಮಾಣ ಸಾಧ್ಯ. ನಗರದ ಬೆಳವಣಿಗೆಯನ್ನು ನಿಯಂತ್ರಿಸದಿದ್ದರೆ, ಅದು ಇಷ್ಟಬಂದಂತೆ ಬೆಳೆದು ಮುಂದೆ ಅವುಗಳನ್ನೆಲ್ಲಾ ಸುವ್ಯವಸ್ಥಿತಗೊಳಿಸಲು ವಿಪರೀತ ಕಷ್ಟವಾಗ ಬಹುದು. ಅಲ್ಲದೆ ಅನೇಕ ಭಾಗಗಳ ಪುನರ್‌ವ್ಯವಸ್ಥೆಗೆ ವಿಶೇಷ ವೆಚ್ಚವಾಗ ಬಹುದು.


ಯೋಜನಾ ವಿಧಾನ

ವೈಜ್ಞಾನಿಕ ರೀತಿಯ ನಗರಯೋಜನೆ ಸಾಮಾನ್ಯವಾಗಿ ಮೂರು ಹಂತಗಳನ್ನೊಳಗೊಂಡಿದೆ. ಅಂದರೆ ನಗರವನ್ನು ಅನುಕೂಲವಾಗುವ ರೀತಿಯಲ್ಲಿ ವಿಭಾಗಿಸಿ ಸಾಮಾಜಿಕ ಕೇಂದ್ರಗಳಾಗಿಯೂ, ನೆರೆಹೊರೆ ಯಾಗಿಯೂ (Neighbourhood) ಪರಿಗಣಿಸಬೇಕು. ಸಾಮಾನ್ಯವಾಗಿ ಒಂದು ನೆರೆಹೊರೆಯಲ್ಲಿ 10,000 ದಿಂದ 20,000 ಜನಸಂಖ್ಯೆಯೂ, ಸಾಮಾಜಿಕ ಕೇಂದ್ರದಲ್ಲಿ (Community) 50,000 ದಿಂದ 75,000 ಜನಸಂಖ್ಯೆಯೂ ಇರಬಹುದು. ಒಂದೇ ನಗರದಲ್ಲಿ ಒಂದಕ್ಕಿಂತಲೂ ಹೆಚ್ಚು ಕೇಂದ್ರಗಳಿರಬಹುದು. ಪ್ರತಿ ಕೇಂದ್ರದಲ್ಲೂ ಮೂರು ನಾಲ್ಕು ನೆರೆಹೊರೆ ಗಳಿರುತ್ತವೆ. ಪ್ರತಿ ನಗರಭಾಗವೂ, ಅದರಲ್ಲೂ ನೆರೆಹೊರೆ ವಿಭಾಗವು, ಜನರಿಗೆ ಬೇಕಾದ ಸೌಲಭ್ಯಗಳಿಂದ ಕೂಡಿ ಸ್ವಾವಲಂಬನೆಯಿಂದಿರುವಂತೆ ರಚಿತವಾಗಿರಬೇಕು. ಹಾಗಿದ್ದರೆ ಮಾತ್ರವೇ ಜನರು ಸುಖವಾಗಿ ಬಾಳಲು ಅನುಕೂಲವಾಗುವುದಲ್ಲದೆ, ನಗರಗಳು ಆದರ್ಶವಾಗಿ ಬೆಳೆಯಲು ಅವಕಾಶ ವಾಗುತ್ತದೆ.

ನಗರ ಯೋಜನೆಯನ್ನು ಕೈಗೊಳ್ಳುವ ಮೊದಲು ಅನೇಕ ವಿಷಯ




A. ಸೊರಿಯು ವೈ ಮಾತ ಪ್ರತಿಪಾದಿಸಿದ ಮಾದರಿ ನಕ್ಷೆ 1882.




B. ನದಿಯ ಉದ್ದಕ್ಕೂ ಈ ಮಾದರಿಯಲ್ಲಿ ರಚಿಸಿದ ರಷ್ಯದ ಒಂದು ನಗರ ಸ್ಟಾಲಿನ್ ಗ್ರಾಡ್-1930.

A. ವೋಲ್ಗ ನದಿ
B. ಹಸಿರು ಪ್ರದೇಶ
C. ವಾಸದ ಸ್ಥಳ
D. ಹೆದ್ದಾರಿ
E. ಕೈಗಾರಿಕಾ ಸ್ಥಳ
F. ರೈಲು ಮಾರ್ಗ


ಚಿತ್ರ ೫. ಉದ್ದನೆಯ ನಗರಗಳು.



ಚಿತ್ರ ೬. ಚಕ್ರ ವಿಧಾನ-ಕಾರ್ಲ್‌ಶ್ರು ನಗರ, ಜರ್ಮನಿ.



ಚಿತ್ರ ೭. ಸಮಾನಾಂತರ-ಲಂಬ ವಿಧಾನ.



ಚಿತ್ರ ೮. ಸೂರ್ಯ ವ್ಯೂಹ ಮಾದರಿ.

ಗಳನ್ನು ಸಂಗ್ರಹಿಸಬೇಕಾಗುತ್ತದೆ. ಸಾಧಾರಣವಾಗಿ ಅಂತಹ ಯೋಜನೆಯಲ್ಲಿ ಮುಂದಿನ 20 ಅಥವಾ 30 ವರ್ಷಗಳಲ್ಲಿ ಕೈಗೊಳ್ಳಬೇಕಾಗುವ ಅಭಿವೃದ್ಧಿ ಕಾರ್ಯಗಳೆಲ್ಲಾ ಅಡಕವಾಗಿರಬೇಕಾಗಿರುವುದರಿಂದ ಮುಂದೆ ಅಲ್ಲಿ ವಾಸಿಸಬಹುದಾದ ಜನರಸಂಖ್ಯೆ ಎಷ್ಟೆಂಬುದನ್ನು ಅಂದಾಜು ಮಾಡಬೇಕಾಗುತ್ತದೆ. ಜನಸಂಖ್ಯೆಯ ಏರಿಕೆಯಲ್ಲಿ ಹುಟ್ಟು–ಸಾವುಗಳ ಅಂತರವನ್ನು ಕಂಡುಹಿಡಿದು ಸ್ವಾಭಾವಿಕವಾಗಿ ಏರಬಹುದಾದ ಪ್ರಮಾಣವನ್ನು ಸುಲಭವಾಗಿ ತಿಳಿಯಬಹುದಾದರೂ, ಹೊರಪ್ರದೇಶಗಳಿಂದ ವಲಸೆ ಬರಬಹುದಾದವರ ಸಂಖ್ಯೆಯನ್ನು ಪತ್ತೆ ಹಚ್ಚುವುದು ಬಹಳಕಷ್ಟ. ಜನಸಂಖ್ಯಾ ತಜ್ಞರು ಬಳಸುವ ಲೆಕ್ಕಾಚಾರ ಕ್ರಮಗಳನ್ನನುಸರಿಸಿ, ಪ್ರತಿ ನಗರದಲ್ಲಿರುವ ಸೌಲಭ್ಯಗಳ ಆಧಾರದಮೇಲೆ, ವಲಸೆಬರುವವರ ಸಂಖ್ಯೆಯನ್ನು ಕಂಡು

ಹಿಡಿಯಬೇಕು. ಇದಾದಮೇಲೆ ಹೆಚ್ಚುವ ಜನಸಂಖ್ಯೆ ಹಾಗೂ ನೆಲೆಸಲು ಬೇಕಾಗಬಹುದಾದ ಜಮೀನಿನ ಒಟ್ಟು ವಿಸ್ತೀರ್ಣವನ್ನು-ಜನಸಾಂದ್ರತೆಯ ದಾಮಾಷ ಪ್ರಕಾರ ಲೆಕ್ಕಹಾಕಬೇಕು. ಇದೂ ಕೂಡ ನಗರದ ಅಭಿವೃದ್ಧಿ ಮಟ್ಟ, ಜನಸಾಂದ್ರತೆ, ಜಮೀನಿನ ಬೆಲೆ, ಭೂಮಿಯ ಮೇಲ್ಮೈ ಲಕ್ಷಣ ಮತ್ತು ಸಂಚಾರ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ.ನಗರದ ಅಭಿವೃದ್ಧಿ ನಕ್ಷೆ ಅಥವಾ ಮಹಾಯೋಜನೆ (Master plan) ಮುಂದೆ ಆಗಬೇಕಾಗಿರುವ ಕಾರ್ಯಕ್ರಮಗಳ ಸಂಬಂಧ ಅವಶ್ಯವಿರುವ ಶಿಫಾರಸ್ಸುಗಳನ್ನೆಲ್ಲಾ ಒಳಗೊಂಡಿರುತ್ತದೆ. ಇಂತಹ ಯೋಜನೆ ತಯಾರಿಸಲು ಕೆಳಕಂಡ ಸಮೀಕ್ಷೆಗಳನ್ನೂ ಕೈಗೊಳ್ಳಬೇಕಾಗುವುದು :

1. ನಗರ ಪ್ರದಕ್ಷಿಣೆ
2. ಮೇಲ್ಮೈ ಲಕ್ಷಣ ಸಮೀಕ್ಷೆ
3. ಪ್ರಚಲಿತ ಭೂ ಉಪಯೋಗ
4. ಕಟ್ಟಡಗಳ ಪರಿಸ್ಥಿತಿ
5. ಜನಸಾಂದ್ರತೆ
6. ಸಾಮಾಜಿಕ–ಆರ್ಥಿಕ ಪರಿಸ್ಥಿತಿ
7. ಸಂಚಾರ ಸೌಲಭ್ಯಗಳು
8. ಸಾರ್ವಜನಿಕ ಆವಶ್ಯಕತೆಗಳು
9. ಸೇವಾ ವ್ಯವಸ್ಥೆ
10. ಗೃಹ ಸಮಸ್ಯೆ
11. ಕ್ರೀಡಾ ಮತ್ತು ವಿಹಾರ ಸೌಲಭ್ಯ
12. ವ್ಯಾಪಾರ ಮತ್ತು ವಾಣಿಜ್ಯ
13. ಕೈಗಾರಿಕಾ ಸಮೀಕ್ಷೆ
14. ಸಾರ್ವಜನಿಕ ಮತ್ತು ಸಾಮಾಜಿಕ ಉಪಯೋಗಗಳು.

ಈ ಸಮೀಕ್ಷೆಗಳು ಪೂರ್ಣವಾದ ಬಳಿಕ ನಗರದ ನೈಜಪರಿಸ್ಥಿತಿಯನ್ನು ಎತ್ತಿ ತೋರಿಸಲು ಪ್ರತಿ ವಿಷಯದ ಮೇಲೂ ನಕ್ಷೆಗಳು, ಚಾರ್ಟುಗಳು ಮತ್ತು ಅಂಕಿಅಂಶಗಳ ಪಟ್ಟಿಗಳನ್ನು ತಯಾರಿಸಬೇಕು. ಅನಂತರ ದೊರೆತಿರುವ ಅಂಶಗಳನ್ನೆಲ್ಲಾ ಪರಿಶೀಲಿಸಿ, ಕ್ರೋಢೀಕರಿಸಿ ಮುಂದಿನ ಆವಶ್ಯಕತೆಗಳನ್ನು ಕಂಡುಹಿಡಿಯಬೇಕು. ಈ ಆವಶ್ಯಕತೆಗಳು ಮೊದಲು ತಿಳಿಸಿದ ಮೂರು ಮಟ್ಟದಲ್ಲಿ, ಅಂದರೆ ನೆರೆಹೊರೆ, ಸಮಾಜ ಮತ್ತು ನಗರ–ಇವುಗಳಲ್ಲಿ ಎಷ್ಟೆಷ್ಟಿರಬೇಕೆಂಬುದನ್ನು ಕಂಡುಹಿಡಿಯಬೇಕು. ನೆರೆಹೊರೆಯ ಮಟ್ಟದ ಅಭಿವೃದ್ಧಿ ನಕ್ಷೆಯು ಅಲ್ಲಿಗೆ ಅಗತ್ಯವಾದ ಹಾಗೂ ಅಲ್ಲಿನ ಕೇಂದ್ರೀಕೃತ ಕಾರ್ಯಕ್ರಮಗಳಿಗಾಗಿಯೂ,ಮಕ್ಕಳ ಆಟದಮೈದಾನ,ಅಂಚೆಕಛೇರಿ, ಪಾಠಶಾಲೆ ಮುಂತಾದವುಗಳಿಗಾಗಿಯೂ ಸ್ಥಳಾವಕಾಶ ತೋರಿಸಬೇಕು.

ಸಾಮಾಜಿಕ ಕೇಂದ್ರದ ಮಟ್ಟದಲ್ಲಿ ಕಡೇಪಕ್ಷ ಪ್ರೌಢಶಾಲೆಗಳು, ಅಂಚೆ ಮತ್ತು ತಂತಿಕಛೇರಿಗಳು, ಪೋಲೀಸ್ ಠಾಣೆ, ಜಿಲ್ಲಾ ಕಚೇರಿಗಳು, ಸೇವಾ ಕೇಂದ್ರ, ನಿತ್ಯೋಪಯೋಗಿ ಕೈಗಾರಿಕೆಗಳು, ಉಪವನಗಳು, ಚಿತ್ರಮಂದಿರ, ಬ್ಯಾಂಕು, ಪೈಪೋಟಿ ವ್ಯಾಪಾರ ಕೇಂದ್ರ ಮತ್ತು ಸಾಂಸ್ಕೃತಿಕ ಕೇಂದ್ರಗಳ ಬೆಳವಣಿಗೆಗಾಗಿ ಬೇಕಾಗಬಹುದಾದ ಸ್ಥಳಾವಕಾಶವಿರಬೇಕು. ನಗರ ಮಟ್ಟದಲ್ಲಿಯಾದರೋ ಸಮಗ್ರ ನಗರಕ್ಕೆ ಬೇಕಾಗಿರುವ ಪ್ರಮುಖ ಸೌಲಭ್ಯಗಳು, ಕೇಂದ್ರ ವಾಣಿಜ್ಯ ಮತ್ತು ವ್ಯಾಪಾರ ಸ್ಥಳ, ಭಾರೀ ಕೈಗಾರಿಕೆಗಳು, ದೊಡ್ಡ ಉದ್ಯಾನವನಗಳು, ನಾಗರಿಕ ಕೇಂದ್ರಗಳು, ಕ್ರೀಡಾಂಗಣಗಳು, ವಿಶ್ವವಿದ್ಯಾನಿಲಯ ಹಾಗೂ ಸರ್ಕಾರಿ ಕಛೇರಿಗಳು ಮುಂತಾದವುಗಳಿಗೆ ಅವಕಾಶ ಒದಗಿಸಬೇಕು.

ಯೋಜನಾ ನಕ್ಷೆಯಲ್ಲಿ ವಿವಿಧ ಭೂ ಉಪಯೋಗಗಳಿಗಾಗಿ ಪ್ರತ್ಯೇಕ ವಿಭಾಗಗಳ ಎಲ್ಲೆಗಳನ್ನು ಗುರುತಿಸಬೇಕಾಗುತ್ತದೆ. ಅಂದರೆ, ವಾಸಸ್ಥಳಗಳು, ವಾಣಿಜ್ಯ ವಿಭಾಗ, ಕೈಗಾರಿಕಾ ಪ್ರದೇಶ, ಕ್ರೀಡಾ ತಾಣಗಳು ಮತ್ತು ಸಾರ್ವಜನಿಕ ಪ್ರದೇಶಗಳನ್ನು ಪ್ರತ್ಯೇಕಿಸಬೇಕು. ಈ ಭೂ ಉಪಯೋಗವನ್ನು ನಿಯಂತ್ರಿಸುವ ಸಲುವಾಗಿ, ವಲಯ ನಿಯಂತ್ರಣ ನಿಯಮಗಳನ್ನು ರೂಪಿಸಿ ನಕ್ಷೆಗಳಿಗೆ ಹೊಂದಿಸಬೇಕು. ಈ ನಿಯಮಗಳು, ಕಟ್ಟಡಗಳ ಮುಂದಿನ ಸಾಲಿನ ಮಿತಿ, ಎತ್ತರ, ಒಟ್ಟು ವಿಸ್ತಾರ, ಶಿಲ್ಪಶೈಲಿಯ ನಿಯಂತ್ರಣ, ಕಟ್ಟಡಗಳ ಸುತ್ತಲೂ ಬಿಡಬೇಕಾದ ಜಾಗದ ಮಿತಿ, ನಿವೇಶನಗಳನ್ನು ನಿರ್ಮಿಸುವ ಸೂತ್ರ ಮುಂತಾದ ವಿವರಗಳನ್ನೊಳಗೊಂಡಿರಬೇಕು. ಆದ ಕಾರಣ ನಗರ ಯೋಜನೆಗಳನ್ನೊಳಗೊಂಡ ಅನೇಕ ನಕ್ಷೆಗಳನ್ನು ತಯಾರಿಸಬೇಕಾಗುತ್ತದೆ. ಅಲ್ಲದೆ, ನಗರದ ವಿಸ್ತೀರ್ಣ ಮತ್ತು ಸಮಸ್ಯೆಗಳ ಜಟಿಲತೆಗೆ ತಕ್ಕಂತೆ ಇವು ಬೇರೆಬೇರೆಯಾಗಿರುತ್ತವೆ. ಚಿಕ್ಕ ನಗರದ ಯೋಜನೆಗಳೆಲ್ಲಾ ಒಂದೆರಡು ನಕ್ಷೆಗಳಲ್ಲಿ ಅಡಕವಾಗಿರಬಹುದು. ಆದರೆ ಬೃಹತ್ ನಗರಗಳ ಸಮಸ್ಯೆಗಳಿಗಾಗಿ ಅನೇಕ ನಕ್ಷೆಗಳನ್ನು ತಯಾರಿಸುವುದಲ್ಲದೆ, ಭೂ ಉಪಯೋಗ ಮುಂತಾದವುಗಳನ್ನು ವಿವರಿಸಲು ಪಟ್ಟಣದ ವಿವಿಧ ಭಾಗಗಳಿಗೂ ಇಡೀ ನಗರಕ್ಕೂ ಪ್ರತ್ಯೇಕ ಯೋಜನಾ ನಕ್ಷೆಗಳನ್ನು ತಯಾರಿಸಬೇಕು.

ನಗರ ಯೋಜನೆಗಾಗಿ ಕೈಗೊಂಡ ಸಮೀಕ್ಷೆಗಳನ್ನು ವಿವರಿಸಲು, ಮುಂದಿನ ಕಾರ್ಯಕ್ರಮಗಳನ್ನು ಸೂಚಿಸಲು ವರದಿಯೊಂದನ್ನು ಸಿದ್ಧಪಡಿಸ ಬೇಕು. ಯೋಜನೆಗಳನ್ನು ಹಂತಹಂತವಾಗಿ ಕಾರ್ಯಗತಮಾಡುವ ವಿಧಾನ ಮತ್ತು ಯೋಜನೆ ಕಾರ್ಯರೂಪಕ್ಕೆ ಬರಲು ವಿವಿಧ ಸಂಸ್ಥೆಗಳು ವಹಿಸ ಬೇಕಾದ ಜವಾಬ್ದಾರಿ ಮುಂತಾದವುಗಳನ್ನೆಲ್ಲ ವಿವರಿಸಬೇಕು. ಇದಲ್ಲದೆ ಬೃಹತ್ ಯೋಜನೆಗೆ ತಗಲಬಹುದಾದ ವೆಚ್ಚ ಮತ್ತು ಅದಕ್ಕೆ ಹಣವನ್ನು ಸ್ಥಳೀಯ ಸಂಸ್ಥೆಗಳು ಒದಗಿಸುವ ವಿಧಾನವನ್ನು ಕುರಿತು ಸಲಹೆ ಮಾಡ ಬೇಕು. ಮಹಾ ಯೋಜನೆಯನ್ನು ನಗರ ಯೋಜನಾ ಕಾಯಿದೆಯ ಪ್ರಕಾರ ಸರ್ಕಾರ ಮಂಜೂರುಮಾಡಿದಮೇಲೆಯೇ ಜಾರಿಗೆ ತರಲು ಅನುಕೂಲವಾಗು ವುದು. ಇಲ್ಲವಾದರೆ ವಿಶೇಷ ಶ್ರಮಪಟ್ಟು ತಯಾರಿಸಿದ ಯೋಜನೆ, ಸಲಹೆ ಯಾಗಿ ಮಾತ್ರ ಉಳಿದು, ಸ್ಥಳೀಯ ಸಂಸ್ಥೆಗಳು ಅದರ ಉಪಯೋಗವನ್ನು ಪಡೆಯದೇ ಹೋಗಬಹುದು. ಈ ಕಾರಣದಿಂದಾಗಿ ನಗರ ಯೋಜನೆ ಫಲ ಪ್ರದವಾಗಬೇಕಾದರೆ ಅದಕ್ಕೆ ಕಾಯಿದೆಯ ಬೆಂಬಲ ಇದ್ದೇ ಇರಬೇಕು.

ಗ್ರಾಮ ಯೋಜನೆ

ಮೇಲೆ ವಿವರಿಸಿದ ವಿಧಾನಗಳೆಲ್ಲಾ ಬಹುಮಟ್ಟಿಗೆ ನಗರ ಯೋಜನೆಗೆ ಅನ್ವಯಿಸುತ್ತವೆ. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಜಟಿಲವಲ್ಲದ ಹಾಗೂ ಸರಳವಾದ ಕ್ರಮಗಳನ್ನು ಸೂಚಿಸಬೇಕು. ಹಳ್ಳಿಯ ಜನಸಂಖ್ಯೆ 5,000 ಕ್ಕಿಂತ ಕಡಿಮೆ ಇರುವುದರಿಂದ ಸಮಸ್ಯೆಗಳೂ ಸುಲಭವಾಗಿರುತ್ತವೆ ಮತ್ತು ಗ್ರಾಮದ ಅವಶ್ಯಕತೆಗಳೂ ಕಡಿಮೆ.

ಗ್ರಾಮ ವಿಸ್ತರಣೆಗೆ ಇಲ್ಲವೆ ಅಭಿವೃದ್ಧಿಗೆ ಯೋಜನೆ ತಯಾರಿಸ ಬೇಕಾದರೆ ಅಲ್ಲಿ ಹೊಸ ಮನೆಗಳ ಆವಶ್ಯಕತೆ, ರಸ್ತೆ, ಹಾಗೂ ಆರೋಗ್ಯ ವ್ಯವಸ್ಥೆ ಮುಂತಾದ ಅನುಕೂಲತೆಗಳ ಪ್ರಮಾಣವನ್ನು ಕಂಡುಕೊಳ್ಳ ಬೇಕಾಗುತ್ತದೆ. ಇದಕ್ಕಾಗಿ ಗ್ರಾಮದ ಸಾಮಾಜಿಕ ಮತ್ತು ಆರ್ಥಿಕ ಪರಿ ಸ್ಥಿತಿ, ಜನಗಣತಿಯವಿವರ, ಜನರ ಅಭ್ಯಾಸಗಳು, ಗ್ರಾಮಠಾಣೆಯ ವಿವರ ಮುಂತಾದವುಗಳನ್ನು ಪರಿಶೀಲಿಸಬೇಕಾಗುತ್ತದೆ. ಈ ವಿವರಗಳನ್ನು ಪಡೆ ಯಲು ಕೆಳಕಂಡ ಸಮೀಕ್ಷೆಗಳನ್ನು ಕೈಗೊಳ್ಳಬೇಕು.

1. ಗ್ರಾಮಪರ್ಯಟನೆ : ಗ್ರಾಮದ ಪರಿಸ್ಥಿತಿ ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ಜನರಿಗಿರುವ ಆಸಕ್ತಿಯು ಪ್ರಮಾಣವೆಷ್ಟೆಂಬುದನ್ನು ಕಂಡು ಹಿಡಿಯುವುದೇ ಈ ಸಮೀಕ್ಷೆಯ ಉದ್ದೇಶ.

2. ತಾಂತ್ರಿಕಸಮೀಕ್ಷೆ: ಇದರಿಂದ ಗ್ರಾಮದ ನಕ್ಷೆಯನ್ನು ತಯಾರಿಸಿ, ಅದರಲ್ಲಿ ಗ್ರಾಮದ ರಸ್ತೆಗಳು, ಕಟ್ಟಡಗಳು, ಮೇಲ್ಮೈಲಕ್ಷಣ ಮತ್ತು ಇತರ ವಿವರಗಳನ್ನು ಒದಗಿಸಬಹುದು.

3. ವಸತಿಸಮೀಕ್ಷೆ: ಗ್ರಾಮಸ್ಥರ ಸಾಮಾಜಿಕ—ಆರ್ಥಿಕಸ್ಥಿತಿ ಮತ್ತು ಇವರ ನಿವಾಸಗಳ ಪರಿಸ್ಥಿತಿ ಈ ಸಮೀಕ್ಷೆಯಿಂದ ದೊರೆಯುತ್ತವೆ.


4. ಪರಿಶೀಲನೆ: ಗ್ರಾಮವನ್ನು ಪ್ರತ್ಯಕ್ಷವಾಗಿ ನೋಡಿ, ಅಲ್ಲಿನ ಸಾರ್ವಜನಿಕ ಆರೋಗ್ಯ, ರಸ್ತೆಗಳು, ನೀರುಸರಬರಾಜು ಮೊದಲಾದ ಸೌಕರ್ಯಗಳ ಸ್ಥಿತಿಗತಿಗಳನ್ನು ಕಂಡುಕೊಳ್ಳಬೇಕು.

5. ಸಾಮಾಜಿಕಚರ್ಚೆ: ಗ್ರಾಮದ ಸಮಸ್ಯೆಗಳನ್ನು ಕುರಿತು ಗ್ರಾಮಸ್ಥರೊಡನೆ ಚರ್ಚಿಸುವುದರಿಂದ ಯೋಜನೆ ಹೆಚ್ಚು ಫಲಪ್ರದವಾಗುತ್ತದೆ. ಈ ಸಮೀಕ್ಷೆಗಳಲ್ಲದೆ ಅವಶ್ಯವೆಂದು ಕಂಡುಬಂದರೆ ಭೂ ಉಪಯೋಗ, ಕಟ್ಟಡಗಳ ಪರಿಸ್ಥಿತಿ, ಉದ್ಯೋಗ ಮುಂತಾದ ವಿವರಗಳನ್ನೂ ಪಡೆದು, ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಗ್ರಾಮದ ಅಭಿವೃದ್ಧಿಗಾಗಿ ಯೋಜನೆ ಸಿದ್ಧಪಡಿಸಬೇಕು.

ಗ್ರಾಮಕ್ಕಾಗಿ ಮಹಾ ಯೋಜನೆ

ಗ್ರಾಮದ ಅಭಿವೃದ್ಧಿ ಯೋಜನೆಯ ವಿವರ ಈ ಕೆಳಗಿನಂತಿದೆ :

1. ರಸ್ತೆಗಳ ರಚನೆ : ಸಾಧಾರಣವಾಗಿ ಗ್ರಾಮದಲ್ಲಿರುವ ರಸ್ತೆಗಳ ಕ್ರಮವನ್ನು ಅತಿಯಾಗಿ ಬದಲಾಯಿಸದೆ ಮತ್ತು ಸಾಧ್ಯವಾದಷ್ಟುಮಟ್ಟಿಗೆ ಮನೆಗಳನ್ನು ಒಡೆಯದೆ ರಸ್ತೆಗಳನ್ನು ನಿರ್ಮಿಸಬೇಕು. ಅಲ್ಲಿನ ರಸ್ತೆಗಳ ಅಗಲ ಎರಡುಗಾಡಿಗಳು ಎದುರುಬದುರು ಬಂದರೆ ಸುಲಭವಾಗಿ ಮುಂದೆ ಹೋಗುವಂತಿರಬೇಕು. ಅಲ್ಲದೆ ರಸ್ತೆ ಪಕ್ಕದಲ್ಲಿ ರಾತ್ರಿವೇಳೆ ಗಾಡಿಗಳನ್ನು ನಿಲ್ಲಿಸಿರುವಾಗ ಸಂಚಾರಕ್ಕೆ ತೊಂದರೆ ಇರದಂತೆ ರಸ್ತೆಗಳ ಅಗಲವನ್ನು ನಿಷ್ಕರ್ಷಿಸಬೇಕು.



2. ಸಾರ್ವಜನಿಕ ಉಪಯೋಗದ ಭೂಮಿ : ಯೋಜನಾ ನಕ್ಷೆಯಲ್ಲಿ ಗ್ರಾಮಕೇಂದ್ರಕ್ಕೆ ಸಾಕಷ್ಟು ಸ್ಥಳವನ್ನು ವಿೂಸಲಾಗಿರಿಸಿ, ಅಲ್ಲಿ ಪಂಚಾಯಿತಿ ಭವನ, ಸಹಕಾರೀ ಮಳಿಗೆ, ಆಸ್ಪತ್ರೆ, ಶಾಲೆ ಮತ್ತು ಕ್ರೀಡಾ ಮೈದಾನಕ್ಕೆ ಅವಕಾಶವಿರಬೇಕು. ಅಂತಹ ಕೇಂದ್ರವು ಗ್ರಾಮಸ್ಥರಿಗೆಲ್ಲಾ ಉಪಯೋಗವಾಗುವಂತಹ ಹತ್ತಿರದ ನಿವೇಶನದಲ್ಲಿರಬೇಕು. ಇದಲ್ಲದೆ ಗ್ರಾಮದ ದೇವಸ್ಥಾನ, ಕೆರೆ ಮೊದಲಾದವುಗಳು ಸರಿಯಾಗಿ ದುರಸ್ಥಿಯಾಗಬೇಕು ಮತ್ತು ಅವುಗಳಿಗೆ ಸರಿಯಾದ ದಾರಿ ಇರಬೇಕು.

3. ವ್ಯಾಪಾರಸ್ಥಳ : ಗ್ರಾಮದ ಜನಸಂಖ್ಯೆ ಮತ್ತು ಹಾಲಿ ಇರುವ ಅಂಗಡಿಗಳನ್ನನುಸರಿಸಿ,ಮುಂದಕ್ಕೆ ಬೇಕಾಗುವ ಅಂಗಡಿಗಳಿಗಾಗಿ ಸರಿಯಾದ ಜಾಗಗಳನ್ನು ಕಾದಿರಿಸಬೇಕು. ಅಂತಹ ಅಂಗಡಿಗಳಿಗೆ ಗ್ರಾಮದ ಎಲ್ಲಾ ಭಾಗಗಳಿಂದಲೂ ಜನರು ಬರಲು ಅನುಕೂಲವಾಗಿರಬೇಕು.

4. ವಾಸಸ್ಥಳ : ಜನರು ವಾಸಿಸುವ ಪ್ರದೇಶವನ್ನು ಎರಡು ವಿಧದಲ್ಲಿ ಅಭಿವೃದ್ಧಿ ಪಡಿಸಬಹುದು. ಅಂದರೆ,

(ಅ) ಹಾಲಿ ಕಟ್ಟಿರುವ ಗ್ರಾಮಠಾಣೆಯನ್ನು ಅಭಿವೃದ್ಧಿಪಡಿಸುವುದು: ಗ್ರಾಮ ಠಾಣೆಯ ಅಭಿವೃದ್ಧಿ ಕೆಲಸ ಅಷ್ಟೇನೂ ಸುಲಭವಲ್ಲ. ಅಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಉತ್ತಮ ಸ್ಥಿತಿಯಲ್ಲಿರುವ ಮನೆಗಳನ್ನೂ ಸಾಧಾರಣ ಸ್ಥಿತಿಯಲ್ಲಿರುವ ಕಟ್ಟಡಗಳನ್ನೂ ಉಳಿಸಿಕೊಳ್ಳಬೇಕು. ಈ ಭಾಗದಲ್ಲಿ ಒಡೆಯಬಹುದಾದ ಮನೆಗಳಿಂದ ಹೊರಬೀಳುವ ಸಂಸಾರಗಳಿಗೆ ಹೊಸ ಬಡಾವಣೆಯಲ್ಲಿ ಮನೆಕಟ್ಟಿಕೊಳ್ಳಲು ವ್ಯವಸ್ಥೆ ಮಾಡಬೇಕು.

(ಆ) ಹೊಸ ವಾಸಸ್ಥಳವನ್ನು ಅಭಿವೃದ್ಧಿಪಡಿಸುವುದು: ಹೊಸ ಬಡಾವಣೆಯನ್ನು ರೂಪಿಸಲು ಹೊಸಮನೆಗಳ ಆವಶ್ಯಕತೆ ಇರುವ ಸಂಸಾರಗಳೆಷ್ಟು ಮತ್ತು ಮುಂದಿನ ಜನಸಂಖ್ಯೆ ಎಷ್ಟಿರಬಹುದು ಎಂಬ ವಿವರಗಳನ್ನು ಪಡೆಯಬೇಕಾಗುತ್ತದೆ. ಅನಂತರ ಹೊಸಬಡಾವಣೆಯ ಯೋಜನೆಯನ್ನು ತಯಾರಿಸಿ, ಅದರಲ್ಲಿ ಬೇಕಾಗುವಷ್ಟು ಮನೆ ನಿವೇಶನಗಳನ್ನೂ,ರಸ್ತೆಗಳನ್ನೂ ಇತರ ಉಪಯುಕ್ತ ಕಟ್ಟಡಗಳ ಜಾಗಗಳನ್ನೂ ಒದಗಿಸಬೇಕು (ಚಿತ್ರ 9).

(5) ಗ್ರಾಮ ನಿರ್ಮಲೀಕರಣ

(ಅ) ನೀರು ಸರಬರಾಜು: ಭೂಗತಜಲದಿಂದ ಇಲ್ಲವೇ ಭೂಮಿಯ ಮೇಲ್ಗಡೆಯ ಜಲಮೂಲಗಳಿಂದ ಗ್ರಾಮಕ್ಕೆ ಬೇಕಾಗುವ ನೀರು ಪೂರೈಕೆ ವ್ಯವಸ್ಥೆ ಏರ್ಪಡಿಸಬೇಕು. ಭೂಗತಜಲದಲ್ಲಿ ಬಾವಿಗಳೂ ಬುಗ್ಗೆಗಳೂ ಸೇರುತ್ತವೆ. ಭೂಮಿಯ ಮೇಲಿನ ನೀರು ಸಾಮಾನ್ಯವಾಗಿ ಕಶ್ಮಲದಿಂದ ಕೂಡಿದ್ದು ಶುದ್ಧಗೊಳಿಸಬೇಕಾಗುತ್ತದೆ. ಇದಕ್ಕಾಗಿ ವಿಶೇಷ ಖರ್ಚು ಬೀಳಬಹುದು. ಆದುದರಿಂದ ಹಳ್ಳಿಗಳಿಗೆ ಭೂಮಿಯಲ್ಲಿ ಅಂತರ್ಗತವಾಗಿರುವ ನೀರನ್ನು ಒದಗಿಸುವುದು ಉತ್ತಮ. ಗ್ರಾಮದ ಬಾವಿಗಳನ್ನು ಕಶ್ಮಲಗಳಿಗೆ ದೂರದಲ್ಲಿ ಅಂದರೆ, ತಿಪ್ಪೆ, ಬಚ್ಚಲು, ಮಲಮೂತ್ರ ವಿಸರ್ಜನಾ ಜಾಗ ಮುಂತಾದವುಗಳಿಂದ ಕಡೇಪಕ್ಷ 9ಮೀಟರ್ (30ಅಡಿ) ಆಚೆ ನಿರ್ಮಿಸ ಬೇಕು. ಭೂಮಿಯ ಸ್ಥಿತಿಗನುಗುಣವಾಗಿ ಈ ದೂರವನ್ನು ಇನ್ನೂ ಹೆಚ್ಚಿಸಬೇಕಾಗಬಹುದು. ಅಲ್ಲದೆ, ಬಾವಿಯ ಸುತ್ತಲೂ ಸ್ವಲ್ಪ ಎತ್ತರದ ಮತ್ತು ಇಳಿಜಾರಿರುವ ಜಗಲಿ ಮಾದರಿಯ ಸ್ಥಳವನ್ನೇರ್ಪಡಿಸಿ ಬಿದ್ದ ನೀರು ಹೊರಕ್ಕೆ ಹರಿದು ಹೋಗುವಂತೆ ನೋಡಿಕೊಳ್ಳಬೇಕು. ಬಾವಿಯೊಳಕ್ಕೆ ಕಶ್ಮಲ, ತರಗೆಲೆ ಮುಂತಾದುವು ಬೀಳದಂತೆ ಮುಚ್ಚಳವನ್ನು ಹಾಕುವುದು ಹಿತಕರ. ನೀರನ್ನು ಹಗ್ಗ ಬಿಂದಿಗೆ ಮೂಲಕ ಸೇದುವ ಬದಲು ಹಸ್ತಚಾಲಿತ ಇಲ್ಲವೆ ವಿದ್ಯುತ್ ಚಾಲಿತ ನೀರೆತ್ತುವ ಯಂತ್ರವನ್ನು ಜೋಡಿಸಿದರೆ ಉತ್ತಮ.

(ಆ) ಕಕ್ಕಸುಗಳು: ಗ್ರಾಮಗಳಲ್ಲಿ ಸಾಧಾರಣವಾಗಿ ಈ ಬಗ್ಗೆ ವಿಶೇಷ ಗಮನಕೊಟ್ಟಿರುವುದಿಲ್ಲ. ಗ್ರಾಮದ ಕಕ್ಕಸುಗಳ ಕಶ್ಮಲವನ್ನು ಊರ ಹೊರಗೆ ಅಪಾಯವಿಲ್ಲದ ಜಾಗಗಳಲ್ಲಿ ವಿಸರ್ಜಿಸಬೇಕಲ್ಲದೆ ಗ್ರಾಮದ ನೀರು ಸರಬರಾಜು ವ್ಯವಸ್ಥೆ ಮತ್ತು ಗಾಳಿ ಕೆಡದಂತೆ ನೋಡಿಕೊಳ್ಳ ಬೇಕು.

(ಇ) ದನದ ಕೊಟ್ಟಿಗೆ ಮತ್ತು ತಿಪ್ಪೆಗಳು: ಯಾವುದೇ ನಿವೇಶನದಲ್ಲಿ ದನದಕೊಟ್ಟಿಗೆಗಳನ್ನು ಕಟ್ಟುವಾಗ ಕೆಲವು ಎಚ್ಚರಿಕೆ ಕ್ರಮಗಳನ್ನು ವಹಿಸ ಬೇಕು. ಕೊಟ್ಟಿಗೆಯು ವಾಸದ ಕೊಠಡಿಗಳಿಗೆ ದೂರವಿದ್ದು, ಮನೆಯವರು ದನ

ಕರುಗಳನ್ನು ನೋಡಿಕೊಳ್ಳಲು ಅನುಕೂಲವಾಗಿರಬೇಕು.ಅಲ್ಲದೆ ಕೊಟ್ಟಿಗೆಯು ನಿರ್ಮಲವಾಗಿದ್ದು ಅನಾರೋಗ್ಯ ಪರಿಸ್ಥಿತಿಗೆ ಎಡೆಗೊಡಬಾರದು.

ತಿಪ್ಪೆ, ಹುಲ್ಲು, ಸೌದೆ ಮುಂತಾದುವನ್ನು ಊರಿನ ಹೊರಗೆ, ಊರ ಕಡೆಗೆ ಗಾಳಿ ಬೀಸದ ದಿಕ್ಕಿನಲ್ಲಿ, ನಿರ್ಮಿಸಿರುವ ಹಿತ್ತಲುಗಳಲ್ಲಿ ಹಾಕಬೇಕು. ಹಿತ್ತಲುಗಳಿಂದ ಹರಿಯುವ ಮಳೆನೀರು, ಊರೊಳಕ್ಕೆ ಮತ್ತು ಊರಿನ ಕೆರೆಗೆ ಹರಿಯದಂತೆ ವ್ಯವಸ್ಥೆ ಮಾಡಬೇಕು.

(ಈ) ಹೊರ ಮತ್ತು ಒಳಚರಂಡಿ ವ್ಯವಸ್ಥೆ : ಗ್ರಾಮದ ರಸ್ತೆಗಳು ಇಕ್ಕೆಲದಲ್ಲೂ ಒಳ್ಳೆಯ ಚರಂಡಿಗಳನ್ನು ಮಾಡಿ ನೀರು ಗ್ರಾಮದಿಂದ ಹೊರಕ್ಕೆ ಹೋಗುವ ಏರ್ಪಾಡು ಮಾಡಬೇಕು. ಮನೆಗಳಿಂದ ಹೊರ ಬೀಳುವ ಕೊಳಚೆ ನೀರು ಸಹ ಹರಿದುಹೋಗುವಂತೆ ಇಟ್ಟಿಗೆ ಮತ್ತು ಸಿಮೆಂಟಿನ ಚರಂಡಿಗಳನ್ನು ಏರ್ಪಡಿಸಿ ಊರಿನಹೊರಗೆ ಆ ಕೊಳಚೆನೀರು ಇಂಗುವಂತೆ ಮಾಡಿ ನೈರ್ಮಲ್ಯವನ್ನು ಕಾಪಾಡಬೇಕು.

(ಉ) ಮನೆಗಳು : ಮನೆಕಟ್ಟುವ ಕಾರ್ಯಕ್ರಮವನ್ನು ಎರಡು ವಿಧವಾಗಿ ವಿಂಗಡಿಸಬಹುದು .

(i) ಹೊಸಮನೆಗಳನ್ನು ಕಟ್ಟುವುದು.
(ii) ಇರುವ ಮನೆಗಳನ್ನು ಅಭಿವೃದ್ಧಿ ಮಾಡುವುದು.

ಕಟ್ಟುವ ಮನೆಗಳ ನಕ್ಷೆಯನ್ನು ತಯಾರಿಸುವಲ್ಲಿ ಕುಟುಂಬಕ್ಕೆ ಬೇಕಾಗುವ ಜಾಗಗಳ ವಿವರ, ಅವರ ಆರ್ಥಿಕ ಪಸ್ಥಿತಿ ಮತ್ತು ಜೀವನ ಪದ್ಧತಿ ಇವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಮನೆಕಟ್ಟಲು ಸ್ಥಳೀಯ ಸಾಮಾನನ್ನೇ ಹೆಚ್ಚಾಗಿ ಉಪಯೋಗಿಸಿ ಸ್ಥಳದಲ್ಲಿ ರೂಢಿಯಲ್ಲಿರುವ ವಿಧಾನದಲ್ಲೇ ಸಾಧ್ಯವಾದಷ್ಟು ಮಟ್ಟಿಗೆ ಸ್ವಂತ ಶ್ರಮದಿಂದ ಮನೆಕಟ್ಟಲು ಗ್ರಾಮಸ್ಥರು ಪ್ರಯತ್ನಿಸಬೇಕು. ಸರ್ಕಾರದ ಧನಸಹಾಯವನ್ನು ಪಡೆದು ಆಧುನಿಕ ಕ್ರಮಗಳಿಗೆ ಹೊಂದುವಂತೆ ಮನೆಯಲ್ಲಿ ಒಂದೆರಡು ಕಿಟಕಿಗಳು, ಕೊಠಡಿಗಳು, ಪ್ರತ್ಯೇಕ ಬಚ್ಚಲು ಮನೆ, ಆರೋಗ್ಯಪರಿಸ್ಥಿತಿ ಇವುಗಳನ್ನು ಒದಗಿಸಿ ಮನೆಕಟ್ಟಿದರೆ ನಮ್ಮ ಗ್ರಾಮ ಜೀವನ ಖಂಡಿತವಾಗಿಯೂ ಸುಧಾರಿಸಬಹುದು.

6. ಸಾರ್ವಜನಿಕ ಸಹಕಾರ: ಯೋಜನೆಯ ಯಶಸ್ಸು ವಿಶೇಷವಾಗಿ ಗ್ರಾಮಸ್ಥರ ಸಹಕಾರವನ್ನು ಅವಲಂಬಿಸುತ್ತದೆ. ಗ್ರಾಮಸ್ಥರಿಗೆ ಯೋಜನೆಯ ಉಪಯೋಗ, ಸ್ವಸಹಾಯ ಪದ್ಧತಿಯಲ್ಲಿ ನಂಬಿಕೆ ಮತ್ತು ಪರಸ್ಪರ ಸಹಕಾರ ಈ ಕುರಿತು ಮನವರಿಕೆಯಾಗುವಂತೆ ಮಾಡಬೇಕು. ಈ ಉದ್ದೇಶಗಳನು ಸಾಧಿಸಲು ಈ ಕೆಳಕಂಡ ಉಪಾಯಗಳನ್ನು ಅನುಸರಿಸಬಹುದು.

1. ನೋಡಿ ಕೇಳುವ ರೀತಿಯ ಪ್ರದರ್ಶನ ಮತ್ತು ಪ್ರಕಟಣೆ.
2. ಪ್ರತ್ಯಕ್ಷ ಕಾರ್ಯಾಚರಣೆಯ ಪ್ರಯೋಗ.
3. ಗ್ರಾಮಸ್ಥರೊಡನೆ ನಿಕಟ ಸಾಮಾಜಿಕ ಸಂಬಂಧ.
4. ಈ ಕುರಿತು ನಾಟಕಗಳನ್ನು ಆಡಿ ತೋಸುವುದು.
5. ಯುವಜನ ಸಂಘಗಳನ್ನು ಏರ್ಪಡಿಸುವುದು.
6. ಯೋಜನೆಯನ್ನು ತಯಾರಿಸಿ, ಅಚರಿಸುವಲ್ಲಿ ಜನರ ಸಕ್ರಿಯ ಪಾತ್ರ ಮತ್ತು ಸಹಕಾರ.

ಈ ವಿಧಾನಗಳನ್ನು ಗ್ರಾಮಾಂತರ ಯೋಜನೆಗಳಿಗೆ ಮಾತ್ರವೇ ಅಲ್ಲದೆ, ನಗರಯೋಜನೆ ಹಾಗೂ ಪ್ರಾಂತಿಯ ಯೋಜನೆಗಳಿಗೂ ಉಪಯೋಗಿಸಿಕೊಳ್ಳಬಹುದು.

4. ವಲಯ ವಿಭಾಗ ಮತ್ತು ಭೂ ಬಳಕೆ

ನಗರಯೋಜನೆಯು ನಗರದ ಎಲ್ಲ ಪ್ರದೇಶಗಳಿಗೂ ಅನ್ವಯಿಸುತ್ತದೆ. ಯೋಜನೆಯ ಎಲ್ಲೆಯೊಳಗಿನ ಜಮೀನು ಸರ್ಕಾರದ್ದಿರಲಿ, ಸ್ಥಳೀಯ ಸಂಸ್ಥೆಯದ್ದಿರಲಿ ಅಥವಾ ಖಾಸಗೀಯವರಿಗೆ ಸೇರಿದ್ದಿರಲಿ—ಈ ಎಲ್ಲ ಜಾಗಗಳೂ ಯೋಜನೆಯ ಶಿಪಾರಸುಗಳಿಗೆ ಒಳಪಡುತ್ತವೆ. ಅಂದಮೇಲೆ ಪ್ರತಿಯೊಬ್ಬರೂ ತಮ್ಮ ತಮ್ಮ ಜಮೀನುಗಳಲ್ಲಿ ಯೋಜನಾ ಆದೇಶದಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದರೆ ಒಂದು ನಿಯಮ ಅಗತ್ಯವೆಂದಾಯಿತು. ಅಂತಹ ನಿಯಮ ಇಲ್ಲವೆಂದಾದರೆ ರಾಷ್ಟ್ರದ ಸಂವಿಧಾನವು ನೀಡಿರುವ ಮೂಲಭೂತ ಹಕ್ಕಿನಪ್ರಕಾರ ಪ್ರತಿಯೊಬ್ಬನೂ ತನಗೆ ಇಷ್ಟಬಂದಂತೆ ತನ್ನಜಾಗದಲ್ಲಿ ಕಟ್ಟಡಗಳನ್ನು ಕಟ್ಟಬಹುದು; ಅನಾರೋಗ್ಯ ರೀತಿಯಲ್ಲಿ ವಾಸಿಸಬಹುದು. ಇನ್ನು ಕೆಲವರು ವ್ಯವಸಾಯದ ಜಮೀನನ್ನು ಕೊಂಡು ತಮಗೆ ಅನುಕೂಲವಾಗುವಂತೆ ನಿವೇಶನಗಳನ್ನು ಮಾಡಿ, ಅವುಗಳನ್ನು ಮಾರಿ, ಭಾರೀ ಹಣದೊಡನೆ ಹೊರಟೇ ಹೋಗಬಹುದು. ಅಲ್ಲಿ ರಸ್ತೆಮಾಡುವ ಅಥವಾ ನೀರು ಹಾಗೂ ದೀಪವನ್ನೊದಗಿಸುವ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಬಹುದು. ಮತ್ತೆ ಕೆಲವರು ತಮ್ಮ ಜಮೀನಿನಲ್ಲಿ ರಸ್ತೆಗೆ ಜಾಗವನ್ನೇ ಬಿಡದೆ ಮನೆಗಳನ್ನು ವಟಾರದ ಮಾದರಿಯಲ್ಲಿ ಕಟ್ಟಿ ಬಾಡಿಗೆ ಸಂಪಾದಿಸುವ ದೃಷ್ಟಿಯನ್ನೆ ಪ್ರಧಾನವಾಗಿಟ್ಟುಕೊಳ್ಳಬಹುದು. ಊರಿನ ಮಧ್ಯದಲ್ಲಿ ಜನರು ನಿವೇಶನಗಳಿಗೆ ಬೇಕಾದ ಗಾಳಿ ಬೆಳಕಿಗಾಗಿ ಸ್ವಲ್ಪಜಾಗವನ್ನೂ ಬಿಡದೆ ನಿವೇಶನದ ಪೂರ್ತ ಕಟ್ಟಬಹುದು. ಎಲ್ಲರೂ ತಮ್ಮ ಸ್ವಂತ ಹಿತಾಸಕ್ತಿಯನ್ನೇ ಮುಂದಾಗಿರಿಸಿಕೊಂಡರೆ, ಸಮಾಜದ ಉಪಯೋಗಕ್ಕೆ ಬೇಕಾಗುವ ರಸ್ತೆ, ಸಾರ್ವಜನಿಕ ಕಟ್ಟಡಗಳು, ಆಸ್ಪತ್ರೆ, ಶಾಲೆ, ಆಟದ ಮೈದಾನ—ಇವುಗಳಿಗೆ ಅವಕಾಶ ಕೊಡುವವರಾರು? ಸರ್ಕಾರದವರು ಇವೆಲ್ಲವೂ ಸ್ಥಳೀಯ ಸಂಸ್ಥೆಯ ಜವಾಬ್ದಾರಿಯೆಂದು ಹೇಳಿ ತಪ್ಪಿಸಿಕೊಳ್ಳಲು ಪ್ರಯತ್ನಿಸಬಹುದು. ಖಾಸಗಿಯವರೂ ಇದೇ ಸಬೂಬು ಹೇಳಬಹುದು. ತಮ್ಮ ದೈನಂದಿನ ವೆಚ್ಚಕ್ಕೇನೇ ಸಾಲದಂತಹ ಹಣಕಾಸಿನ

ಪರಿಸ್ಥಿತಿಯನ್ನೆದುರಿಸುತ್ತಿರುವ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಉಪಯೋಗಗಳಿಗೆ ಬೇಕಾಗುವ ಭೂಮಿಯನ್ನೆಲ್ಲಾ ಸ್ವಾಧೀನಪಡಿಸಿಕೊಂಡು ಅದಕ್ಕೆ ಸೂಕ್ತ ಪರಿಹಾರ ನೀಡಿ ನಗರವನ್ನು ಬೆಳಸಬೇಕೆನ್ನುವುದು ತೀರ ಅಸಾಧ್ಯದ ಮಾತು. ಬದಲಾಗಿ ಸಾರ್ವಜನಿಕರೆಲ್ಲರೂ ತಂತಮ್ಮ ನೈತಿಕ ಹೊಣೆಗಾರಿಕೆಯನ್ನರಿತು ಇಂತಹ ಅಭಿವೃದ್ಧಿ ಕೆಲಸಗಳಿಗೆ ಸಹಕಾರ ನೀಡಿದರೆ ಯಾವ ಕೆಲಸವೂ ಕಷ್ಟವಲ್ಲ.

ನಗರಗಳ ಬೆಳವಣಿಗೆ ಅಪೇಕ್ಷಿತ ರೀತಿಯಲ್ಲಾಗುವಂತೆ ಮಾಡಲು ಹಲವು ವಿಧಾನಗಳಿವೆ. ಸರ್ಕಾರೀ ಜಮೀನುಗಳಲ್ಲೇನೊ ಸಾರ್ವಜನಿಕ ಭವನಗಳೇ ನಿರ್ಮಾಣವಾಗಬಹುದು. ಇಂತಹ ಜಮೀನಿನಲ್ಲಿ ಸರ್ಕಾರವು ಆಸ್ಪತ್ರೆ, ಶಾಲೆ, ಕಛೇರಿ, ಆಟದ ಮೈದಾನ, ಮುಂತಾದುವನ್ನು ನಿರ್ಮಿಸಬಹುದು. ಸ್ಥಳೀಯ ಸಂಸ್ಥೆಗಳೂ ಕೂಡ ತಮ್ಮ ಜಮೀನನ್ನು ಇಂತಹ ಉದ್ದೇಶಗಳಿಗಾಗಿ ಬಳಸಿಕೊಳ್ಳಬಹುದು. ಆದರೆ, ಖಾಸಗೀ ಜಮೀನನ್ನು ಈ ಉದ್ದೇಶಗಳಿಗಾಗಿ ಸರ್ಕಾರ ಉಪಯೋಗಿಸಬೇಕೆಂದಿದ್ದರೆ, ಆಗ ಭೂ ಸ್ವಾಧೀನ ಕಾಯಿದೆಯನ್ನು ಅನುಸರಿಸಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುವುದು. ನಗರದ ಬೆಳವಣಿಗೆ ನಿರ್ದಿಷ್ಟ ನಿಯಮದನ್ವಯ ಆಗಬೇಕೆಂಬುದು ಮಾತ್ರವೇ ಉದ್ದೇಶವಾಗಿದ್ದರೆ, ಅಂತಹ ಧ್ಯೇಯ ಸಾಧನೆಗೆ ನಗರಯೋಜಕರು ಇನ್ನೂ ಸುಲಭವಾದ ಕಾನೂನು ರೀತ್ಯಾ ಉಪಾಯವನ್ನು ರೂಪಿಸಿದ್ದಾರೆ. ಇದರ ಪ್ರಕಾರ ನಾಗರಿಕರು ತಮ್ಮ ಜಮೀನಿನಲ್ಲಿ ತಮಗೆ ಬೇಕಾಗುವ ಕಟ್ಟಡ ನಿರ್ಮಿಸಬಹುದು, ಅಥವಾ ಜಮೀನನ್ನು ವಿಭಾಗಿಸಿ ನಿವೇಶಗಳನ್ನು ಮಾಡಬಹುದು. ಆದರೆ ಅಂತಹ ಕಟ್ಟಡ ಅಥವಾ ನಿವೇಶನನಿರ್ಮಾಣ ಕಾನೂನು ಬಾಹಿರವಾಗಿರಕೂಡದು ಮತ್ತು ಯೋಜನೆಯ ಶಿಫಾರಸುಗಳಿಗೆ ಅನ್ವಯಿಸಿರಬೇಕು. ಇದರಿಂದ ನಗರಗಳು ಯೋಜಿತರೀತಿಯಲ್ಲಿ ಬೆಳೆಯಲು ಸಹಾಯವಾಗುವುದಲ್ಲದೆ ಪ್ರತಿಯೊಬ್ಬರೂ ಸಾರ್ವಜನಿಕರ ಉಪಯೋಗಕ್ಕೆ ಬೇಕಾಗುವ ಜಾಗಗಳನ್ನು ಬಿಡುವಂತೆ ಮಾಡಲು ಸಾಧ್ಯವಾಗಬಹುದು ಮೊದಲನೆ ಅಧ್ಯಾಯದಲ್ಲಿ ಹೇಳಿರುವಂತೆ ನಗರ ಮತ್ತುಗ್ರಾಮಾಂತರ ಯೋಜನಾ ಕಾಯಿದೆ ಪ್ರಕೃತ ಎಲ್ಲಾ ರಾಜ್ಯಗಳಲ್ಲೂ ಜಾರಿಗೆ ಬರುತ್ತಿದೆ.

ಇದಲ್ಲದೆ ಸ್ಥಳೀಯ ಸಂಸ್ಥೆಗಳ ಕಾಯಿದೆಗಳಲ್ಲೂ ಸಹ ಈ ಸಂಬಂಧ

ವಾಗಿ ಸೂಕ್ತ ಕ್ರಮಗಳನ್ನು ನಮೂದಿಸಲಾಗಿದೆ. ಅಂದರೆ ನಗರಗಳಲ್ಲಾಗಲಿ ಹಳ್ಳಿಗಳಲ್ಲಾಗಲಿ ಪ್ರತಿಯೊಬ್ಬರೂ ಅಂತಹ ಕಾಯಿದೆಯಲ್ಲಿ ಅವಕಾಶ ಮಾಡಿರುವಂತೆಯೇ ತಮ್ಮ ಭೂಮಿಯನ್ನು ಉಪಯೋಗಿಸಬೇಕು. ನಗರ ಯೋಜನೆ ಇಲ್ಲದಿರುವ ಸ್ಥಳಗಳಲ್ಲಿ ಸ್ಥಳೀಯ ಕಾಯಿದೆಗಳನ್ನು ಅನುಸರಿಸಿ, ಜಮೀನಿನ ವಿಭಜನೆ, ಕಟ್ಟಡ ಹಾಗೂ ರಸ್ತೆಗಳ ನಿರ್ಮಾಣ ಮುಂತಾದ ಕೆಲಸಗಳನ್ನು ಮಾಡಬೇಕು. ಕಂದಾಯ ಕಾಯಿದೆ ಪ್ರಕಾರ, ವ್ಯವಸಾಯದ ಭೂಮಿಯನ್ನು ಇತರ ಉಪಯೋಗಗಳಿಗೆ ಬಳಸಬಹುದು. ಕಟ್ಟಡಗಳ ನಿಯಮದ ಪ್ರಕಾರ (Building bye-laws) ನಿವೇಶನಗಳಲ್ಲಿ ನಿಯಮಿತ ಜಾಗಬಿಟ್ಟು ಮನೆಗಳನ್ನೂ ಇತರ ಕಟ್ಟಡಗಳನ್ನೂ ನಿರ್ಮಿಸಬಹುದು. ಆದರೆ ನಗರ ಯೋಜನೆ ಅನ್ವಯವಾಗುವ ಸ್ಥಳಗಳಲ್ಲಿ ಈ ಎಲ್ಲ ಕಾರ್ಯಗಳೂ ಆ ಯೋಜನೆಯ ನಿಯಮಗಳಂತೆಯೇ ನಡೆಯಬೇಕು.

ವಲಯ ನಿಬಂಧನೆಗಳು

ನಗರ ಯೋಜಕರು ನಗರಗಳ ಬೆಳವಣಿಗೆಗಾಗಿ ರಚಿಸುವ ನಕ್ಷೆಗಳಲ್ಲಿ ಭೂ ಬಳಕೆಯ ನಕ್ಷೆಗಳು ಬಹಳ ಉಪಯುಕ್ತವಾದುವು. ಈಗಾಗಲೇ ಹೇಳಿರುವಂತೆ ಇವುಗಳನ್ನು ಎಲ್ಲರೂ ಅನುಸರಿಸುವಂತಾಗುವ ಒಂದು ನಿಯಮ ಅಗತ್ಯ. ನಗರದ ಮಹಾಯೋಜನೆಯೊಡನೆ ವಲಯ ನಿಯಮಗಳನ್ನೂ (Zoning regulations) ರಚಿಸಿ ಭೂ ಬಳಕೆ ನಕ್ಷೆಗಳಿಗೆ ಹೊಂದಿಸಬೇಕೆಂದು ಮೂರನೇ ಅಧ್ಯಾಯದಲ್ಲಿ ಸೂಕ್ಷ್ಮವಾಗಿ ತಿಳಿಸಲಾಗಿದೆ. ಈ ನಿಯಮಗಳ ವಿವರಗಳನ್ನು ಈಗ ನೋಡೋಣ.

ನಗರ ಪ್ರದೇಶವನ್ನು ವಿವಿಧ ವಲಯಗಳನ್ನಾಗಿ ವಿಂಗಡಿಸಿ, ಅಂತಹ ವಲಯಗಳೊಳಗಿನ ಭೂ ಬಳಕೆಯನ್ನು ನಿಯಂತ್ರಿಸುವ, ಆ ಪ್ರದೇಶದ ಜನರ ಆರೋಗ್ಯ, ರಕ್ಷಣೆ. ನೀತಿ. ಅನುಕೂಲ ಮತ್ತು ಸಾಮಾನ್ಯ ಸೌಲಭ್ಯಗಳನ್ನು ಹೆಚ್ಚಿಸಲು ನಿವೇಶನಗಳನ್ನು ಉಪಯೋಗಿಸುವ ಹಾಗೂ ಕಟ್ಟಡಗಳ ಎತ್ತರ ಮತ್ತು ವಿಸ್ತೀರ್ಣವನ್ನು ನಿಯಂತ್ರಿಸುವ ಕ್ರಮವನ್ನು ವಲಯ ನಿಯಂತ್ರಣ ಕ್ರಮವೆಂದು ಕರೆಯಲಾಗುತ್ತದೆ. ಸಾರ್ವಜನಿಕ ಭೂಮಿಯ ಹೊರತಾಗಿ, ಖಾಸಗಿ ಜಮೀನಿನ ಉಪಯೋಗ ಕುರಿತು, ನಗರ ಮಹಾ

ಯೋಜನೆಯ ಪ್ರಕಾರ ಕಾರ್ಯಕ್ರಮವನ್ನು ಕೈಗೊಳ್ಳುವ ಕೆಲಸವೂ ವಲಯ ನಿಯಂತ್ರಣವೆಂದೇ ಪರಿಗಣಿಸಲ್ಪಡುವುದು. ಅಂದರೆ, ವಲಯ ವಿಂಗಡಣೆಯ ನಕ್ಷೆಗಳೂ, ನಿಯಂತ್ರಣಗಳೂ, ಮಹಾ ಯೋಜನೆಯ ಒಂದಂಗವಾಗುತ್ತವೆ ಮತ್ತು ವಲಯ ನಿಯಮಗಳು ಭೂ ಬಳಕೆಯ ಸಂಬಂಧವಾಗಿ ಯೋಜನೆಯನ್ವಯ ಬಳಸಬಹುದಾದ ಕಾನೂನಿನ ಭಾಗ ವಾಗುತ್ತವೆ.

ವಲಯ ವಿಂಗಡಣಾನಕ್ಷೆಗಳೇ ಮಹಾ ಯೋಜನಾ ನಕ್ಷೆಗಳಲ್ಲ. ಇವು ಇತರ ನಕ್ಷೆಗಳೊಡನೆ ನಗರ ಬೆಳವಣಿಗೆಗೆ ಬಹಳ ಉಪಯುಕ್ತ ಸಾಧನಗಳು. ವಲಯ ನಿಯಂತ್ರಣವು ನಗರಯೋಜನೆಯ ಅಂತಿಮ ಕಾರ್ಯಕ್ರಮವಲ್ಲ; ಇದು ನಗರದ ಬೆಳವಣಿಗೆ ಪರಿಪೂರ್ಣವಾಗಿ ನಡೆಯಲು ಮತ್ತು ನಗರಾಭಿವೃದ್ಧಿ ಕಾರ್ಯಗಳು ಕ್ರಮಬದ್ಧವಾಗಿ ಜರುಗಲು ಉಪಯೋಗಿಸಬಹುದಾದ ತಂತ್ರಮಾತ್ರವಲ್ಲದೆ, ಮಹಾಯೋಜನೆಯನ್ನು ಕಾರ್ಯರೂಪಕ್ಕೆ ತರಲು ಬಳಸುವ ಬಹು ಮುಖ್ಯಸಾಧನವೂ ಹೌದು. ವಲಯ ನಿಯಂತ್ರಣ ಇಡೀ ನಗರಕ್ಕೆ ಅನ್ವಯಿಸುವ ಕ್ರಮವಲ್ಲದೆ, ಅಲ್ಲಲ್ಲಿ ಅಂಶತಃ ಪ್ರಯೋಗಿಸುವ ನಿಯಮವಲ್ಲ. ಕೆಲವು ಸ್ಥಳೀಯ ಸಂಸ್ಥೆಗಳು ಕೆಲವೊಂದು ಪ್ರದೇಶಗಳಲ್ಲಿ, ಅದರಲ್ಲೂ ಒಳ್ಳೆಯ ನಿವಾಸಗಳಿರುವ ನಗರ ಭಾಗಗಳಲ್ಲಿ, ವಲಯ ವಿಧಾನ ವನ್ನು ಅನುಸರಿಸುವ ಮತ್ತು ಇತರ ಪ್ರದೇಶಗಳನ್ನು ನಿರ್ಲಕ್ಷಿಸುವ ರೂಢಿ ಇರಿಸಿಕೊಂಡಿವೆ. ಹಾಗೆ ಸಂಕುಚಿತವಾಗಿ ವಲಯ ವಿಭಾಗ ಮಾಡಿ ಮಹಾ ಯೋಜನೆಯ ಜೊತೆಗೆ ಕ್ರಮಬದ್ಧವಾದ ವಲಯ ವಿಂಗಡಣೆ ವಿಧಾನವನ್ನು ಅನುಸರಿಸದೆ ಹೋದರೆ, ಅಂತಹ ನಿಯಮ ನ್ಯಾಯಬಾಹಿರವಾಗಬಹುದು. ವಲಯ ನಿಯಂತ್ರಣವು ಫಲಪ್ರದವಾಗಬೇಕಾದರೆ ಇಡೀ ನಗರಕ್ಕೆ ಅದು ಅನ್ವಯವಾಗಿ, ಮಹಾ ಯೋಜನೆಯ ಸ್ವರೂಪದಲ್ಲಿರಬೇಕು. ವಲಯ ವಿಧಾನ ನಗರದ ಬೆಳವಣಿಗೆಗೆ ಸಹಾಯಕವಾಗಿರಬೇಕೆ ಹೊರತು, ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆಯೊಡ್ಡುವಂತಿರಬಾರದು. ಅಂತಹ ವಲಯ ನಿಯಂತ್ರಣವು ಮಹಾಯೋಜನೆಗೆ ಪೂರಕವಾಗಿ ನಗರದಲ್ಲಿ ಸಂಬಂಧಿಸಬಹು ದಾದ ಅನೇಕ ಎಡರುತೊಡರುಗಳನ್ನು ಪರಿಹರಿಸುವಂತಿರಬೇಕು. ಉದಾ ಹರಣೆಗೆ, ರಸ್ತೆಯಲ್ಲಿ ವಾಹನ ಸಂದಣಿ ಹೆಚ್ಚದಂತೆ, ಬೆಂಕಿ ಮುಂತಾದ ಭಯೋ

ತ್ಪಾದಕ ಘಟನೆಗಳಿಗೆ ಅವಕಾಶಕೊಡದೆ, ಜನರ ಆರೋಗ್ಯ ಮತ್ತು ಕ್ಷೇಮಕ್ಕೆ ಸಹಾಯಕವಾಗಿಯೂ, ಜನಸಂದಣಿ ಅತಿಯಾಗಿರದಂತೆಯೂ, ಜನರಿಗೆ ಬೇಕಾದ ಸಾರಿಗೆ ವ್ಯವಸ್ಥೆ, ನೀರು, ನಿರ್ಮಲೀಕರಣ, ಶಾಲೆ, ಉದ್ಯಾನವನಗಳು, ಇತ್ಯಾದಿ ನಾಗರಿಕ ಸೌಕರ್ಯಗಳು ಇಡೀ ನಗರದಲ್ಲಿ ದೊರೆಯುವಂತೆಯೂ ಸಹಾಯಕವಾಗಿರಬೇಕು.

ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಮೊಟ್ಟಮೊದಲಿಗೆ 1903 ರಲ್ಲಿ ಮೆಸಾಚುಸೆಟ್ಸ್ ನಗರದಲ್ಲಿ ಕಟ್ಟಡಗಳ ಎತ್ತರವನ್ನು ನಿಯಂತ್ರಿಸುವ ವಲಯ ವಿಧಾನ ಜಾರಿಗೆ ಬಂತು. ಅನಂತರ 1909ರಲ್ಲಿ ಲಾಸ್ ಆಂಜಲೀಸ್ ನಗರಕ್ಕೆಲ್ಲಾ ಅನ್ವಯವಾಗುವ ವಲಯಪದ್ಧತಿಯನ್ನು ಅನುಸರಿಸಲಾಯಿತು. ಇಡೀ ನಗರವನ್ನು ವಾಸಸ್ಥಳಗಳು ಮತ್ತು ಇತರ ಉಪಯುಕ್ತತೆಗಳ ಪ್ರದೇಶಗಳೆಂದು ಎರಡು ವಿಧವಾದ ವಲಯಗಳಾಗಿ ವಿಂಗಡಿಸಲಾಯಿತು. ಭಾರತದಲ್ಲಿ ಈ ಪದ್ಧತಿ ಸಾಮಾಜಿಕವಾಗಿ ಉಪಯೋಗದಲ್ಲಿತ್ತು. ಆದರೆ, ಆಧುನಿಕ ವಲಯ ನಿಯಂತ್ರಣ ನಿಯಮವು ಇಡೀ ನಗರಕ್ಕೆ ಅನ್ವಯವಾಗುವುದಲ್ಲದೆ, ಜಮೀನಿನಉಪಯೊಗ, ಕಟ್ಟಡಗಳಎತ್ತರ ಮತ್ತು ವಿಸ್ತೀರ್ಣ, ಈ ಮೂರು ಮುಖ್ಯ ವಿಷಯಗಳನ್ನು ನಿಯಂತ್ರಿಸಲು ಬಳಕೆಗೆ ಬರುತ್ತಿದೆ. ಈ ತೆರನಾದ ನಿಯಂತ್ರಣ ನ್ಯೂಯಾರ್ಕ್‌ನಗರದಲ್ಲಿ 1915 ರಲ್ಲಿ ಜಾರಿಗೆ ಬಂತು. ಆದರೆ ಇದರಲ್ಲೂ ಸಹ ಕೆಲವು ಪ್ರದೇಶಗಳು ನಿಯಂತ್ರಣಕ್ಕೆ ಹೊರತಾದುವೆಂದು ಕಾದಿರಿಸಲಾಗಿತ್ತು.

ವಲಯ ನಿಯಂತ್ರಣ ಕ್ರಮಗಳಲ್ಲಿ ಎರಡು ವಿಭಾಗಗಳಿವೆ. ಒಂದು ನಕ್ಷೆ, ಮತ್ತೊಂದು ವಿವರಣೆಯಿಂದ ಕೂಡಿದ ವರದಿ. ನಕ್ಷೆಯು ನಗರದಲ್ಲಿ ವಿವಿಧ ವಲಯಗಳ ವಿಂಗಡಣೆಯನ್ನು ತೋರಿಸುತ್ತದೆ. ವರದಿಯು ವಲಯ ವಿಭಾಗಗಳನ್ನು ನಿಯಂತ್ರಿಸುವ ನಿಯಮಗಳಿಂದ ಕೂಡಿರುತ್ತದೆ. ಪ್ರತಿಯೊಂದು ನಗರಭಾಗಕ್ಕೂ ಅನ್ವಯಿಸುವಂತೆ ಬೇರೆ ಬೇರೆ ನಿಯಮಗಳನ್ನು ಅದು ಸೂಚಿಸುತ್ತದೆ. ಮೊದಲಿಗೆ ಜಾರಿಯಲ್ಲಿದ್ದ ವಲಯ ನಿಯಂತ್ರಣಾ ವಿಧಾನವು ಮೂರು ವಿಧವಾದ ವಲಯಗಳನ್ನೂ, ಮೂರು ರೀತಿಯ ನಕ್ಷೆಗಳನ್ನೂ ಹೊಂದಿತ್ತು. ಭೂ ಬಳಕೆಗೆ ಬೇರೆ ನಕ್ಷೆಗಳು, ಕಟ್ಟಡಗಳ ಎತ್ತರವನ್ನು ನಿಯಂತ್ರಿಸಲು ಪ್ರತ್ಯೇಕ ನಕ್ಷೆಗಳು, ಅಲ್ಲದೆ ಕಟ್ಟಡಗಳ ವಿಸ್ತೀರ್ಣ

ಗಳನ್ನು ವಿವರಿಸಲು ವಿಸ್ತೀರ್ಣನಕ್ಷೆಗಳು, ತಯಾರಿಸಲ್ಪಡುತ್ತಿದ್ದುವು. ಕೆಲವೊಮ್ಮೆ ಭೂ ಬಳಕೆಯ ವಲಯಗಳ ಎಲ್ಲೆಗಳೂ ಹಾಗೂ ಕಟ್ಟಡಗಳ ಎತ್ತರವನ್ನು ಸೂಚಿಸುವ ವಲಯಗಳ ಎಲ್ಲೆಗಳೂ ಸಮನ್ವಯಗೊಂಡಿರುತ್ತಿದ್ದವು. ಆದರೆ ಕೆಲವು ಸಲ ಅವು ಬೇರೆ ಬೇರೆಯಾಗಿಯೂ ಇರುತ್ತಿದ್ದುದುಂಟು. ಇತ್ತೀಚೆಗೆ ಪ್ರತಿವಲಯಕ್ಕೂ ಬೇರೆ ಬೇರೆ ವಿಧವಾದ ನಕ್ಷೆಗಳನ್ನು ತಯಾರಿಸುವ ಬದಲು ಒಂದೇ ವಿಧವಾದ ನಕ್ಷೆಯನ್ನು ತಯಾರಿಸಿ ವಲಯ ನಿಯಂತ್ರಣವು ಸುಲಭವು ಸುಸೂತ್ರವು ಆಗುವಂತೆ ಮಾಡುವ ಪದ್ಧತಿ ರೂಢಿಗೆ ಬರುತ್ತಿದೆ (ಚಿತ್ರ 10). ವಲಯ ನಿಯಂತ್ರಣದೊಡನೆ ಭೂ ವಿಭಜನೆಗೆ ಸಂಬಂಧಿಸಿದ ನಿಯಮಗಳೂ (Sub-division regulations) ಜಾರಿಗೆ ಬರಬೇಕಾಗುತ್ತದೆ.

ವಲಯ ನಿಯಂತ್ರಣವನ್ನು ಯೋಜನಾ ಸಂಸ್ಥೆ ತನ್ನ ಅಧಿಕಾರ ವರ್ಗದ ಮೂಲಕ ಜಾರಿಗೆ ತರುತ್ತದೆ. ಕೆಲವೊಮ್ಮೆ ನಾಗರಿಕರಿಗೆ ಅನಾನುಕೂಲವಾಗಿ, ಅವರು ಈ ನಿಯಮವನ್ನು ಜಾರಿ ಮಾಡುವಲ್ಲಿ ಕೆಲವು ಬದಲಾವಣೆಗಾಗಿ ಅರ್ಜಿಹಾಕುತ್ತಾರೆ. ಅಂತಹ ಅರ್ಜಿಗಳನ್ನು ವಿಚಾರಿಸಿ, ಸೂಕ್ತ ನಿರ್ದೇಶನವನ್ನು ನೀಡಲು ವಲಯ ನಿಯಂತ್ರಣ ಅಧಿಮಂಡಲಿಯೊಂದನ್ನು ನಿಯಮಿಸಲಾಗುತ್ತದೆ. ಈ ಅಧಿಮಂಡಲಿಯ ತೀರ್ಪು ಎರಡು ಪಕ್ಷಗಳಿಗೂ ಅನ್ವಯವಾಗುವುದು. ಆದರೆ, ಒಮ್ಮೆ ಅಂಗೀಕೃತವಾದ ಭೂ ಬಳಕೆಯ ನಕ್ಷೆಯಲ್ಲಿ ಬದಲಾವಣೆ ಮಾಡಬೇಕಾದರೆ ಸರ್ಕಾರದ ಅಂಗೀಕಾರ ಅಗತ್ಯ.

ವಲಯ ನಿಬಂಧನೆಗಳು

ನಗರವನ್ನು ಸಾಧಾರಣವಾಗಿ ಈ ಕೆಳಕಂಡ ವಲಯಗಳಾಗಿ ವಿಂಗಡಿಸಬಹುದು. ಪ್ರತಿ ವಲಯದಲ್ಲೂ ಒಂದು ವಲಯಕ್ಕೆ ಹೊಂದಿದಂತೆ ಉಪ ವಲಯಗಳೂ ಇರಬಹುದು. ವಲಯ ನಿಯಮಗಳ ಸ್ಥೂಲವಿವರಗಳು ಈ ರೀತಿ ಇವೆ:



ಚಿತ್ರ ೧೦. ಮೈಸೂರಿನ ಭೂ ಉಪಯೋಗ ನಕ್ಷೆ.

ವಲಯ	ಉಪವಲಯ
1. ವಾಸದ ವಲಯ	ಒಂದು ಸಂಸಾರ, ಎರಡು ಸಂಸಾರ, ಹೆಚ್ಚು ಸಂಸಾರಗಳಿರುವ ವಿಭಾಗಗಳು, ವಿದ್ಯಾರ್ಥಿ ನಿಲಯ, ಛತ್ರ ಮತ್ತು ಇತರೆ ವಸತಿಗೃಹ ಗಳಿರುವ ವಿಭಾಗ.
2. ವಾಣಿಜ್ಯ ವಲಯ	ಚಿಲ್ಲರೆ ವ್ಯಾಪಾರ, ಸಗಟುವ್ಯಾಪಾರ, ಉಗ್ರಾಣ ಗಳು, ಬ್ಯಾಂಕುಗಳು ಮತ್ತು ವಾಣಿಜ್ಯ ಕಛೇರಿ ಗಳು, ಭೋಜನಗೃಹ, ಉಪಹಾರ ಮಂದಿರ, ವ್ಯಾಪಾರ ವೃತ್ತಿಯ ಚಿತ್ರಮಂದಿರ, ನಾಟ್ಯ ಶಾಲೆ, ಸಭಾಗೃಹಗಳು, ಇತರೆ ಕಸಬಿನ ಸಂಸ್ಥೆಗಳು.
3. ಕೈಗಾರಿಕಾ ವಲಯ	ಉಪಯುಕ್ತ ಕೈಗಾರಿಕೆ, ಸಣ್ಣ ಕೈಗಾರಿಕೆ, ಮಧ್ಯಮ ಕೈಗಾರಿಕೆ,ಭಾರೀ ಕೈಗಾರಿಕೆ, ಅಸಹ್ಯ ಕೈಗಾರಿಕೆ.
4. ಸಂಚಾರ ಸೌಲಭ್ಯ ವಲಯ	ರೈಲ್ವೆ ನಿಲ್ದಾಣ ಮತ್ತು ಸಂಬಂಧಿಸಿದ ಉಪ ಯೋಗ, ರಸ್ತೆ ಸಂಚಾರ ವ್ಯವಸ್ಥೆ, ವಾಹನ ನಿಲ್ಲುವ ಜಾಗ, ಬಂದರು ಪ್ರದೇಶ, ವಿಮಾನ ಸಾರಿಗೆ ಕೇಂದ್ರ, ಮತ್ತು ತಂತಿ, ದೂರವಾಣಿ, ಆಕಾಶವಾಣಿ ಕೇಂದ್ರಗಳು.
5. ಸಾರ್ವಜನಿಕ ಉಪ ಯಕ್ತ ವಲಯ	ನೀರು ಸರಬರಾಜು ವ್ಯವಸ್ಥೆ, ಒಳಚರಂಡಿ ಮತ್ತು ನಿರ್ಮಲೀಕರಣಕೇಂದ್ರ, ವಿದ್ಯುಚ್ಛಕ್ತಿ ಕೇಂದ್ರಗಳು ಮತ್ತು ಅದರ ಉಪಯೋಗಕ್ಕೆ ಸಂಬಂಧಿಸಿದ ಜಾಗಗಳು.
6. ಸಾರ್ವಜನಿಕ ಸಂಸ್ಥೆ ಗಳ ವಲಯ	ಸರ್ಕಾರಿ ಕಛೇರಿಗಳು, ನ್ಯಾಯಾಲಯಗಳು, ಬಂದೀಖಾನೆ, ಪೋಲಿಸ್‌ಠಾಣೆ, ರಾಜಭವನ, ವಿದ್ಯಾಸಂಸ್ಥೆಗಳು ಮತ್ತು ಸಾಂಸ್ಕೃತಿಕಕೇಂದ್ರ

		ಗಳು; ಆರೋಗ್ಯ ಕೇಂದ್ರಗಳು ಮತ್ತು ಆಸ್ಪತ್ರೆಗಳು, ಸಾರ್ವಜನಿಕ ಸಭಾಂಗಣಗಳು, ನಾಟಕ ಮಂದಿರಗಳು, ಸೇನಾವಿಭಾಗದ ಜಾಗಗಳು.
7.	ಬೈಲು ಪ್ರದೇಶ ಮತ್ತು ಕ್ರೀಡೆಗಳ ವಲಯ	ಆಟದ ಮೈದಾನ, ಮಕ್ಕಳ ಬೈಲು ಪ್ರದೇಶ, ಉದ್ಯಾನವನಗಳು, ಕ್ರೀಡಾ ಕೇಂದ್ರಗಳು, ಇತರ ವಿಹಾರ ಸ್ಥಳಗಳು, ರುದ್ರಭೂಮಿ ಮತ್ತು ಸ್ಮಶಾನಗಳು.
8.	ವ್ಯವಸಾಯ ವಲಯ	ತರಕಾರಿ ತೋಟ, ಹೂ ಮತ್ತು ಹಣ್ಣಿನ ತೋಟ, ಹುಲ್ಲು ಗಾವಲು, ಹೊಲ ಗದ್ದೆಗಳು, ಕಾಡು ಪ್ರದೇಶ, ಜೌಗುಭೂಮಿ, ಬಂಜರು ನೆಲ ಮತ್ತು ನೀರಿನಲ್ಲಿ ಮುಳುಗಿರುವ ಜಮೀನು.

ಮೇಲೆ ಹೇಳಿದ ರೀತಿಯ ವಲಯಗಳನ್ನು ಸೂಚಿಸುವ ನಕ್ಷೆಗಳನ್ನು ವಿವಿಧ ನಮೂನೆಯಿಂದಲೂ, ಅಥವಾ ಬಣ್ಣಗಳಿಂದಲೂ ಬರೆದು ಜನಸಾಮಾನ್ಯರಿಗೆ ಅರ್ಥವಾಗುವಂತೆ ವಿವರಣೆಗಳನ್ನು ಕೊಡಬೇಕು. ವಲಯ ನಿಯಮಗಳಲ್ಲಿ ಅಂತಹ ನಕ್ಷೆಗಳನ್ನು ಅನುಸರಿಸಿ ವಿವಿಧ ವಲಯಗಳಲ್ಲೂ ಭೂ ಉಪಯೋಗ ಶಿಸ್ತಿನಿಂದ ನಡೆದುಕೊಂಡು ಹೋಗಲು ಅನುಸರಿಬೇಕಾದ ಕ್ರಮಗಳನ್ನೆಲ್ಲಾ ವಿವರಿಸಬೇಕು.

ಪ್ರತಿ ವಲಯದಲ್ಲೂ ಇರಬಹುದಾದ ಭೂ ಬಳಕೆಯ ಪಟ್ಟಿಯನ್ನು ತಯಾರಿಸಬೇಕಾಗುತ್ತದೆ. ಆ ಪಟ್ಟಿಯಲ್ಲಿರದ ಕೆಲವು ಉಪಯೋಗಗಳನ್ನು ಪಡೆಯಲು ಯಾವ ವಲಯದಲ್ಲೂ ಅನುಮತಿ ಇರುವುದಿಲ್ಲ. ಆದರೆ ಕೆಲವೊಂದು ವಿಶಿಷ್ಟ ಕಾರ್ಯಗಳನ್ನು ವಲಯನಿಬಂಧನೆಯ ವರಿಷ್ಠಮಂಡಲಿಯ ಅಪ್ಪಣೆ ಪಡೆದು ನಡೆಸಬಹುದು. ಪಟ್ಟಿಯ ಕೊನೆಯಲ್ಲಿ ಅಂತಹ ಉಪಯೋಗಗಳನ್ನು ನಮೂದಿಸಬೇಕು. ಇವೆಲ್ಲವೂ ಮಾದರಿಯೇ ಹೊರತು ಅಂತಿಮ ಪಟ್ಟಿಯಲ್ಲ. ಪ್ರತಿಯೊಂದು ಯೋಜನಾ ಸಮಿತಿಯೂ ಇಂತಹ ಪಟ್ಟಿಯನ್ನು ತಮ್ಮ ನಗರಕ್ಕೆ ಅನ್ವಯವಾಗುವಂತೆ ತಯಾರಿಸಬೇಕು. ಉದಾಹರಣೆಗೆ (ಅ) ವಾಸದ ವಲಯದಲ್ಲಿ ಇರಬಹುದಾದ ಭೂ ಉಪಯೋಗ

ಗಳು ಮತ್ತು (ಆ) ಅನುಮತಿ ಪಡೆದು ಬಳಸಬಹುದಾದ ಕಾರ್ಯಗಳು –ಇವುಗಳ ವಿವರ ಈ ಕೆಳಗಿನಂತಿದೆ:

ವಾಸದ ವಲಯದಲ್ಲಿ

(ಅ) ಇರಬಹುದಾದ ಉಪಯೋಗಗಳು: ವಾಸದ ಮನೆಗಳು, ಭೋಜನ ನಿಲಯಗಳು, ವಿದ್ಯಾರ್ಥಿ ನಿಲಯಗಳು, ಛತ್ರಗಳು, ದೇವಸ್ಥಾನಗಳು ಮತ್ತು ಪೂಜಾಗೃಹಗಳು, ಸಾಮಾನ್ಯ ವಿದ್ಯಾಶಾಲೆಗಳು, ಪುಸ್ತಕ ಭಂಡಾರಗಳು, ಸಾಮಾನ್ಯ ಬೇಸಾಯ ಭೂಮಿ, ಕೈತೋಟಗಳು, ಹೂತೋಟಗಳು, ಸಾರ್ವಜನಿಕ ಕ್ರೀಡಾ ಚಟುವಟಿಕೆಗಳು, ಲಾಭರಹಿತ ಕ್ಲಬ್‌ಗಳು, ಗೃಹ ಕೈಗಾರಿಕೆಗಳು; ಇವಲ್ಲದೆ ಪ್ರತ್ಯೇಕ ಜಾಗಗಳಲ್ಲಿ ದಿನನಿತ್ಯ ಬಳಕೆಗಾಗಿ ಒಂದೆರಡು ಅಂಗಡಿಗಳು.

(ಆ) ಅನುಮತಿ ಪಡೆದು ಬಳಸಬಹುದಾದ ಕಾರ್ಯಗಳು: ಸ್ಥಳೀಯ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಉಪಯೋಗಗಳು, ಸಾರ್ವಜನಿಕ ಉಪಯುಕ್ತತೆ, ಸ್ಮಶಾನಗಳು, ಕ್ರೀಡಾಂಗಣಗಳು, ಜಾನುವಾರುಗಳ ಹಾಗೂ ಹುಚ್ಚರ ವೈದ್ಯಶಾಲೆಗಳಹೊರತು ಇತರ ವೈದ್ಯಶಾಲೆಗಳು, ಧರ್ಮಛತ್ರಗಳು, ಬೇಸಾಯ ಸಂಬಂಧ ಕಾರ್ಯಗಳು, ಇತ್ಯಾದಿ. ಇವಲ್ಲದೆ, ವಾಹನಗಳಿಗೆ ಬೇಕಾಗುವ ಯಂತ್ರದ ಎಣ್ಣೆಗಳನ್ನು ತುಂಬುವ ಜಾಗಗಳು (Filling stations) ಕಾಫಿ, ಹಿಟ್ಟು ಮತ್ತು ಅಕ್ಕಿ ಬೀಸುವ ಗಿರಣಿಗಳು, ಉಪಾಹಾರ ಗೃಹಗಳು, 5 ಅಶ್ವಶಕ್ತಿ ಸಾಮರ್ಥ್ಯದ ಯಂತ್ರಗಳುಳ್ಳ ಸಾಧಾರಣ ಕೈಗಾರಿಕೆಗಳು ಮತ್ತು ನಿತ್ಯೋಪಯೋಗಿ ವಾಣಿಜ್ಯಗಳು.

ಇದೇ ರೀತಿ, ಇತರ ವಲಯಗಳಿಗೂ ಅನ್ವಯವಾಗುವ ಭೂ ಬಳಕೆಯ ಪಟ್ಟಿಯನ್ನು ತಯಾರಿಸಬೇಕು

ಸಾಧಾರಣವಾಗಿ ಮನೆ ನಿವೇಶನಗಳಲ್ಲಿ ಕಟ್ಟಡಗಳನ್ನು ಕಟ್ಟುವಾಗ ಅನುಸರಿಸಬೇಕಾದ ಇತರ ನಿಬಂಧನೆಗಳಲ್ಲಿ ಮುಖ್ಯವಾದುವು–ನಿವೇಶನದ ಕನಿಷ್ಠ ವಿಸ್ತೀರ್ಣ, ಅದರ ಅಡ್ಡಗಲದ ಒಳಮಿತಿ ಹಾಗೂ ಕಟ್ಟಡದ ವಿಸ್ತೀರ್ಣಕ್ಕೂ ನಿವೇಶನಕ್ಕೂ ಇರುವ ಸಂಬಂಧ, ಕಟ್ಟಡದ ಎತ್ತರದ ಮಿತಿ, ಮುಂತಾದುವುಗಳು. ಇವುಗಳ ಜೊತೆಗೆ ಮನೆ ಕಟ್ಟುವಾಗ ನಿವೇಶನದ

ಅಡ್ಡಗಲಕ್ಕನುಸಾರವಾಗಿ ಎಡ ಮತ್ತು ಬಲ ಭಾಗದಲ್ಲಿ ಬಿಡಬೇಕಾದ ಜಾಗ ಅದರ ಉದ್ದಕ್ಕನುಗುಣವಾಗಿ ಹಿಂಭಾಗ ಮತ್ತು ಮುಂಭಾಗದಲ್ಲಿ ಬಿಡಬೇಕಾಗುವ ಜಾಗಗಳ ಕನಿಷ್ಠ ಮಿತಿಯೂ ಸೇರಿರುತ್ತವೆ. ಉದಾಹರಣೆಗೆ, ನಿವೇಶನದ ಅಡ್ಡಗಲ 9 ಮೀಟರು ಇದ್ದಾಗ ಒಂದು ಮೀಟರ್ ಜಾಗವನ್ನು ಎಡ ಮತ್ತು ಬಲ ಭಾಗಗಳಿಗೆ ಬಿಟ್ಟರೆ ಅದೇ 30 ಮೀಟರ್ ಮತ್ತು ಅದರ ಮೇಲ್ಪಟ್ಟ ಅಗಲದ ನಿವೇಶನಕ್ಕೆ 4.5 ಮೀಟರ್ ಖಾಲಿ ಜಾಗವನ್ನು ಎಡಕ್ಕೂ 6 ಮೀಟರನ್ನು ಬಲಕ್ಕೂ ಬಿಡಬೇಕಾಗುತ್ತದೆ. ಹಾಗೆಯೇ 12 ಮೀಟರ್ ಉದ್ದದ ನಿವೇಶನದಲ್ಲಿ ಮುಂದೆ ಒಂದು ಮೀಟರ್, ಹಿಂದೆ ಒಂದು ಮೀಟರ್ ಬಿಡಬೇಕಾಗಿದ್ದರೆ, ಅದೇ 30 ಮೀಟರ್ ಉದ್ದದ ನಿವೇಶನದಲ್ಲಿ ಅನುಕ್ರಮವಾಗಿ 4.5 ಮೀಟರ್ ಮತ್ತು 3 ಮೀಟರ್‌ಗಳನ್ನು ಬಿಡಬೇಕಾಗುವುದು. ಆದರೆ ಈ ಮಿತಿಗಳು ಆಯಾ ನಗರದ ದರ್ಜೆ ಮತ್ತು ಆವಶ್ಯಕತೆಗೆ ಅನುಗುಣವಾಗಿ ವ್ಯತ್ಯಾಸವಾಗಬಹುದು. ಹೀಗೆಯೇ ಕೈಗಾರಿಕೆ, ವಾಣಿಜ್ಯಗಳಿಗೆ ಸಂಬಂಧಪಟ್ಟ ನಿವೇಶನಗಳಿಗೂ, ಕೆಲವು ನಿಬಂಧನೆಗಳನ್ನು ಸೂಚಿಸಬೇಕಾಗುತ್ತದೆ. ಇತ್ತೀಚಿಗೆ ಕಟ್ಟಡದ ಎಲ್ಲಾ ಮಹಡಿಗಳ ಒಟ್ಟು ವಿಸ್ತೀರ್ಣವು ಅದರ ನಿವೇಶನದ ವಿಸ್ತೀರ್ಣಕ್ಕೆ ಹೋಲಿಸಿದರೆ ಎಷ್ಟಿರಬೇಕೆಂಬುದನ್ನು ಸೂಚಿಸುವ ಕ್ರಮ (Floor Area Ratio) ಜಾರಿಗೆ ಬರುತ್ತಿದೆ. ಸಾಧಾರಣವಾಗಿ ಈ ಸಂಖ್ಯೆ ½ ದಿಂದ 4 ರ ವರೆಗೆ ಇರುತ್ತದೆ. ಅಂದರೆ, ಯಾವ ಕಟ್ಟಡವೂ ನಿವೇಶನದ ವಿಸ್ತೀರ್ಣದ ನಾಲ್ಕರಷ್ಟಕ್ಕಿಂತ ಹೆಚ್ಚು ಆಯುವನ್ನು (ಎಲ್ಲಾ ಮಹಡಿಗಳೂ ಸೇರಿ) ಹೊಂದಿರಬಾರದು. ಹೀಗೆ ಕಟ್ಟಡಗಳನ್ನು ಅನೇಕ ವಿಧವಾದ ನಿರ್ಬಂಧಗಳಿಗೊಳಪಡಿಸಿ, ನಗರದ ರಸ್ತೆಗಳ ಮೇಲೂ ಇತರೆ ಸಾರ್ವಜನಿಕ ಸೌಕರ್ಯಗಳ ಮೇಲೂ ಹೆಚ್ಚು ಒತ್ತಡವಿಲ್ಲದಂತೆ, ನೋಡಿಕೊಳ್ಳುವ ಪ್ರಯತ್ನ ಮಾಡಲಾಗುತ್ತಿದೆ.

ಕೆಲವು ವಾಣಿಜ್ಯ ಮತ್ತು ಸಾರ್ವಜನಿಕ ಭವನಗಳು ಹೆಚ್ಚು ವಾಹನಗಳನ್ನು ಆಕರ್ಷಿಸುತ್ತವೆ. ಅದಕ್ಕಾಗಿ ಅಂತಹ ಭವನಗಳ ನಿವೇಶನಗಳಲ್ಲಿ ವಾಹನಗಳು ನಿಲ್ಲಲು ಎಷ್ಟು ಅವಕಾಶಮಾಡಬೇಕೆಂಬುದನ್ನು ಈ ಕೆಳಗೆ ಕೊಡಲಾಗಿದೆ.

ಉಪಯೋಗದ ವಿವರ	ಕೆಳಕಂಡ ಅಂಕಿಗಳಿಗೆ ಒಂದರಂತೆ ವಾಹನವನ್ನು ನಿಲ್ಲಿಸುವ ಜಾಗವನ್ನು ಬಿಡಬೇಕು:
1. ಚಿತ್ರಮಂದಿರ ಮತ್ತು ಸಭಾಗೃಹಗಳು	20 ಜನರು ಕೂಡುವ ಸ್ಥಳಾವಕಾಶ
2. ಚಿಲ್ಲರೆ ವ್ಯಾಪಾರ	45 ಚ. ಮೀ. ಅಂಗಡಿಜಾಗ
3. ಕಛೇರಿಗಳು	90 ಚ. ಮೀ. ಕಛೇರಿಜಾಗ
4. ಉಪಹಾರ ಗೃಹಗಳು	15 ಜನರ ಸ್ಥಳಾವಕಾಶ
5. ವಿದ್ಯಾರ್ಥಿನಿಲಯ, ಸಾರ್ವಜನಿಕ ವಸತಿಗೃಹ,ಪ್ರವಾಸಿ ಮಂದಿರ, ಇತ್ಯಾದಿ	4 ಅತಿಥಿ ಕೊಠಡಿಗಳು
6. ಕೈಗಾರಿಕಾ ಕಟ್ಟಡಗಳು	100 ಜನ ಕಾರ್ಮಿಕರು
7. ಸಗಟುವ್ಯಾಪಾರ ಮತ್ತು ಉಗ್ರಾಣಗಳ ಕಟ್ಟಡ	90 ಚ.ಮೀ. ಉಗ್ರಾಣದ ಜಾಗ
8. ಹೆಚ್ಚು ಸಂಸಾರಗಳು ವಾಸಿಸುವ ವಸತಿಗೃಹ	6 ಸಂಸಾರಗಳು
ಪ್ರತಿ ವಾಹನಕ್ಕೂ ಬೇಕಾದ ಜಾಗ	18 ಚ. ಮೀ.
ಸಾಮಾನು ಸಾಗಿಸುವ ಲಾರಿಗಳಿಗೆ ಮತ್ತು ಬಸ್ಸುಗಳಿಗೆ	24 ಚ. ಮೀ.

ಇದೇ ರೀತಿ ಸಾರ್ವಜನಿಕ ಕಟ್ಟಡಗಳು, ಕೈಗಾರಿಕಾ ಕೇಂದ್ರಗಳು ಮುಂತಾದುವುಗಳನ್ನು ಕಟ್ಟಲು ಅನುಸರಿಸಬೇಕಾದ ನಿಬಂಧನೆಗಳು ವಲಯ ನಿಯಂತ್ರಣದಲ್ಲಿ ಅಡಕವಾಗಿರುತ್ತವೆ. ಜ್ಞಾಪಕದಲ್ಲಿಡಬೇಕಾದ ಇನ್ನೊಂದು ಮುಖ್ಯ ವಿಷಯವೆಂದರೆ ಪ್ರತಿ ಪಟ್ಟಣದಲ್ಲೂ ಅನುಸರಿಸುತ್ತಿರುವ ಕಟ್ಟಡಗಳ ನಿಯಮಗಳು,ವಲಯ ನಿಬಂಧನೆಗಳಿಗೆ ಸರಿಹೊಂದಿದಂತಿರಬೇಕೆಂಬುದು. ಇಲ್ಲವಾದರೆ ಸಾರ್ವಜನಿಕರಿಗೆ ವಿಶೇಷ ತೊಂದರೆಯುಂಟಾಗಿ, ಅನೇಕರು ಕಾನೂನಿನ ಮರೆ ಹೋಗಬೇಕಾಗುತ್ತದೆ. ಇವನ್ನೆಲ್ಲಾ ಆಲೋಚಿಸಿ, ಸ್ಥಳಕ್ಕೆ ಹೊಂದುವಂತೆ ಸ್ಥಳೀಯ ನಿಬಂಧನೆಗಳನ್ನು ತಯಾರಿಸಬೇಕು.

ಇವಲ್ಲದೆ, ಹಾಲಿ ಇರುವ ಭೂ ಬಳಕೆಯ ನಕ್ಷೆಗಳನ್ನು ವಿವರವಾಗಿ ತೋರಿಸುವ ದಾಖಲೆ ಪುಸ್ತಕಗಳನ್ನೂ ಬರೆದಿಡಬೇಕು. ಸಾರ್ವಜನಿಕರ ಅಹವಾಲುಗಳನ್ನು ಪರಾಮರ್ಶಿಸಿ, ಸರ್ಕಾರದ ಅಜ್ಞೆಯನ್ನು ಪಡೆದು, ನಗರ ಯೋಜನಾ ಮಂಡಲಿಯು ನಕ್ಷೆಗಳನ್ನು ಭದ್ರವಾಗಿ ಇಡಬೇಕು. ಸ್ಥಳೀಯ ಸಂಸ್ಥೆಗಳ ಬದಲು ವಿಶೇಷ ಯೋಜನಾಮಂಡಲಿಗಳನ್ನು ನೇಮಿಸಿರುವಾಗ, ವಲಯ ನಿಯಂತ್ರಣವನ್ನು ಅವಶ್ಯವೆಂದು ಕಂಡರೆ ಮಾತ್ರವೇ ಸಂಬಂಧ ಪಟ್ಟ ಸ್ಥಳೀಯ ಸಂಸ್ಥೆಗಳ ಮೂಲಕ ಜಾರಿಗೆ ತರಲು ಏರ್ಪಾಡುಮಾಡ ಬಹುದು. ಸ್ಥಳೀಯ ಸಂಸ್ಥೆಗಳಿಗೇ ಯೋಜನಾಕಾರ್ಯವನ್ನು ವಹಿಸಿದಾಗ, ಅಂತಹ ಸಂಸ್ಥೆಗಳು ಯೋಜನೆಯನ್ನು ನೋಡಿಕೊಳ್ಳಲು ಒಂದು ದಕ್ಷ ಸಮಿತಿಯನ್ನು ನೇಮಿಸಿ ನಗರ ಯೋಜನೆಯ ಜತೆಗೆ ವಲಯ ನಿಬಂಧನೆ ಗಳನ್ನು ನಿಯಂತ್ರಿಸಲು ತಕ್ಕ ಏರ್ಪಾಡು ಮಾಡುವುದು ವಿಹಿತ.

ಭೂ ವಿಭಜನಾ ನಿಯಮಗಳು

ನಗರ ಯೋಜನೆಯನ್ವಯ ಭೂ ವಿಭಜನೆಮಾಡಿ ನಿವೇಶನಗಳನ್ನು ತಯಾರಿಸುವಾಗ ಈ ಕೆಳಗಿನ ನಿಯಮಗಳನ್ನು ಅನುಸರಿಸಬೇಕು.

1. ವಿಭಜಿಸಿದ ನಿವೇಶನವು ಅತಿ ಚಿಕ್ಕದಾಗದಂತೆ ನೋಡಿಕೊಳ್ಳ ಬೇಕು. ನಿವೇಶನದ ವಿಸ್ತೀರ್ಣ ವ್ಯವಸಾಯ ವಲಯದಲ್ಲಿ ಒಂದು ಎಕರೆ, ಕೈಗಾರಿಕಾ ವಲಯದಲ್ಲಿ 230 ಚ.ಮೀ. ವಾಸದ ವಲಯದಲ್ಲಿ 90 ಚ.ಮೀ.ಮತ್ತು ವಾಣಿಜ್ಯ ವಲಯದಲ್ಲಿ 55 ಚ.ಮೀ.ಗೆ ಕಡಿಮೆ ಇಲ್ಲದಂತೆ ವಿಭಾಗಮಾಡಬೇಕು.

2. (ಅ) ಖಾಸಗೀ ನಿವೇಶನಗಳಲ್ಲಿ ರಸ್ತೆಗಳು ಕಡೇಪಕ್ಷ ಕೆಳಗೆ ಕಂಡಷ್ಟು ಅಗಲವಾದರೂ ಇರಬೇಕು.

ವಾಸದ ವಲಯದಲ್ಲಿ ರಸ್ತೆಗಳ ಅಗಲ ಅತಿ ಕಡಿಮೆ ಎಂದರೆ

(i) ಮುಂದುವರಿಯದೆ ನಿಲ್ಲುವ ರಸ್ತೆಗಳು (cul-de-sac): 9 ಮೀಟರ್

(ii) ಒಂದು ಸುತ್ತು ಬಂದು ಸೇರುವ ರಸ್ತೆ (Loop street): 9 ಮೀಟರ್

(iii) ವಾಸದ ವಲಯದ ರಸ್ತೆಗಳು : 9ಮಿ. ನಿಂದ14ಮಿ.

(iv) ಮುಖ್ಯ ಬೀದಿಗಳು : 18ಮೀಟರ್

(v) ಹೆಚ್ಚು ವಾಹನಗಳು ಕೂಡುವ ರಸ್ತೆಗಳು :

23ಮೀಟರ್‌ನಿಂದ30ಮೀಟರ್

ಭಂಗಿ ಗಲ್ಲಿಗಳು ಇರಲೇ ಬೇಕಿದ್ದಲ್ಲಿ ಅವುಗಳ ಅಗಲ 3.5ಮಿ.

(ಆ) ವಾಸದ ವಲಯವನ್ನು ಬಿಟ್ಟು ಇತರ ಭಾಗಗಳಲ್ಲಿ ರಸ್ತೆಯ ಅಗಲ ಕಡೇಪಕ್ಷ 14ಮೀಟರುಗಳಾದರೂ ಇರಬೇಕು.

3. ಮುಖ್ಯ ಬೀದಿಗಳಲ್ಲಿ ಕಟ್ಟಡಗಳು 'ಕಟ್ಟಡರೇಖೆ' ಗಿಂತ ಮುಂದೆ ಬಾರದಂತೆ ನೋಡಿಕೊಳ್ಳಬೇಕಲ್ಲದೆ ಅಷ್ಟು ಜಾಗವನ್ನು ಮುಂದೆ ಬಿಡಲು ಅನುಕೂಲವಾಗುವಂತೆ ನಿವೇಶನದ ಅಳತೆ ಇರಬೇಕಾಗುತ್ತದೆ.

4. ನಿವೇಶನಗಳನ್ನು ರಚಿಸಲು ತಯಾರಿಸುವ ನಕ್ಷೆಯಲ್ಲಿ ಪ್ರತಿ ನಿವೇಶನದ ನಿರ್ದಿಷ್ಟ ಬಳಕೆಯ ವಿವರಗಳನ್ನು ಸರಿಯಾಗಿ ತೋರಿಸಬೇಕು.

5. ನಗರದ ಯಾವುದೇ ಭಾಗದಲ್ಲಾದರೂ ಹೆಚ್ಚು ಖಾಸಗಿ ಭೂ-ವಿಭಜನೆಯಾಗುವುದು ಕಂಡುಬಂದರೆ ಅಂತಹ ಪ್ರದೇಶಕ್ಕೆ ಒಂದು ಸಾಮಾನ್ಯ ಭೂ ವಿಭಜನಾ ನಕ್ಷೆಯನ್ನು ಯೋಜನಾಮಂಡಲಿ ತಯಾರಿಸಿ, ಎಲ್ಲರೂ ಅದನ್ನು ಅನುಸರಿಸುವಂತೆ ಮಾಡುವುದಲ್ಲದೆ, ಅಲ್ಲಿ ರಸ್ತೆ ವಗೈರೆ ಕಾಮಗಾರಿಯನ್ನು ತಾವೇ ಮಾಡಲು ಏರ್ಪಡಿಸಿದರೆ ಬಡಾವಣೆ ಚೆನ್ನಾಗಿ ಬೆಳೆಯುವುದು.

5. ವಾಸದ ಮನೆಗಳು

ಇಪ್ಪತ್ತನೆ ಶತಮಾನದಲ್ಲಿ ಮಾನವನು ಕೈಗಾರಿಕೆ, ವಿದ್ಯಾಭ್ಯಾಸ ಮತ್ತು ವಿಜ್ಞಾನದಲ್ಲಿ ಹಿಂದೆಂದೂ ಕಾಣದಷ್ಟು ಪ್ರಗತಿ ಪಡೆದಿದ್ದಾನೆ. ಆದರೂ ಕೂಡ ಮಾನವಕುಲದ ಬಹುಪಾಲು ಜನರು ತಮ್ಮ ಮೂಲಭೂತ ಆವಶ್ಯಕತೆಗಳನ್ನು ಈಡೇರಿಸಲು ಸಮರ್ಥರಾಗಿಲ್ಲ. ಅದರಲ್ಲೂ ನಗರದ ಜನರು ತಮ್ಮ ದಿನನಿತ್ಯ ವಾಸಕ್ಕಾಗಿ ಪಡುತ್ತಿರುವ ಕಷ್ಟ ಅಷ್ಟಿಷ್ಟಲ್ಲ. ಚಳಿ, ಗಾಳಿ, ಮಳೆ ಮುಂತಾದ ನೈಸರ್ಗಿಕ ಅನಾನುಕೂಲತೆಗಳಿಂದ ಮರೆ ಮಾಡಿಕೊಂಡು ವಾಸಿಸಲು ಮಾನವನು ಪಡುತ್ತಿರುವ ಬವಣೆಯನ್ನು ನೋಡಿದರೆ ಉಳಿದ ಪ್ರಾಣಿವರ್ಗಗಳಿಗಿಂತ ಕೆಲವರ ಸ್ಥಿತಿ ಶೋಚನೀಯ. ಇದಕ್ಕೆಲ್ಲಾ ಕಾರಣ ಹಲವಾರು. ಮುಖ್ಯ ಕಾರಣವೆಂದರೆ, ಜನಸಂಖ್ಯೆಯ ಮಿತಿಮೀರಿದ ಹೆಚ್ಚಳ, ಹಾಗೂ ಈ ಹೆಚ್ಚಳಕ್ಕೆ ಅನುಗುಣವಾಗಿ ವಾಸದ ಮನೆಗಳನ್ನು ಕಟ್ಟಿಕೊಳ್ಳಲು ಬಹಳಷ್ಟು ಜನರಿಗೆ ಇರುವ ತೊಂದರೆ. ಕಳೆದ ಅನೇಕ ಶತಮಾನಗಳಲ್ಲಿ ಜನಸಂಖ್ಯೆ ಅಷ್ಟೇನೂ ಏರುತ್ತಿರಲಿಲ್ಲ. ಆದರೆ ಇತ್ತೀಚೆಗಿನ 60–70 ವರ್ಷಗಳಲ್ಲಿ ಪರಿಸ್ಥಿತಿ ತೀರಾ ಭಿನ್ನವಾಗಿದೆ. ವರ್ಷಕ್ಕೆ ಸುಮಾರು ಐದಾರು ಕೋಟಿ ಜನರು ಹೆಚ್ಚುತ್ತಿದ್ದಾರೆ. ಜನ–ಸಂಖ್ಯಾ ಹೆಚ್ಚಳ ಇದೇ ರೀತಿ ಮುಂದುವರಿದದ್ದೇ ಆದರೆ, ಈ ಶತಮಾನದ ಅಂತ್ಯದಲ್ಲಿ 600 ರಿಂದ 700 ಕೋಟಿ ಜನರಿಗೆ ಮನೆ, ಆಹಾರ ಮತ್ತು ಬಟ್ಟೆಯನ್ನು ಒದಗಿಸಬೇಕಾಗುತ್ತದೆ. ಏರುವ ಜನಸಂಖ್ಯೆಗೆ ಅನುಗುಣ ವಾಗಿ ವ್ಯವಸಾಯದ ಭೂಮಿ ಹೆಚ್ಚುವಂತಿಲ್ಲ. ಅಂದಮೇಲೆ ಹೆಚ್ಚುವರಿ ಜನರೆಲ್ಲಾ ನಗರಗಳಲ್ಲಿ ವ್ಯವಸಾಯೇತರ ಕಸಬನ್ನು ಹುಡುಕಿಕೊಂಡು ವಲಸೆ ಬರಬೇಕಾಗುತ್ತದೆ. ಮೊದಲೇ ತೊಂದರೆಯಲ್ಲಿರುವ ನಗರಗಳು, ಇವರಿಗೆಲ್ಲಾ ಮನೆಗಳನ್ನೊದಗಿಸುವುದು ಅಗಾಧ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಪರಿಹರಿಸದೆ ನಗರಗಳು ಯೋಜನೆಗಳ ಪ್ರಕಾರ ಬೆಳವಣಿಗೆ ಯಾಗುವಂತಿಲ್ಲ.

ಮಾನವನ ನಾಗರಿಕತೆಯೊಡನೆಯೇ ಜಮೀನನ್ನು ಬಳಸುವ ವಿಧಾನ

ದಲ್ಲಿ ಹೆಚ್ಚು ಆಸಕ್ತಿ ಉಂಟಾಯಿತು. ತನಗೆ ಬೇಕಾದ ಆಹಾರ, ಬಟ್ಟೆ ಮತ್ತು ಅಡಿಗೆ ಮಾಡಿಕೊಳ್ಳಲು ಜಾಗ–ಮುಂತಾದುವುಗಳಿಗೆ ಭೂಮಿಯನ್ನು ಉಪಯೋಗಿಸುತ್ತಿದ್ದುದಲ್ಲದೆ ಮನೆಕಟ್ಟಲು ಬೇಕಾಗಬಹುದಾದ ಮಣ್ಣು, ಕಲ್ಲು, ಮರ, ಹುಲ್ಲು, ಬಿದಿರು ಮುಂತಾದುವುಗಳನ್ನೆಲ್ಲಾ ಭೂಮಿಯಿಂದಲೇ ಪಡೆದು ತಾನೇ ಸ್ವತಃ ದುಡಿಯುತ್ತಿದ್ದ. ತನಗೆ ಬೇಕಾಗುವ ಅತಿ ಸರಳ ರೀತಿಯ ಮನೆಯನ್ನು ತನ್ನ ಗುಪ್ತ ಕಾರ್ಯಗಳಿಗೂ, ಬೆಲೆಯುಳ್ಳ ಸಾಮಾನುಗಳನ್ನು ಭದ್ರವಾಗಿಡಲೂ ಮತ್ತು ಹವಾಮಾನದ ವೈಪರೀತ್ಯ ದಿಂದ ರಕ್ಷಿಸಿಕೊಳ್ಳಲೂ ಆತ ಉಪಯೋಗಿಸುತ್ತಿದ್ದ. ಅವನ ಜೀವನ ಸರಳವೂ ಪ್ರಕೃತಿಯೊಡನೆ ಹೊಂದಿಯೂ, ಧಾರಾಳ ಗಾಳಿ ಬೆಳಕು ದೊರೆಯು ವಂತೆಯೂ ಇತ್ತು. ಆದರೆ, ಇಂದಿನ ಪರಿಸ್ಥಿತಿಯಲ್ಲಿ ನಗರಗಳಿಗೆ ಜನರು ಭಾರಿ ಸಂಖ್ಯೆಯಲ್ಲಿ ವಲಸೆ ಬರುತ್ತಿರುವ ಕಾರಣ, ನಗರಗಳಲ್ಲಿ ಭೂಮಿಯ ವಿಭಾಗ ಹೆಚ್ಚಾಗಿ, ಸಣ್ಣ ಪುಟ್ಟ ನಿವೇಶನಗಳ ನಿರ್ಮಾಣ ರೂಢಿಯಾಗಿದೆ. ಅಂತಹ ನಿವೇಶನವೊಂದನ್ನು ಕೊಳ್ಳುವ ಶಕ್ತಿ ಸಾಮಾನ್ಯವಾಗಿ ಹಲವರಿಗೆ ಇರಬಹುದಾದರೂ ಅಲ್ಲಿ ಮನೆಕಟ್ಟುವುದು ಎಲ್ಲರಿಗೂ ಸಾಧ್ಯವಿಲ್ಲ. ಮನೆ ಕಟ್ಟಲು ಬೇಕಾಗುವ ಸಾಮಗ್ರಿಗಳನ್ನೆಲ್ಲಾ ಕೊಳ್ಳಲೇಬೇಕು, ಅಲ್ಲದೆ ಕಟ್ಟುವ ವಿಧಾನವೂ ತಿಳಿದಿರುವುದಿಲ್ಲ. ಆದುದರಿಂದ ವ್ಯಕ್ತಿಯು ತನ್ನ ವಾಸಕ್ಕಾಗಿ ಮನೆಯನ್ನು ಕಟ್ಟುವುದಾಗಲೀ ಕೊಳ್ಳುವುದಾಗಲೀ ಆತನ ಸಾಮರ್ಥ್ಯಕ್ಕೆ ಮೀರಿದ್ದು. ಈ ಶಕ್ತಿ ಪಡೆಯಲು ಸಂಪಾದನೆಯೇ ಮುಖ್ಯ. ಮನೆಗಳನ್ನು ಪಡೆಯಲು ನಗರದ ಜನರು ಪಡುವ ಕಷ್ಟ ಅಷ್ಟಿಷ್ಟಲ್ಲ. ಇವೆಲ್ಲ ದರ ಪರಿಣಾಮವೇ ತೀವ್ರವಾಗಿ ಬೆಳೆಯುತ್ತಿರುವ ನಗರಗಳಲ್ಲಿನಾವು ಕಾಣುವ ದೃಶ್ಯ ; ಕೊಳಚೆ ಪ್ರದೇಶಗಳು, ಜನಸಂದಣಿ, ಸಿಕ್ಕಿದ ಜಾಗದಲ್ಲಿ ನೆಲೆ ಯೂರುವುದು, ಕೊನೆಗೆ ಬೀದಿಯಲ್ಲಿ ಮಲಗುವುದು, ಮುಂತಾದ ಕಷ್ಟ ಪರಿ ಸ್ಥಿತಿಯನ್ನು ನಗರಗಳು ಎದುರಿಸಬೇಕಾಗಿದೆ.

ನಗರಗಳಲ್ಲಿ ಗೃಹಸಮಸ್ಯೆ

ಭಾರತದಲ್ಲೂ ಈ ಸಮಸ್ಯೆ ಅಗಾಧವಾಗಿದೆ. ರಾಷ್ಟ್ರೀಯ ಯೋಜನಾ ಮಂಡಲಿಯು ನಡೆಸಿದ ಒಂದು ಸಮೀಕ್ಷೆಯ ಪ್ರಕಾರ ಐದಾರು ವರ್ಷಗಳ

ಹಿಂದೆ ನಮ್ಮ ದೇಶದಲ್ಲಿ ಒಟ್ಟು 8.87 ಕೋಟಿ ಮನೆಗಳ ಅಭಾವವಿತ್ತು. ವರ್ಷಕ್ಕೆ 20 ಲಕ್ಷ ಮನೆಗಳ ಕೊರತೆ ಬೀಳುತ್ತಾ ಹೋಗುತ್ತದೆ. ನಗರಗಳಲ್ಲಿಯೇ ಸುಮಾರು 1 ಕೋಟಿ 20 ಲಕ್ಷ ಮನೆಗಳ ಕೊರತೆ ಇತ್ತು. ಏರುತ್ತಿರುವ ಜನಸಂಖ್ಯೆಯಿಂದಾಗಿ ಈ ಕೊರತೆ 1976ರ ವೇಳೆಗೆ ಎರಡೂವರೆ ಕೋಟಿಯಾಗಬಹುದೆಂದು ಅಂದಾಜು ಮಾಡಲಾಗಿದೆ. ಇದಲ್ಲದೆ ಮಧ್ಯಮ ವರ್ಗದ ಜನರು ತಮ್ಮ ಮನೆಗಳನ್ನು ಇನ್ನೂ ಚೆನ್ನಾಗಿ ಕಟ್ಟಿಕೊಳ್ಳುವ ಹಂಬಲ ಹೊಂದಿರುತ್ತಾರೆ. ಈಗಿರುವ ಬಹುಪಾಲು ಮನೆಗಳಲ್ಲಿ ಶೌಚಗೃಹಗಳು. ನೀರುಸರಬರಾಜು, ಅಡಿಗೆ ಮನೆಗಳು ಮುಂತಾದುವುಗಳಿರುವುದಿಲ್ಲ.

ಇನ್ನೊಂದು ಸಮೀಕ್ಷೆಯಿಂದ ತಿಳಿದುಬಂದಿರುವುದೇನೆಂದರೆ, ನಗರದಲ್ಲಿರುವ ಮನೆಗಳ ಶೇಕಡ 62ರಲ್ಲಿ ಪ್ರತಿ ಕೊಠಡಿಯಲ್ಲೂ ನಾಲ್ಕು ಜನರು ವಾಸಿಸುತ್ತಾರೆ. ಘೋರಕಪುರದಲ್ಲಿ ಶೇಕಡ 84ರಷ್ಟು ಜನರು ತಲಾ 4.7 ಚ.ಮೀ. ನಷ್ಟು ಮನೆ ಜಾಗವನ್ನು ಹೊಂದಿದ್ದಾರೆ. ದೇಶದ ಭಾರೀ ನಾಲ್ಕು ಮಹಾ ನಗರಗಳಲ್ಲಿ ಶೇ. 53ರಿಂದ 64 ರಷ್ಟು, ಮತ್ತು ಮೊದಲನೆಯ ಏಳು ನಗರಗಳಲ್ಲಿನ ಶೇ.48 ರಷ್ಟು ಜನರು ಒಂದು ಕೊಠಡಿಯ ಮನೆಗಳಲ್ಲಿ ವಾಸವಾಗಿದ್ದಾರೆ. ಹಳೇ ದೆಹಲಿಯಲ್ಲಿ ನಡೆಸಿದ ಒಂದು ವೀಕ್ಷಣೆಯ ವರದಿ ಪ್ರಕಾರ, 1787 ಕೊಳಚೆ ಪ್ರದೇಶಗಳಲ್ಲಿನ ಮನೆಗಳು ಮನುಷ್ಯರು ವಾಸ ಮಾಡಲು ತೀರಅಯೋಗ್ಯವಾದಂತಹ ಸ್ಥಿತಿಯಲ್ಲಿದ್ದುವು. ಜನಸಂದಣಿ ಹಾಗೂ ಕೊಳಚೆಯಿಂದ ನಾರುವ ಆ ಪ್ರದೇಶಗಳು ಮುರುಕು ಮನೆಗಳಿಂದ ಕೂಡಿ ಸಾರ್ವಜನಿಕ ಸೌಕರ್ಯಗಳಿಲ್ಲದೆ ಶೋಚನೀಯಪರಿಸ್ಥಿತಿಯಲ್ಲಿದ್ದುವು. ಅಂತಹ ಕಡೆ ಸುಮಾರು 50,000 ಕುಟುಂಬಗಳಿಗೆ ಸೇರಿದ 2,25,000 ಜನರು ವಾಸಿಸುತ್ತಿದ್ದರು. ಕಲ್ಕತ್ತಾದಲ್ಲಾದರೋ, ಶೇ. 28 ಜನರು ಅಂತಹ ಕೊಳಚೆ ಪ್ರದೇಶಗಳಲ್ಲಿರುವ ಸಾಧಾರಣ ಮನೆಗಳಲ್ಲಿ ವಾಸಿಸುತ್ತಿದ್ದರು. ಕಾನ್‌ಪುರದಲ್ಲಿ ಐದನೆ ಒಂದು ಪಾಲು ಜನರು ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿದ್ದು, ಆ ನಗರದ ಕೈಗಾರಿಕಾ ಕಾರ್ಮಿಕರು ವಾಸಿಸುವ ಮನೆಗಳಲ್ಲಿ ಶೇ. 65ರಷ್ಟು ಮನುಷ್ಯರು ವಾಸಿಸಲು ಅನರ್ಹಸ್ಥಿತಿಯಲ್ಲಿದ್ದುವು. ಬೆಂಗಳೂರು ನಗರದಲ್ಲಿ 120 ಕೊಳಚೆ ಪ್ರದೇಶಗಳಿದ್ದು ಸುಮಾರು 1.50,000 ಜನರು ಅಲ್ಲಿ ಬಹಳ ಅನಾರೋಗ್ಯ ಪರಿಸ್ಥಿತಿಯಲ್ಲಿ ವಾಸಿಸು

ತ್ತಿದ್ದಾರೆ. ಇದೆಲ್ಲಕ್ಕೂ ಮಿಗಿಲಾಗಿ. ನಮ್ಮ ನಗರಗಳಲ್ಲಿ ಎಷ್ಟೋ ಜನರು ಬೀದಿಗಳಲ್ಲಿ ವಾಸಿಸುವುದನ್ನು ಕಾಣಬಹುದು. ವಾಸದ ಮನೆಗಳನ್ನೊದಗಿಸುವ ದಿಶೆಯಲ್ಲಿ ಒಂದು ಸರಿಯಾದ ಯೋಜನೆ ಇಲ್ಲದಿರುವುದು ಮತ್ತು ಪುರೋಗಾಮಿ ಕಾರ್ಯಕ್ರಮವನ್ನು ತೆಗೆದುಕೊಳ್ಳದಿರುವುದು ನಗರಗಳಲ್ಲಿ ಕೊಳಚೆ ಪ್ರದೇಶಗಳು ಹೆಚ್ಚಲು ಕಾರಣವಾಗಿದೆ ಎನ್ನಬಹುದು.

ಭಾರತದ ಜನಸಂಖ್ಯೆ ಪ್ರಪಂಚದ ಜನಸಂಖ್ಯೆಯ ಏಳರಲ್ಲೊಂದು ಪಾಲು. ಪ್ರತಿ ದಶಕದಲ್ಲೂ ಜನಸಂಖ್ಯೆ ಏರುತ್ತಲೇ ಇದೆ. 1951 ರಿಂದ 61ರ ವರೆಗೆ 7 ಕೋಟಿ 70 ಲಕ್ಷ ಜನರು ಹೆಚ್ಚಿದ್ದರೆ, 1961 ರಿಂದ 71 ರೊಳಗೆ ಜನಸಂಖ್ಯೆ 10 ಕೋಟಿ 70 ಲಕ್ಷದಷ್ಟು ಹೆಚ್ಚಿತು. ಇದರಲ್ಲಿ ನಗರಗಳ ಜನಸಂಖ್ಯೆ 1951 ರಲ್ಲಿ 62 ದಶಲಕ್ಷವಿದ್ದದ್ದು 1961 ರಲ್ಲಿ 79 ದಶಲಕ್ಷಕ್ಕೂ, 1971 ರಲ್ಲಿ 112 ದಶಲಕ್ಷಕ್ಕೂ ಏರಿತು. 1981 ರಲ್ಲಿ ಸುಮಾರು 152 ದಶಲಕ್ಷ ಜನರು, ಅಂದರೆ 15 ಕೋಟಿ 20 ಲಕ್ಷ ಜನರು, ನಗರಗಳಲ್ಲಿ ವಾಸಿಸುವರೆಂದು ಅಂದಾಜು ಮಾಡಲಾಗಿದೆ. ಹೀಗೆ ಜನಸಂಖ್ಯೆ ಏರುತ್ತಿದ್ದರೂ, ಇದೇ ವೇಗದಲ್ಲಿ ಮನೆಗಳ ನಿರ್ಮಾಣವಾಗುತ್ತಿಲ್ಲ. ಆದುದರಿಂದಲೇ ವಾಸದ ಮನೆಗಳ ಅಭಾವ ದೇಶಾದ್ಯಂತ ವ್ಯಾಪಿಸಿದೆ. ಪ್ರತಿ ವರ್ಷವೂ ಮನೆಗಳ ಕೊರತೆ ಸುಮಾರು 20 ಲಕ್ಷದಷ್ಟು ಹೆಚ್ಚುತ್ತಿದ್ದರೂ ಕೇವಲ 3 ಲಕ್ಷ ಮನೆಗಳನ್ನು ಮಾತ್ರ ಪ್ರತಿವರ್ಷವೂ ಕಟ್ಟಲಾಗುತ್ತಿದೆ. ಅಂದಮೇಲೆ ಸಮಸ್ಯೆಯ ಜಟಿಲತೆಯನ್ನು ವಿವರಿಸಬೇಕಾದ್ದಿಲ್ಲ. ರಷ್ಯಾ ದೇಶದಲ್ಲಿ ಪ್ರತಿ 1,000 ಜನರಿಗೆ ವರ್ಷಕ್ಕೆ 10.3 ಮನೆಗಳೂ, ಪಶ್ಚಿಮ ಜರ್ಮನಿಯಲ್ಲಿ 10.2, ಸ್ವೀಡನ್‌ನಲ್ಲಿ 10, ಜಪಾನಿನಲ್ಲಿ 7.2 ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ 6.5 ಮನೆಗಳು ನಿರ್ಮಾಣವಾಗುತ್ತಿವೆ. ಆದರೆ ಭಾರತದಲ್ಲಿ ಪ್ರತಿ ಸಾವಿರ ಜನರಿಗೆ ವರ್ಷಕ್ಕೆ 2 ಮನೆಗಳು ಮಾತ್ರ ನಿರ್ಮಾಣವಾಗುತ್ತಿವೆ! ಆದಕಾರಣ, ನಮ್ಮ ದೇಶದಲ್ಲಿ ಗೃಹ ನಿರ್ಮಾಣ ಚಟುವಟಿಕೆಯನ್ನು ಮೂರು ಪಟ್ಟು ಹೆಚ್ಚಿಸದೆ ಹೋದರೆ ಈ ಸಮಸ್ಯೆ ಇನ್ನೂ ತೀವ್ರವಾಗಲಿದೆ.

ನಮ್ಮ ಮೈಸೂರು ರಾಜ್ಯದಲ್ಲೂ ವಾಸದ ಮನೆಗಳ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಏರುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಮನೆ

ಗಳ ನಿರ್ಮಾಣವಾಗುತ್ತಿಲ್ಲವಾದ್ದರಿಂದ ಮನೆಗಳ ಅಭಾವ ಹೆಚ್ಚುತ್ತಿದೆ. ಈ ಕೆಳಗಿನ ಅಂಕಿಗಳಿಂದ ಈ ಅಂಶ ಚೆನ್ನಾಗಿ ವೇದ್ಯವಾಗುತ್ತದೆ.

ಜಿಲ್ಲೆ	1951 ರಿಂದ 61 ರ ವರೆಗೆ ಜನಸಂಖ್ಯೆಯ ಶೇಕಡಾ ವಾರು ಏರಿಕೆ	1951–61 ರಲ್ಲಿ ಕಟ್ಟಿದ ಮನೆ–ಶೇಕಡಾವಾರು
ಬೆಂಗಳೂರು	17.74	13·2
ಬೆಳಗಾವಿ	20·53	6·1
ಬೀದರ್	20·35	1.3
ಚಿತ್ರದುರ್ಗ	26·02	7·3
ಧಾರವಾಡ	23·80	4·4
ಗುಲ್ಬರ್ಗ	15·31	2·6

ಇತರ ಜಿಲ್ಲೆಗಳಲ್ಲೂ ಇದೇ ರೀತಿ ಮನೆಗಳ ಕೊರತೆ ಇದೆ ಎಂಬುದು ಜನಗಣತಿಯ ಅಂಕಿ ಅಂಶಗಳಿಂದ ತಿಳಿದುಬರುತ್ತದಲ್ಲದೆ ಜನರು ವಾಸಿಸುವ ಪರಿಸ್ಥಿತಿಯನ್ನು ನೋಡಿದರೆ ಈ ವಿಚಾರ ತಾನಾಗಿಯೆ ಸ್ಪಷ್ಟವಾಗುತ್ತದೆ. ನಮ್ಮ ರಾಜ್ಯದ ನಗರಗಳಲ್ಲಿ ಸುಮಾರು 5.5 ಲಕ್ಷ ಮನೆಗಳ ಹಾಗೂ ಗ್ರಾಮಗಳಲ್ಲಿ 9 ಲಕ್ಷ ಮನೆಗಳ ಅಭಾವ ಇದೆ ಎಂದು ಅಂದಾಜುಮಾಡಲಾಗಿದೆ.

ಮನೆಗಳ ಸಂಖ್ಯೆಯನ್ನು ಪರಿಶೀಲಿಸಿದಮೇಲೆ, ಇರುವ ಮನೆಗಳ ಪರಿಸ್ಥಿತಿಯನ್ನು ಗಮನಿಸೋಣ. 1961 ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ನಮ್ಮ ಗ್ರಾಮಾಂತರ ಮನೆಗಳಲ್ಲಿ ಶೇಕಡಾ 50 ರಷ್ಟು ಮನೆಗಳು ಮಣ್ಣಿನ ಗೋಡೆಗಳಿಂದಲೂ, ಶೇಕಡಾ 35 ರಷ್ಟು ಕಲ್ಲು ಗೋಡೆಗಳಿಂದಲೂ ಕಟ್ಟಲ್ಪಟ್ಟಿವೆ. ಅಲ್ಲದೆ ಮೇಲ್ಛಾವಣಿಗೆ ಹುಲ್ಲು, ಸೋಗು ಮತ್ತು ಜೊಂಡನ್ನು ಉಪಯೋಗಿಸಿ ಕಟ್ಟಿರುವ ಮನೆಗಳು ಶೇಕಡಾ 30 ರಷ್ಟಿದ್ದುವು. ಒಟ್ಟಿನಲ್ಲಿ ಗ್ರಾಮಾಂತರ ಮನೆಗಳಲ್ಲಿ ಅರ್ಧಪಾಲು ನಿರುಪಯೋಗವಾದವುಗಳೆಂದು ಭಾವಿಸಲ್ಪಡುವಷ್ಟು ದುಸ್ಥಿತಿಯಲ್ಲಿದ್ದುವು.

ನಗರದ ಮನೆಗಳ ಉದಾಹರಣೆಯನ್ನು ತೆಗೆದುಕೊಂಡರೆ, ಪರಿಸ್ಥಿತಿ ಅಷ್ಟೇನು ಸುಧಾರಿಸಿಲ್ಲವಾದರೂ. ಬೆಂಗಳೂರು, ಮೈಸೂರು ಮುಂತಾದ ನಗರಗಳಲ್ಲಿ ಇಟ್ಟಿಗೆ ಗೋಡೆಗಳು ಮತ್ತು ತಾರಸಿಯ ಮನೆಗಳು ಹೆಚ್ಚು ಹೆಚ್ಚು ಬಳಕೆಗೆ ಬರುತ್ತಿರುವುದು ಕಂಡುಬರುತ್ತದೆ. ಬೆಂಗಳೂರಿನಲ್ಲಿ ಶೇಕಡ 84.3 ಮನೆಗಳನ್ನು ಬೆಂದ ಇಟ್ಟಿಗೆಯ ಗೋಡೆಗಳಿಂದ ರಚಿಸಲಾಗಿದೆ. ಶೇಕಡಾ 56 ಮನೆಗಳಿಗೆ ಹೆಂಚನ್ನು ಉಪಯೋಗಿಸಿಯೂ. ಶೇಕಡಾ 26 ರಲ್ಲಿ ತಾರಸಿಯ ಮೇಲ್ಛಾವಣಿಯನ್ನು ಹಾಕಿಯೂ ಕಟ್ಟಲಾಗಿದೆ. ಆದರೆ ಮಂಗಳೂರಿನಲ್ಲಿ ಶೇಕಡ 82.5 ಮನೆಗಳ ಗೋಡೆಗಳು ಮಣ್ಣಿನ ಗೋಡೆ ಗಳಿಂದೂ,ಶೇ.95.5 ಮನೆಗಳಿಗೆ ಹೆಂಚನ್ನುಉ ಪಯೋಗಿಸಲಾಗಿದೆಯೆಂದೂ ಜನಗಣತಿ ಲೆಕ್ಕದಿಂದ ತಿಳಿದುಬಂದಿದೆ. ಕೋಲಾರ ಚಿನ್ನದಗಣಿ ಪ್ರದೇಶದಲ್ಲಿ ಕಾರ್ಮಿಕರ ನಿವಾಸಗಳೆಲ್ಲವೂ ತಾತ್ಕಾಲಿಕ ರೀತಿಯಲ್ಲಿದ್ದು ಹೆಚ್ಚುಮನೆಗಳು ಮಣ್ಣಿನ ಗೋಡೆಗಳಿಂದಲೂ, ಹೆಂಚು ಮತ್ತು ತಗಡಿನ ಮೇಲ್ಛಾವಣಿ ಗಳಿಂದಲೂ ಕೂಡಿದ್ದಾಗಿವೆ.

ನಮ್ಮ ರಾಜ್ಯದಲ್ಲಿ ಪ್ರತಿ ಸಂಸಾರದ ಸದಸ್ಯರ ಸರಾಸರಿ ಸಂಖ್ಯೆ ಸುಮಾರು 5.42 ಆಗಿದೆ. 1961ರಲ್ಲಿ ಶೇಕಡಾ 40ರಷ್ಟು ಕುಟುಂಬಗಳ ವರು ಒಂದು ಕೊಠಡಿಯ ಮನೆಗಳಲ್ಲಿ ವಾಸಿಸುತ್ತಿದ್ದರು. ಒಟ್ಟನಲ್ಲಿ ಪ್ರತಿ ಕೊಠಡಿಯಲ್ಲೂ ವಾಸಿಸುತ್ತಿದ್ದ ಜನರು ಸರಾಸರಿ 2.82. ನಗರಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುವವರ ಸಂಖ್ಯೆ ತೀವ್ರವಾಗಿ ಹೆಚ್ಚುತ್ತಿದೆ.ಉದಾ ಹರಣೆಗೆ 1961 ರಲ್ಲಿ ಬೆಂಗಳೂರು ನಗರದ ಎಲ್ಲೆಯಲ್ಲಿ 29,315 ಬಾಡಿಗೆ ಮನೆಗಳೂ 10,130 ಸ್ವಂತ ವಾಸದ ಮನೆಗಳೂ ಇದ್ದುವು. ಹಾಗೆಯೇ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ 4,080 ಕುಟುಂಬಗಳು ಬಾಡಿಗೆ ಮನೆಯಲ್ಲೂ, 1,401 ಕುಟುಂಬಗಳು ಸ್ವಂತ ಮನೆಯಲ್ಲೂ ವಾಸಿಸುತ್ತಿದ್ದುವು. ಅಂದರೆ ವಲಸೆ ಬಂದ ಜನರು ಬಹುತೇಕ ಬಾಡಿಗೆ ಮನೆಗಳಲ್ಲೇ ಇರಬೇಕಾಗುತ್ತದೆ.

ಮನೆಗಳ ಅಭಾವ ಜನರ ಒತ್ತಡಕ್ಕೆ ಕಾರಣವಾಗುತ್ತದೆ. ಕೆಲವು ವೇಳೆ ಇರುವ ಸ್ವಲ್ಪ ಜಾಗದಲ್ಲೇ ಹೆಚ್ಚುಮಂದಿ ವಾಸಿಸಬೇಕಾಗುತ್ತದೆ. ಇಂಗ್ಲೆಂಡ್ ದೇಶದಲ್ಲಿ ಒಂದು ಕೊಠಡಿಯಲ್ಲಿ ಸರಾಸರಿ ಒಂದೂವರೆ ಜನ

ಕ್ಕಿಂತ ಹೆಚ್ಚು ವಾಸಿಸುತ್ತಿದ್ದರೆ, ಅಂತಹ ಮನೆಯನ್ನು ಜನದಟ್ಟಣೆಯ ಮನೆ (Overcrowded) ಎಂದು ಪರಿಗಣಿಸುತ್ತಾರೆ. 1966 ರಲ್ಲಿ ಶೇ. 1.2 ರಷ್ಟು ಮನೆಗಳಲ್ಲಿ ಮಾತ್ರ ಅಂತಹ ಜನದಟ್ಟಣೆಯಿತ್ತಂತೆ. ಅದರ ಐದು ವರ್ಷದ ಹಿಂದೆ ಶೇ. 2.8 ಮನೆಗಳಲ್ಲಿ ಕಿಷ್ಕಿಂದ ಪರಿಸ್ಥಿತಿಯಿತ್ತೆಂದು ಲೆಕ್ಕಹಾಕಿದ್ದಾರೆ. ಆದರೆ ಭಾರತದಲ್ಲಿ ಈ ಪರಿಸ್ಥಿತಿ ಬಹಳ ಹದ ಗೆಟ್ಟಿದೆ. ಅದರಲ್ಲೂ ಭಾರೀ ನಗರಗಳ ಸ್ಥಿತಿ ಚಿಂತಾಜನಕವಾಗಿದೆ. ಹಿಂದೆ ತಿಳಿಸಿದಂತೆ, ಅನೇಕ ಮನೆಗಳ ಪ್ರತಿ ಕೊಠಡಿಯಲ್ಲೂ ವಾಸಮಾಡುವವರ ಸಂಖ್ಯೆ 5 ಕ್ಕೂ ಹೆಚ್ಚಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಬೆಂಗಳೂರು ನಗರದ ಉದಾಹರಣೆಯನ್ನೇ ತೆಗೆದುಕೊಂಡರೆ ಶೇ. 55 ಮನೆ ಗಳಲ್ಲಿ ಪ್ರತಿ ಕೊಠಡಿಯನ್ನೂ ಸರಾಸರಿ 5 ಜನರು ಉಪಯೋಗಿಸುತ್ತಿ ದ್ದಾರೆ.

ರಾಜ್ಯದಲ್ಲಿ ಗೃಹನಿರ್ಮಾಣ ಚಟುವಟಿಕೆಗಳು

ಮೈಸೂರು ರಾಜ್ಯದಲ್ಲಿ ವಾಸದ ಮನೆಗಳಲ್ಲಿ ಹೆಚ್ಚುಭಾಗವನ್ನು ಖಾಸಗಿಯವರೇ ಕಟ್ಟಿಕೊಳ್ಳುತ್ತಿದ್ದಾರೆ. ಆದರೆ ಇತ್ತೀಚಿಗೆ ಗೃಹನಿರ್ಮಾ ಣಕ್ಕೆ ಹೆಚ್ಚು ಪುಷ್ಟಿ ಕೊಡಲು ಕೆಲವು ಸಾರ್ವಜನಿಕ ಸಂಸ್ಥೆಗಳನ್ನು ಅಸ್ತಿ ತ್ವಕ್ಕೆ ತರಲಾಗಿದೆ. ರಾಷ್ಟ್ರೀಯ ಯೋಜನಾ ಮಂಡಲಿಯು ಈ ದಿಸೆಯಲ್ಲಿ ಹೆಚ್ಚು ಆಸಕ್ತಿ ವಹಿಸಿ ವಾಸದಮನೆಗಳನ್ನು ಕಟ್ಟಲೂ, ವ್ಯಕ್ತಿಗಳು ಕಟ್ಟುವ ಮನೆಗಳಿಗೆ ಸಾಲವನ್ನೊದಗಿಸುವ ಏರ್ಪಾಡು ಮಾಡಲೂ ಮೊದಲನೆ ಪಂಚ ವಾರ್ಷಿಕ ಯೋಜನೆ ಪ್ರಾರಂಭವಾದಾಗಿನಿಂದಲೇ ಸೂಕ್ತಕ್ರಮ ತೆಗೆದು ಕೊಂಡಿದೆ. ಇದಕ್ಕೆ ಮೊದಲು ಈ ಸಂಬಂಧವಾಗಿ ಅಷ್ಟೇನೂ ಸಾಧನೆ ಕೈಗೂಡಿರಲಿಲ್ಲವೆಂದೇ ಹೇಳಬಹುದು. ದೇಶದಾದ್ಯಂತ ವಾಸದ ಮನೆಗಳ ಅಭಾವವನ್ನು ಪರಿಶೀಲಿಸಿ, ಒಂದು ರಾಷ್ಟ್ರೀಯ ಯೋಜನೆಯನ್ನು ರೂಪಿಸ ಲಾಗಿದೆ. ಹೆಚ್ಚು ಅನುಕೂಲವುಳ್ಳವರು ತಮಗೆ ಬೇಕಾದ ಮನೆಗಳನ್ನು ಕಟ್ಟಿ ಕೊಳ್ಳಲು, ಬೇಕಾಗಬಹುದಾದ ನಿವೇಶನಗಳನ್ನು ಪಡೆಯಲು, ಅಲ್ಲದೆ ಮನೆ ಗಳಿಗೆ ತಗಲುವ ಖರ್ಚನ್ನು ಪೂರೈಸಲು ಶಕ್ತರಾಗಿರುವುದರಿಂದ, ಮಧ್ಯಮ ವರ್ಗದವರ ಮತ್ತು ಕಡಿಮೆ ವರಮಾನದವರ ಸಮಸ್ಯೆಗಳನ್ನು ನಿವಾರಿಸಲು

ಯೋಜನೆಯಲ್ಲಿ ಅವಕಾಶಮಾಡಲಾಯಿತು. ಇದಲ್ಲದೆ, ಕಾರ್ಮಿಕರ ವಸತಿ. ಭಾರೀ ಎಸ್ಟೇಟ್‌ಗಳ ಕಾರ್ಮಿಕರ ವಸತಿ, ಗ್ರಾಮೀಣ ವಸತಿ, ಹರಿಜನ ಗಿರಿ ಜನರ ವಸತಿ ಹಾಗೂ ಬಾಡಿಗೆ ಮನೆಗಳನ್ನು ಕಟ್ಟುವಕಾರ್ಯ–ಇವುಗಳಿಗೂ ಯೋಜನೆಯಲ್ಲಿ ಅವಕಾಶ ಮಾಡಲಾಗಿದೆ. ಈ ಕಾರ್ಯಕ್ರಮಗಳನ್ನೆಲ್ಲಾ ಕಾರ್ಯರೂಪಕ್ಕೆ ತರಲು ಬೇಕಾಗುವ ಸಂಸ್ಥೆಗಳನ್ನು ಪ್ರತಿ ರಾಜ್ಯದಲ್ಲೂ ಸ್ಥಾಪಿಸುವ ಕೆಲಸ ಪ್ರಾರಂಭವಾಯಿತು. ಇದರಂತೆ ಈಗ ಮೈಸೂರುರಾಜ್ಯ ದಲ್ಲಿ ಈ ಕೆಳಗಿನ ಸಂಸ್ಥೆಗಳು ಗೃಹನಿರ್ಮಾಣ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿವೆ.

1. ಮೈಸೂರು ಗೃಹನಿರ್ಮಾಣ ಮಂಡಲಿ
2. ಗೃಹನಿರ್ಮಾಣ ಸಹಕಾರೀ ಸಂಸ್ಥೆ
3. ಹರಿಜನ ಗಿರಿಜನ ಗೃಹನಿರ್ಮಾಣ ಮಂಡಲಿ
4. ಮೈಸೂರು ಲೋಕೋಪಯೋಗಿ ಇಲಾಖೆ

ಇವುಗಳ ಪೈಕಿ ಮೈಸೂರು ಗೃಹನಿರ್ಮಾಣ ಮಂಡಲಿಯ ಪಾತ್ರ ಪ್ರಾಮುಖ್ಯವಾದುದರಿಂದ, ಅದರ ಚಟುವಟಿಕೆಗಳು ಹಾಗೂ ಕಾರ್ಯ ಕ್ರಮದ ವಿವರಗಳನ್ನು ಮಾತ್ರವೇ ಪರಿಶೀಲಿಸೋಣ. ಈ ಸಂಸ್ಥೆ 1970 ರ ವರೆಗೂ ಕೇವಲ ನಗರಗಳಲ್ಲಷ್ಟೇ ಗೃಹನಿರ್ಮಾಣ ಕಾರ್ಯವನ್ನು ಕೈಗೊಳ್ಳು ತ್ತಿತ್ತು. 1970 ರ ನವಂಬರ್ 1 ನೇ ತಾರೀಖಿನಿಂದ ಸರ್ಕಾರವು ಗ್ರಾಮೀಣ ಗೃಹನಿರ್ಮಾಣ ಕೆಲಸವನ್ನು ಅಭಿವೃದ್ಧಿ ಇಲಾಖೆಯಿಂದ ತೆಗೆದು ಈ ಸಂಸ್ಥೆಗೇ ವಹಿಸಿದೆ. ಆದರೆ ಆ ಕಾರ್ಯಕ್ರಮ ಎಂದಿನಂತೆ ಮಂದಗತಿ ಯಲ್ಲೇ ಸಾಗುತ್ತಿದೆ.

ಗೃಹನಿರ್ಮಾಣ ಚಟುವಟಿಕೆಗಳು

1956 ರಲ್ಲಿ ಸ್ಥಾಪಿತವಾದ ಮೈಸೂರು ಗೃಹನಿರ್ಮಾಣ ಮಂಡಲಿ 1969 ರ ವೇಳೆಗೆ ರಾಜ್ಯದಲ್ಲಿ ಸುಮಾರು 22,370 ಮನೆಗಳನ್ನು ಕಟ್ಟಿ ಮುಗಿಸಿತ್ತು ಮತ್ತು 10,699 ಮನೆಗಳ ಕೆಲಸ ಪ್ರಗತಿಯ ಹಂತದಲ್ಲಿತ್ತು. ಈ ಮಂಡಲಿಯು ಕೆಳಗಿನ ಗೃಹನಿರ್ಮಾಣ ಯೋಜನೆಗಳನ್ನು ಕೈಗೊಳ್ಳು ತ್ತಿದೆ.

1. ಸಹಾಯಕ ಬಾಡಿಗೆ ಮನೆಗಳ ನಿರ್ಮಾಣ
2. ಪ್ಲಾಂಟೇಷನ್ ಕಾರ್ಮಿಕರ ಗೃಹನಿರ್ಮಾಣ
3. ಕಡಿಮೆ ವರಮಾನದವರಿಗೆ ಮನೆ ಕಟ್ಟಿಕೊಡುವುದು
4. ಮಧ್ಯಮ ವರ್ಗದವರಿಗಾಗಿ ಮನೆ ಕಟ್ಟುವುದು
5. ವಿಶೇಷ ಗೃಹಗಳ ನಿರ್ಮಾಣ
6. ಮನೆ ಕಟ್ಟಿಕೊಳ್ಳುವವರಿಗೆ ಸಾಲ ನೀಡುವುದು
7. ನಿವೇಶನವುಳ್ಳವರು ಬೇಕೆಂದರೆ ಮನೆಕಟ್ಟಿಕೊಡುವುದು
8. ಮನೆಯ ನಿವೇಶನಗಳಿಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿಪಡಿಸುವುದು

ಈ ಮಂಡಲಿಯವರು ಬೆಂಗಳೂರಿನಲ್ಲಿ ಕಟ್ಟಿರುವ ಮನೆಗಳ ವಿವರ:

1. ಸಹಾಯಕ ಬಾಡಿಗೆ ಮನೆ (ಕಾರ್ಮಿಕರಿಗಾಗಿ)		
	(ಅ) ರಾಜ್ಯಸರ್ಕಾರದಬಾಬ್ತು	5,146
	(ಆ) ಮಾಲೀಕರಬಾಬ್ತು	3,224
2. ಸಹಾಯಕ ಬಾಡಿಗೆ ಮನೆಗಳು (ಸಾರ್ವಜನಿಕರಿಗಾಗಿ)		2,460
3. ಕಡಿಮೆ ವರಮಾನದವರಿಗಾಗಿ ಮನೆಗಳು		2,365
4. ಮಧ್ಯಮ ವರ್ಗದವರಿಗಾಗಿ		626

ಆದರೆ ಬೆಂಗಳೂರು ನಗರದಲ್ಲಿರುವ ಮನೆಗಳ ಅಭಾವಕ್ಕೆ ಹೋಲಿಸಿದರೆ ಈ ಸಂಸ್ಥೆ ಇದುವರೆಗೂ ಕಟ್ಟಿರುವ ಸುಮಾರು 15 ಸಾವಿರ ಮನೆಗಳು ಬಹಳ ಕಡಿಮೆಯೇ ಸರಿ. ಈ ಕೆಳಗಿನ ಅಂಕಿಗಳು ಈ ಮಹಾನಗರದಲ್ಲಿ ಕಟ್ಟಬೇಕಾಗಿರುವ ಮನೆಗಳ ಸಮಸ್ಯೆಯ ಬೃಹದಾಕಾರವನ್ನು ಎತ್ತಿ ತೋರಿಸುತ್ತವೆ.

1961 ರಲ್ಲಿ ಬೆಂಗಳೂರಿನಲ್ಲಿ 1.42,300 ಮನೆಗಳಿದ್ದುವು. ಇರುವ ಮನೆಗಳ ಜೊತೆಗೆ ಕಟ್ಟಬೇಕಾಗಿದ್ದ ಮತ್ತು ಕಟ್ಟಬೇಕಾಗುವ ಮನೆಗಳ ಸಂಖ್ಯೆ:

1966	97.575
1971	47,000

1976	52,400
1981	62,800

ಅಂದರೆ, ಪ್ರತಿ ಐದು ವರ್ಷದಲ್ಲಿ ಸುಮಾರು 50,000 ಮನೆಗಳನ್ನಾದರೂ ನಾವು ಈ ನಗರದಲ್ಲಿ ಕಟ್ಟಬೇಕಾಗುತ್ತದೆ. ಹಾಗೆಯೇ ಇತರ ನಗರಗಳಲ್ಲೂ ಕೂಡ ಮನೆಗಳ ಕೊರತೆ ಏರುತ್ತಾ ಹೋಗುತ್ತದೆ.

ಇದರಿಂದಾಗಿ, ಗೃಹನಿರ್ಮಾಣ ಮಂಡಲಿ ಒಂದು ಬೃಹತ್ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿದೆ. ಹೆಚ್ಚು ಜನರಿಗೆ ಬಾಡಿಗೆ ಮನೆಗಳನ್ನು ಸುಲಭದರದಲ್ಲಿ ಒದಗಿಸಲು ಒಂದು ಕಾರ್ಯಕ್ರಮವಿದೆ. ಇದರಂತೆ ಕಟ್ಟುವ ಮನೆಗಳಿಗೆ ಶೇ. 50 ರಷ್ಟು ಗ್ರಾಂಟ್ ರೂಪದಲ್ಲೂ ಶೇ.50 ರಷ್ಟು ಸಾಲದ ರೂಪದಲ್ಲೂ ಭಾರತ ಸರಕಾರ ಹಣವನ್ನೊದಗಿಸಿ, ಕಡಿಮೆ ಬಾಡಿಗೆಯಲ್ಲಿ ಸಾರ್ವಜನಿಕರಿಗೂ,ಕೈಗಾರಿಕಾ ಕಾರ್ಮಿಕರಿಗೂ ಮನೆಗಳು ದೊರೆಯುವಂತೆ ಮಾಡುವುದೇ ಈ ಕಾರ್ಯಕ್ರಮದ ಉದ್ದೇಶ. ಎಲ್ಲಾ ನಗರಗಳಲ್ಲೂ ಇಂತಹ ಕಾರ್ಯಕ್ರಮದ ಆವಶ್ಯಕತೆ ವಿಶೇಷವಾಗಿದೆ. ಇದರಿಂದ ನಗರಗಳಲ್ಲಿ ಖಾಸಗಿ ಮನೆಗಳ ಬಾಡಿಗೆಯಮೇಲೆ, ಅದರಲ್ಲೂ ಚಿಕ್ಕಮನೆಗಳ ಬಾಡಿಗೆಯ ಮೇಲೆ, ಒಂದು ವಿಧವಾದ ಹತೋಟಿಯನ್ನು ಇಡಲು ಅನುಕೂಲವಾಗುತ್ತದೆ. ಆದರೆ ಒಮ್ಮೆ ಬಾಡಿಗೆಗೆ ಸೇರಿಕೊಂಡವರು ಆ ಮನೆಗಳನ್ನು ತಮಗೇ ಮಾರಬೇಕೆಂದು ಹಠಹಿಡಿದು, ಬಾಡಿಗೆಯನ್ನು ಪಾವತಿ ಮಾಡದೆ ಗೃಹ ನಿರ್ಮಾಣಕಾರ್ಯಕ್ಕೆ ಅಡಚಣೆಯೊಡ್ಡುತ್ತಿರುವ ನಿದರ್ಶನಗಳು ಹಲವಾರಿವೆ. ಇಂತಹ ಪ್ರವೃತ್ತಿಯನ್ನು ಬೆಂಬಲಿಸದೆ, ದೇಶದ ಗೃಹನಿರ್ಮಾಣ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಬಿಗಿಯಾದ ನೀತಿ ನಿಯಮಗಳನ್ನು ಅನುಸರಿಸಲೇಬೇಕಾಗುತ್ತದೆ. ಇಲ್ಲವಾದಲ್ಲಿ ಮಹಾನಗರಗಳಲ್ಲಿ ಬಾಡಿಗೆಯನ್ನು ಕೊಡಲಾಗದೆ ಬಹಳಷ್ಟು ಜನರು ಪುನಃ ಕೊಳಚೆ ಪ್ರದೇಶಗಳಲ್ಲಿ ವಾಸಿಸಲು ಉತ್ತೇಜನ ಕೊಟ್ಟಂತಾಗುತ್ತದೆ.

ಕೆಳಕಂಡ ಅಂಕಿಗಳು ಸಹಾಯಕ ಬಾಡಿಗೆ ಮನೆಗಳ ಮೇಲೆ ಭಾರತ ಸರ್ಕಾರ ವಿಧಿಸಿರುವ ಮಿತಿಗಳನ್ನು ಸೂಚಿಸುತ್ತದೆ.

ಮುಂಬಯಿ ಕಲ್ಕತ್ತ ನಗರಗಳನ್ನುಳಿದು ಇತರ ನಗರಗಳಲ್ಲಿ :

	ವೆಚ್ಚಮಾಡಬಹುದಾದ ಅತ್ಯಧಿಕ ಮೊಬಲಗು	ಮಾಹೆಯಾನ ಬಾಡಿಗೆ.
	ರೂ	ರೂ
1. ನಿವೇಶನವನ್ನು ಅಭಿವೃದ್ಧಿ ಪಡಿಸಿ ಕೊಟ್ಟರೆ	1,650	5.50
2. ಕಂಬ ಮೇಲ್ಛಾವಣಿಯನ್ನು ಮಾತ್ರ ಕಟ್ಟಿದರೆ	2,550	11.50
3. ಎರಡು ಸಣ್ಣ ಕೊಠಡಿಯ ಮನೆ	4,200	17.50
4. ಎರಡು ದೊಡ್ಡ ಕೊಠಡಿಗಳ ಮಾಮೂಲು ಮನೆ	4,900	20.00
5. ಎರಡು ದೊಡ್ಡ ಕೊಠಡಿಗಳ ಮನೆ–ಮಹಡಿಮನೆಗಳಲ್ಲಿ	7,000	26.50

ಇದೇ ರೀತಿಯ ಕಟ್ಟಡಗಳನ್ನು ಕಲ್ಕತ್ತ ಮತ್ತು ಮುಂಬಯಿ ನಗರಗಳಲ್ಲಿ ಕಟ್ಟಿದರೆ ಕಟ್ಟಡಕ್ಕೆ ತಗಲುವ ವೆಚ್ಚ ಮತ್ತು ವಸೂಲು ಮಾಡಬೇಕಾದ ಬಾಡಿಗೆಯನ್ನು ಒಂದುವರೆಯಷ್ಟಕ್ಕೆ ಹೆಚ್ಚಿಸಲು ಅವಕಾಶ ಮಾಡಿಕೊಡಲಾಗಿದೆ. ಇಂತಹ ನಿಬಂಧನೆಗಳ ಮೂಲಕ ಗೃಹನಿರ್ಮಾಣಮಂಡಲಿಗಳು ಹೆಚ್ಚು ವೆಚ್ಚದ ಮನೆಗಳನ್ನು ಕಟ್ಟಿ ಹೆಚ್ಚುಬಾಡಿಗೆ ವಿಧಿಸಿ-ಬಡವರ ಕೈಗೆ ಅವು ನಿಲುಕದಂತೆ ಮಾಡುವುದನ್ನು ತಡೆಯಬಹುದು. ಕೆಲವೊಮ್ಮೆ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ನಕ್ಷೆಗಳಲ್ಲಿ ಬದಲಾವಣೆ ಮಾಡಲು, ಅಧಿಕ ಮಿತಿಗಿಂತ ಸ್ವಲ್ಪವೇ ಹೆಚ್ಚಾಗಿ ಹಣ ಖರ್ಚುಮಾಡಲೂ ಅವಕಾಶವಿರುವಂತೆ ಕೇಂದ್ರ ಸರ್ಕಾರವು ಕಾನೂನನ್ನು ವಿಮರ್ಶಿಸಿ ಆಗಿಂದಾಗ್ಗೆ ವಿಮರ್ಶಿತ ಆಜ್ಞೆಗಳನ್ನು ಹೊರಡಿಸುತ್ತಿರುತ್ತದೆ. ಒಟ್ಟಿನಲ್ಲಿ ನಗರಗಳಲ್ಲಿ ಮನೆಗಳ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನ ನಡೆದಿದೆ. ಮುಂದೆ ಗೃಹನಿರ್ಮಾಣ ಮಂಡಲಿಗಳಿಗೆ ಹೆಚ್ಚು ಹಣ ಒದುಗುತ್ತಾ ಬಂದರೆ ಸಮಸ್ಯೆಯನ್ನು ಪರಿಹರಿಸುವಲ್ಲಿ ಗಮನಾರ್ಹ ಪ್ರಗತಿ ಸಾಧಿಸಬಹುದು.


ಮೈಸೂರು ಗೃಹನಿರ್ಮಾಣ ಮಂಡಲಿಯು ಈಗ ಕಟ್ಟುತ್ತಿರುವ

ಕೆಲವು ಮನೆಗಳ ಚಿತ್ರಗಳನ್ನು ಇಲ್ಲಿ ಕೊಡಲಾಗಿದೆ (ಚಿತ್ರ 11, 12). ಅವುಗಳನ್ನು ಆಗಾಗ್ಗೆ ಪರಿಷ್ಕರಿಸಿ ಉತ್ತಮ ನಕ್ಷೆಗಳನ್ನು ತಯಾರಿಸಲಾಗುತ್ತದೆ. ಮಹಾನಗರಗಳಲ್ಲಿ ಒಂದಕ್ಕಿಂತ ಹೆಚ್ಚು ಮಹಡಿಯುಳ್ಳ ಮನೆಗಳನ್ನು ಗೃಹನಿರ್ಮಾಣ ಮಂಡಲಿಗಳು ಕಟ್ಟಬೇಕೆಯುವರಿಗೆ ಮಾರ್ಗದರ್ಶನ ನೀಡಬೇಕಾದಕಾಲ ಸನ್ನಿಹಿತವಾಗಿದೆ. ಇದರಿಂದ ಭೂ ಬಳಕೆಯನ್ನು ಲಾಭದಾಯಕವಾಗಿ ನಡೆಸಿಕೊಂಡು ಹೋಗುವುದು ಹೇಗೆಂದು ಗೊತ್ತಾಗುವುದು.

ಹಳ್ಳಿಗಳ ಸಮಸ್ಯೆ


ಸಾಧಾರಣವಾಗಿ 5,000 ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳನ್ನು ಗ್ರಾಮಗಳೆಂದೂ, ಅದಕ್ಕೆ ಮೇಲ್ಪಟ್ಟ ಜನಸಂಖ್ಯೆಯ ಪ್ರದೇಶಗಳನ್ನು ನಗರಗಳೆಂದೂ ವಿಂಗಡಿಸುವ ರೂಢಿ ಇದೆ. ಆದರೆ ಕೆಲವು ಕೈಗಾರಿಕಾ ಉಪನಗರಗಳು ಮತ್ತು ಭಾರೀಯೋಜನೆಗೆ ಸಂಬಂಧಪಟ್ಟ ಊರುಗಳಲ್ಲಿ ಜನಸಂಖ್ಯೆ 5,000 ದ ಒಳಗಿದ್ದರೂ ಕೂಡ, ಅಲ್ಲಿ ಒದಗಿಸಿರುವ ನಾಗರಿಕ ಸೌಕರ್ಯಗಳ ದರ್ಜೆಯನ್ನು ಪರಿಶೀಲಿಸಿದರೆ ಅವು ಗ್ರಾಮಗಳಿಗಿಂತ ನಗರಗಳ ವಿಭಾಗದಲ್ಲೇ ಬರಬಹುದು. ಹೀಗಾಗಿ ಗ್ರಾಮಗಳಿಗೂ ನಗರಗಳಿಗೂ ಇರುವ ವ್ಯತ್ಯಾಸವನ್ನು ಅಳೆಯುವ ಮತ್ತೊಂದು ಸಾಧನ ಅಲ್ಲಿನ ಜನರು ಅವಲಂಬಿಸಿರುವ ಕಸಬು. ನಮ್ಮ ಭಾರತದೇಶದಲ್ಲಿ ಗ್ರಾಮಾಂತರ ಜನರು ಬಹುಪಾಲು ವ್ಯವಸಾಯ ಮತ್ತು ಅದಕ್ಕೆ ಸಂಬಂಧಿಸಿದ ಕಸಬನ್ನು ಅವಲಂಬಿಸಿದ್ದರೆ, ನಗರವಾಸಿಗಳು ಇತರ ಕಸಬುಗಳನ್ನು– ಅಂದರೆ ವ್ಯಾಪಾರ, ಉದ್ಯೋಗ, ಕೈಗಾರಿಕೆ ಮುಂತಾದವುಗಳನ್ನು ಅವಲಂಬಿಸಿರುತ್ತಾರೆ. ಆದ್ದರಿಂದ ಅವರವರ ಆವಶ್ಯಕತೆಗಳು ಸ್ವಲ್ಪ ಭಿನ್ನವಾಗಿ ತೋರುತ್ತವೆ.

ಕೆಲವು ವರ್ಷಗಳ ಹಿಂದೆ ಈ ವ್ಯತ್ಯಾಸ ಅಷ್ಟಾಗಿರಲಿಲ್ಲ. ಐಶ್ವರ್ಯವಂತರ ಮನೆಗಳು ಬಡಬಗ್ಗರ ಮನೆಗಳು ಹೀಗೆ–ಪಟ್ಟಣದಲ್ಲಿರಲಿ, ಹಳ್ಳಿಯಲ್ಲಿರಲಿ ಹೆಚ್ಚು ಕಡಿಮೆ ಕೆಲವು ಮೂಲ ವ್ಯತ್ಯಾಸಗಳಿಂದ ಮನೆಗಳು ನಿರ್ಮಿತವಾಗುತ್ತಿದ್ದುವು. ಉದಾಹರಣೆಗೆ, ಬೆಂಗಳೂರು ನಗರದ ಚಿಕ್ಕಪೇಟೆ, ದೊಡ್ಡಪೇಟೆ (ಅವಿನ್ಯೂರಸ್ತೆ) ಗಳಲ್ಲಿ ಕೆಲವು ಹಳೇ ಮನೆಗಳನ್ನು ನೋಡಿ ತಿಳಿಯಬಹುದು.




ನಕ್ಷೆ





ಮುಂಭಾಗದ ನೋಟ

ಚಿತ್ರ ೧೧. ಮೈಸೂರು ಗೃಹ ನಿರ್ಮಾಣ ಮಂಡಲಿಯವರು ನಗರಗಳಲ್ಲಿ ಕಟ್ಟುತ್ತಿರುವ ಕಡಿಮೆ ವರಮಾನದವರ ಮನೆ.



ಚಿತ್ರ ೧೨. ಗೃಹ ನಿರ್ಮಾಣ ಮಂಡಲಿಯವರು ಹೆಚ್ಚು ಸಂಸಾರಗಳಿಗಾಗಿ ನಿರ್ಮಿಸಲಿರುವ ನಾಲ್ಕು ಮಹಡಿಗಳ ಭವನ.

ಹಾಗೆಯೇ ಹಳ್ಳಿಗಳಲ್ಲಿದ್ದ ಹಣವಂತರ ಹಳೇ ಮನೆಗಳಿಗೆ ಇವನ್ನು ಹೋಲಿಸಿದರೆ ವ್ಯತ್ಯಾಸ ಅಷ್ಟಾಗಿ ಇರುತ್ತಿರಲಿಲ್ಲ. ಆದರೆ ಮುಂದೆ ನಾಗರೀಕತೆ ಬೆಳದಂತೆ, ಅಲ್ಲದೆ ನಗರಗಳಲ್ಲಿ ಕಟ್ಟಡ ನಿರ್ಮಾಣ ಕಲೆ ಅಭಿವೃದ್ಧಿಯಾದಂತೆ ಅವರವರ ಕಸಬಿಗೆ ಅನುಕೂಲವಾಗುವ ಹಾಗೆ ಮನೆಗಳನ್ನು ಕಟ್ಟುವ ಅಭ್ಯಾಸ ಪ್ರಾರಂಭವಾಯಿತು. ವ್ಯವಸಾಯವನ್ನು ಅವಲಂಬಿಸದೆ ಇರುವ ನಗರವಾಸಿಗಳು ತಮ್ಮ ಮನೆಗಳನ್ನು ತಮ್ಮ ವಾಸಕ್ಕೆ ಅನುಕೂಲವಾಗಲು ಎಷ್ಟು ಬೇಕೋ ಅಷ್ಟಕ್ಕೆ ಮಿತಿಗೊಳಿಸಿದರು. ಅಲ್ಲದೆ ಬಾಡಿಗೆ ಕೊಡಲು, ಅಂಗಡಿ ಮುಂಗಟ್ಟು ಸ್ಥಾಪಿಸಲು ಅನುಕೂಲವಾಗುವಂತೆ ಮನೆಯ ವಿನ್ಯಾಸವನ್ನು ಅಂದರೆ ಪ್ಲಾನನ್ನು ಬದಲಾಯಿಸಿಕೊಂಡರು. ಇದಕ್ಕೆ ಹೊಸ ಹೊಸ ಸಾಧನ ಸಂಪತ್ತು, ಅಭಿರುಚಿಯ ನವೀನತೆ—ಇವೂ ಕಾರಣವೆನ್ನಬಹುದು.


ಆದರೆ ಗ್ರಾಮಾಂತರ ಪ್ರದೇಶದಲ್ಲಿ ಶೇಕಡ 75 ಜನರು ಅನಕ್ಷರಸ್ಥರಾಗಿದ್ದರಿಂದ ಈ ಕಲೆ ಮುಂದುವರೆಯಲು ಸಾಧ್ಯವಾಗಲಿಲ್ಲ. ಅಲ್ಲದೆ ಆರ್ಥಿಕ ಮುಗ್ಗಟ್ಟು ಅಂದರೆ ಹಣದ ಅಭಾವವು ಸಹ, ಇದಕ್ಕೆ ಕಾರಣ. ಇವೆಲ್ಲಕ್ಕಿಂತಲೂ ಮುಖ್ಯವಾಗಿ ವ್ಯವಸಾಯವನ್ನು ನಂಬಿರುವ ನಮ್ಮ ಜನರಿಗೆ ಅವರ ದವಸಧಾನ್ಯಗಳನ್ನು ತುಂಬಲು, ಉಪಕರಣವನ್ನು ಇಡಲು, ದನಕರುಗಳನ್ನು ಕಟ್ಟಲು ವಿಶಾಲವಾದ ಸ್ಥಳ ವಸತಿಬೇಕು. ಅದಕ್ಕಾಗಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಸ್ಥಳವಿರುವ ಮನೆ ಕಟ್ಟುವ ವಿಧಾನವನ್ನು ನಮ್ಮ ಹಳ್ಳಿಯ ಜನರು ಕಂಡುಹಿಡಿದುಕೊಂಡಿದ್ದಾರೆ. ಇವರು ಆಯಾ ಸ್ಥಳದ ಸಾಮಾನುಗಳನ್ನೇ ಉಪಯೋಗಿಸಿ, ತಮ್ಮ ಸ್ವಂತ ದುಡಿಮೆಯಿಂದ ಬಹಳ ಕಡಿಮೆ ಖರ್ಚಿನಲ್ಲಿ ಗೃಹನಿರ್ಮಾಣ ಮಾಡುವ ಕಲೆಯಲ್ಲಿ ನಿಪುಣರೆನಿಸಿಕೊಂಡಿದ್ದಾರೆ. ಆಧುನಿಕ ದೃಷ್ಟಿಯಿಂದ ನಗರದ ಮನೆಗಳಿಗೆ ಹೋಲಿಸಿ ಇವುಗಳನ್ನು ನೋಡಬಾರದು. ತನ್ನ ಸ್ವಂತ ಶಕ್ತಿಯಿಂದ ತನಗೆ ಬೇಕಾಗುವ ಮನೆಯನ್ನು ನಿರ್ಮಿಸುವ ಕಲೆ ಹಳ್ಳಿಯ ಪ್ರತಿಯೊಬ್ಬನಿಗೂ ಕರತಲಾಮಲಕವಾಗಿದೆ ಎನ್ನಬಹುದು. ಇದಕ್ಕೆ ಒಂದು ಉದಾಹರಣೆ ನಮ್ಮ ತೊಟ್ಟಿ ಮನೆಗಳು; 4 ಕಂಬ, 8 ಕಂಬ, 12 ಕಂಬ, 15 ಕಂಬದ ತೊಟ್ಟಿ ಮನೆಗಳು; ಅವುಗಳ ಎತ್ತರವಾದ ಜಗಲಿಗಳು, ವಿಶಾಲವಾದ ಹಜಾರ, ಅಂಗಳ,

ಅಲ್ಲದೆ ಅಂಕರಣದ ರೀತಿಯಲ್ಲಿ ಕಟ್ಟುವ ಕಲೆ (Modular Construction) ಇವು ಎಲ್ಲರನ್ನೂ ಅಚ್ಚರಿಗೊಳಿಸಿವೆ (ಚಿತ್ರ. ೧೩).

ಸ್ವಸಹಾಯ ಮಾದರಿ

ಪ್ರಪಂಚದ ಅನೇಕ ಅರ್ಥಶಾಸ್ತ್ರಜ್ಞರು ಮತ್ತು ಬುದ್ಧಿವಂತರು ಆಗಾಗ್ಗೆ ಹೇಳುತ್ತಿರುವುದೇನೆಂದರೆ, ಬಡಬಗ್ಗರು ತಮಗಿರುವ ಅಲ್ಪ ವರಮಾನದಿಂದ ಸ್ವಂತ ಮನೆ ಕಟ್ಟಬೇಕಾದರೆ ಸ್ಥಳದ ಸಾಮಾನುಗಳನ್ನೇ ಹೆಚ್ಚಾಗಿ ಉಪಯೋಗಿಸಬೇಕು; ಇದರಿಂದ ಖರ್ಚು ಕಡಿಮೆಯಾಗಿ ತಮಗೆ ಬೇಕಾದ ಮನೆಯನ್ನು ಸ್ವಸಹಾಯದಿಂದ (self-help) ಕಟ್ಟಲು ಅನುಕೂಲವಾಗುತ್ತದೆ. ಹೇಗೆಂದರೆ ನಮ್ಮ ಹಳ್ಳಿಯಲ್ಲಿ ದೊರೆಯುವ ಕಲ್ಲು, ಇಟ್ಟಿಗೆ, ಮಣ್ಣು ಮುಂತಾದುವುಗಳಿಂದ ಗೋಡೆ ಕಟ್ಟಬಹುದು. ಬಿದಿರು, ಮರ, ಇವುಗಳನ್ನು ಕಂಬ ಮತ್ತು ಮೇಲ್ಛಾವಣಿಗೆ ಉಪಯೋಗಿಸಬಹುದು. ನಮ್ಮ ದಕ್ಷಿಣ ಮೈಸೂರಿನ ಕೆಲವು ಗ್ರಾಮಗಳಲ್ಲಿ ಅದರಲ್ಲೂ ಕಾಡುಗಳ ಹತ್ತಿರವಿರುವ ಗ್ರಾಮಗಳಲ್ಲಿ ಹೆಬ್ಬಿದಿರು, ಕಿರುಬಿದಿರು ಇವುಗಳನ್ನು ತಂದು ಕೆರೆಯ ನೀರಿನಲ್ಲಿ ನೆನೆಸಿ ಆಮೇಲೆ ಮನೆಯ ಮೇಲ್ಛಾವಣಿಗೆ ಉಪಯೋಗಿಸಿದ್ದಾರೆ. ಇವುಗಳಿಗೆ ದುಂಬಿ, ಕುಟ್ಟೀಹುಳು, ಗೆದ್ದಲು—ಮುಂತಾದುವುಗಳಿಂದ ಯಾವ ಬಾಧೆಯೂ ಇಲ್ಲದೆ, ನೂರಾರು ವರ್ಷಗಳಿಂದ ಇರುವುದನ್ನು ನಾವು ಮೈಸೂರು, ಹಾಸನ, ಮುಂತಾದ ಜಿಲ್ಲೆಗಳಲ್ಲಿ ಹೆಚ್ಚಾಗಿ ನೋಡಬಹುದು. ಹಾಗೆಯೇ ನಾಡು ಹೆಂಚು, ಅಗಲವಾದ ಕಲ್ಲುಗಳು ತಪ್ಪಿದರೆ ತೆಂಗಿನ ಸೋಗು, ಹುಲ್ಲು, ಮುಂತಾದುವುಗಳನ್ನು ಉಪಯೋಗಿಸಿ ಮನೆಗಳನ್ನು ಬಡಬಗ್ಗರು ಕಟ್ಟಿಕೊಂಡಿರುತ್ತಾರೆ.

ಮನೆ ಕಟ್ಟುವುದು ಸುಲಭಸಾಧ್ಯವಲ್ಲ. ಆದರೆ ಅಸಾಧ್ಯವೂ ಏನಲ್ಲ. ಸಾಮಾನುಗಳನ್ನು ಜತೆಮಾಡುವುದಲ್ಲದೆ, ಮನೆಕಟ್ಟಲು ಬೇಕಾಗುವ ಮೂರರಲ್ಲಿ ಒಂದು ಪಾಲು ಖರ್ಚನ್ನು ಉಳಿಸಬೇಕಾದರೆ ಸಾಧ್ಯವಾದಷ್ಟು ಕೆಲಸವನ್ನೆಲ್ಲಾ ತಾನೂ, ತನ್ನ ಕುಟುಂಬದವರೂ ಮಾಡಬೇಕಾಗುತ್ತದೆ. ಅನೇಕ ಗ್ರಾಮಸ್ಥರು ಹಾಗೇ ಮಾಡುತ್ತಾರೆ. ಒಬ್ಬಿಬ್ಬರು ತಿಳಿದವರ ಸಹಾಯವನ್ನಿಟ್ಟುಕೊಂಡು ಗೋಡೆಗೆ ಬೇಕಾದ ಕಲ್ಲು, ಇಟ್ಟಿಗೆ, ಮಣ್ಣು



ಚಿತ್ರ ೧೩. ಹಳ್ಳಿಗಳಲ್ಲಿ ಕಟ್ಟುವ ಎಂಟು ಕಂಬದ ತೊಟ್ಟಿಮನೆಯ ನಕ್ಷೆ.

ಮುಂತಾದುವುಗಳನ್ನು ತನ್ನ ಸ್ವಂತ ಗಾಡಿಯಲ್ಲೇ ತರಬಹುದು. ಗಾಡಿ ಇಲ್ಲ ದವರು, ಮುಯ್ಯಿ ಕೆಲಸದ ರೀತಿಯಲ್ಲಿ ಒದಗಿಸಿಕೊಳ್ಳಬಹುದು. ಹೊಲ ದಲ್ಲಿರುವ ಮರವನ್ನು ಆರಿಸಿ, ಬೇಕಾದ ಬಾಗಿಲು, ಕಿಟಕಿಗಳನ್ನು ತಯಾರಿ ಸಲು ಮರಗಳನ್ನು ಬಡಗಿಗೆ ಒದಗಿಸಬಹುದು. ಹತ್ತಿರದ ಕಾಡಿಗೆ ಹೋಗಿ ರಹದಾರಿ ಪಡೆದು, ಗಳು, ಬೊಂಬು, ಮರಗಳನ್ನು ತರಬಹುದು. ನೀರನ್ನು ಮನೆಯವರೇ ಒದಗಿಸಿ ಮಣ್ಣು, ಗಾರೆ ಕಲೆಸಿ ಕೆಲಸಗಾರರಿಗೆ ಕೊಡಬಹುದು. ಹೀಗೆ ಅನೇಕ ವಿಧವಾಗಿ ದುಡಿದು ಖರ್ಚನ್ನು ಉಳಿಸಬಹುದು.

ಗ್ರಾಮ ಬಡಾವಣೆ

ಗ್ರಾಮ ಬಡಾವಣೆಯ ಸಮಸ್ಯೆಯನ್ನು ಪರಿಹರಿಸದೆ ನಮ್ಮ ಗ್ರಾಮ ಗಳ ಬೆಳವಣಿಗೆಯಾಗುವಂತಿಲ್ಲ. ಆದ್ದರಿಂದಲೇ ಇರುವ ಮನೆಯನ್ನೇ ಭಾಗ ಮಾಡಿಕೊಂಡು ಮೂರು ನಾಲ್ಕು ಸಂಸಾರಗಳು ಒಂದೇ ಮನೆಯಲ್ಲಿ ವಾಸಿಸುವುದನ್ನು ನಮ್ಮ ಹಳ್ಳಿಗಳಲ್ಲಿ ನೋಡಬಹುದು. ಒಬ್ಬಿಬ್ಬರು ಜಮೀನುಳ್ಳವರು ಊರಿನ ಪಕ್ಕದಲ್ಲಿ ಮನೆಕಟ್ಟಲು ರಹದಾರಿ ಪಡೆದು ತಮ್ಮ ಜಮೀನನ್ನು ಉಪಯೋಗಿಸಬಹುದು. ಆದರೆ ಇತರರಿಗೆ ಮನೆಕಟ್ಟುವ ಜಾಗ ದೊರೆಯದೆ ಸಂದು ಗೊಂದುಗಳಲ್ಲೆಲ್ಲಾ ಸಣ್ಣ ಪುಟ್ಟ ಮನೆಗಳನ್ನೂ, ಗುಡಿಸಲುಗಳನ್ನೂ ಕಟ್ಟುತ್ತಿರುತ್ತಾರೆ. ಒಟ್ಟನಲ್ಲಿ ಗ್ರಾಮ ಪಂಚಾಯಿತಿ ಯವರು ಸರ್ಕಾರದ ಸಹಾಯದಿಂದ ಭೂಸ್ವಾಧೀನ ಕಾಯಿದೆ ಮೂಲಕ ಜಮೀನನ್ನು ಸ್ವಾಧೀನ ಪಡೆದು ಗ್ರಾಮ ಬಡಾವಣೆಗಳನ್ನು ನಿಯೋಜಿತ ರೀತಿಯಲ್ಲಿ ಮಾಡಿದರೆ ಗ್ರಾಮಾಂತರ ಗೃಹನಿರ್ಮಾಣ ಸಮಸ್ಯೆ ಸ್ವಲ್ಪ ಸುಧಾರಿಸಬಹುದೆಂದು ಕಾಣುತ್ತದೆ.

ನಮ್ಮ ಮೈಸೂರು ದೇಶವನ್ನೇ ತೆಗೆದುಕೊಂಡರೆ ಇಲ್ಲಿ 29,490 ಹಳ್ಳಿಗಳಿವೆ. 232 ಪಟ್ಟಣಗಳಿವೆ, ಅಲ್ಲದೆ 12 ನಗರಗಳಿವೆ. ನಗರಗಳನ್ನು ಬಿಟ್ಟು ಗ್ರಾಮಗಳನ್ನೇ ತೆಗೆದುಕೊಂಡರೆ ಇಲ್ಲಿ ಒಟ್ಟು 9 ಲಕ್ಷ ಹೊಸ ಮನೆ ಗಳ ಆವಶ್ಯಕತೆ ಇದೆಯೆಂದು ಅಂದಾಜು ಮಾಡಲಾಗಿದೆ. ಒಂದು ಮನೆಗೆ ಸರಾಸರಿ 5,000 ರೂಪಾಯಿ ಎಂದು ಇಟ್ಟುಕೊಂಡರೆ ಸುಮಾರು 450 ಕೋಟಿ ರೂಪಾಯಿಗಳು ಇದಕ್ಕೆ ಬೇಕಾಗುತ್ತದೆ. ಇದಲ್ಲದೆ ಮನೆಗಳನ್ನು

ಕಟ್ಟುವ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ರಸ್ತೆ, ವಗೈರೆ ಮಾಡಲು ಪ್ರತಿಯೊಂದು ಮನೆ ಜಾಗಕ್ಕೂ ಸುಮಾರು 500 ರೂ ವೆಚ್ಚ ತಗಲಬಹು ದೆಂದು ಅಂದಾಜು ಮಾಡಿದರೆ ಎಲ್ಲಾ ಹಳ್ಳಿಗಳಿಗೂ ಬಡಾವಣೆಗಾಗಿಯೇ ಸುಮಾರು 2 ಕೋಟಿ ರೂಪಾಯಿಗಳು ಬೇಕಾಗಬಹುದು.

ಆದರೆ ನಮ್ಮ ಗ್ರಾಮಸ್ಥರು ಸ್ಥಳದ ಸಾಮಾನುಗಳನ್ನೇ ಹೆಚ್ಚಾಗಿ ಉಪಯೋಗಿಸಿ ಸ್ವಸಹಾಯ ಮಾದರಿಯಲ್ಲಿ ತಾವೇ ಹೆಚ್ಚು ಭಾಗ ದುಡಿದು ಮನೆ ಕಟ್ಟಿಕೊಂಡರೆ ಇದರಲ್ಲಿ ಶೇಕಡ 50 ರಷ್ಟು, ಅಂದರೆ ಅರ್ಧ ಭಾಗವನ್ನು ಮಾತ್ರ ಹಣದ ರೂಪದಲ್ಲಿ ಒದಗಿಸಿದರೆ ಸಾಕೆಂದು ತೋರುತ್ತದೆ. ಈ ಹಣ, ಅಂದರೆ ಪ್ರತಿ ಹೊಸ ಮನೆಗೂ ತಗಲುವ ಸುಮಾರು 2,500 ರೂಪಾಯಿ ಗಳು ದೊರೆಯುವಂತೆ ಏನಾದರೂ ಏರ್ಪಾಡು ಮಾಡಬೇಕಾಗಿದೆ. ಆವಶ್ಯ ಕತೆಯಿರುವವರು ಈ ಹಣವನ್ನು ಬ್ಯಾಂಕು, ಸಹಕಾರ ಸಂಘ, ಗೃಹ ನಿರ್ಮಾಣ ಸಂಸ್ಥೆ, ಜೀವ ವಿಮಾ ಸಂಸ್ಥೆ ಮುಂತಾದುವುಗಳಿಂದ ಸಾಲವಾಗಿ ಪಡೆಯುವಂತೆ ವ್ಯವಸ್ಥೆ ಮಾಡಬಹುದು. ಈ ಹಣವನ್ನು ಉಪಯೋಗಿಸಿ ರೈತರು ತಮಗೆ ಬೇಕಾದರೀತಿಯಲ್ಲಿ ಅಲ್ಲದೆ ತಮ್ಮಲ್ಲಿರುವ ಸಾಮಗ್ರಿಗಳನ್ನೂ, ಶಕ್ತಿಯನ್ನೂ ಬಳಸಿ ಮನೆಕಟ್ಟಲು ಸ್ವಲ್ಪ ಸ್ವಾತಂತ್ರ್ಯವನ್ನು ಕೊಡುವಂತೆ ಈ ಸಾಲ ಕೊಡುವಸಂಸ್ಥೆಗಳು ತಮ್ಮ ನಿಬಂಧನೆಗಳಲ್ಲಿ ಅವಕಾಶ ಮಾಡಿ ಕೊಡಬೇಕಾಗುತ್ತದೆ. ಇಲ್ಲವಾದಲ್ಲಿ, ನಗರದಲ್ಲಿರುವ ಮನೆಗಳಂತೆಯೇ ಹಳ್ಳಿ ಗಳಲ್ಲೂ ಕಟ್ಟುವಂತೆ ಈ ಹಣ ಒದಗಿಸುವ ಸಂಸ್ಥೆಗಳು ಎಲ್ಲರನ್ನೂ ಒತ್ತಾಯಪಡಿಸಿದರೆ, ಬಹುಪಾಲು ರೈತರು ಇಂತಹ ಮನೆ ಕಟ್ಟಲು ಮುಂದೆ ಬರಲಾರರೆಂದು ಕಾಣುತ್ತದೆ.


ಮನೆಯ ವಿನ್ಯಾಸ

ಗ್ರಾಮಾಂತರ ಪ್ರದೇಶಗಳ ಜನರೂ ಕೂಡ ಆಧುನಿಕ ರೀತಿಯಲ್ಲಿ ಮನೆಯ ವಿನ್ಯಾಸವನ್ನು ಕೊಂಚ ಮಾರ್ಪಡಿಸಲು ಸಿದ್ಧರಾಗಿರಬೇಕು. ಅಂದರೆ ಗಾಳಿ ಬೆಳಕಿಗಾಗಿ ಒಂದೆರಡು ಕಿಟಕಿಗಳು. ವಾಸಕ್ಕಾಗಿ ಒಂದು ಕೊಠಡಿ, ಸ್ನಾನಕ್ಕಾಗಿ ಬಚ್ಚಲುಮನೆ ಇಷ್ಟನ್ನಾದರೂ ಇರುವ ಸ್ಥಳದಲ್ಲೇ ಅಳವಡಿಸಲು ಬಲ್ಲವರ ಸಲಹೆ ಪಡೆಯಲು ಹಿಂಜರಿಯಬಾರದು. ದನಕರು


ಗಳಿಗಾಗಿ ಪ್ರತ್ಯೇಕ ಕೊಟ್ಟಿಗೆಯನ್ನು ಏರ್ಪಡಿಸಬೇಕು. ತಿಪ್ಪೆ, ಬಚ್ಚಲು— ಇವುಗಳ ನೈರ್ಮಲ್ಯದ ಕಡೆ ಹೆಚ್ಚು ನಿಗಾ ಕೊಡಬೇಕು. ಮೈಸೂರಿನ ಹತ್ತಿರದ ಒಂದು ಗ್ರಾಮದಲ್ಲಿ ಕಟ್ಟಿರುವ ಮನೆಯೊಂದರ ಚಿತ್ರವನ್ನು ಇಲ್ಲಿ ಕೊಡಲಾಗಿದೆ (ಚಿತ್ರ 14). ಇತ್ತೀಚೆಗೆ ನಗರಗಳಂತೆ ಹಳ್ಳಿಗಳಲ್ಲೂ ಕೆಲವು ಅನುಕೂಲಗಳನ್ನು ಅಳವಡಿಸಿಕೊಂಡು ಮನೆಗಳನ್ನು ಕಟ್ಟುವ ಪದ್ಧತಿ ರೂಡಿಗೆ ಬರುತ್ತಿದೆ. ಆದಕಾರಣ ಹೆಚ್ಚು ವರಮಾನವುಳ್ಳ ಹಳ್ಳಿಯವರಿಗೆ ಅನುಕೂಲವಾಗುವಂತೆ ಕನಿಷ್ಠ ಆವಶ್ಯಕತೆಗಳನ್ನೊಳಗೊಂಡ ಒಂದು ಮನೆಯ ಮಾದರಿ ನಕ್ಷೆಯನ್ನು (ಚಿತ್ರ 15) ಕೊಡಲಾಗಿದೆ. ಇವು ಗಳನ್ನು ಪರಿಸ್ಥಿತಿಗೆ ತಕ್ಕಂತೆಯೂ ಮತ್ತು ನಿವೇಶನಕ್ಕೆ ಹೊಂದುವಂತೆಯೂ ಬದಲಾಯಿಸಿಕೊಂಡು ಮನೆಗಳನ್ನು ಕಟ್ಟಿಕೊಳ್ಳಬಹುದು. ಮೈದಾನ ಪ್ರದೇಶದಲ್ಲಿ ತಾರಸಿ ಅಥವಾ ಸಿಮೆಂಟು ಉಪಯೋಗಿಸಿದರೆ, ಮಲೆನಾಡಿ ನಲ್ಲಿ ಮಂಗಳೂರು ಹೆಂಚನ್ನು ಉಪಯೋಗಿಸಬಹುದು. ಹಾಗೆಯೇ ಗೋಡೆ ಗಳನ್ನು ಸ್ಥಳೀಯವಾಗಿ ಸಿಕ್ಕುವ ಕಲ್ಲು, ಇಟ್ಟಿಗೆ ಮತ್ತು ಮಣ್ಣಿನಿಂದ ಕಟ್ಟಬಹುದು. ಇದಲ್ಲದೆ ರಸ್ತೆಗಾಗಿ ಜಾಗವನ್ನು ಬಿಟ್ಟು, ಗ್ರಾಮದ ಬಡಾ ವಣೆಯ ನಕ್ಷೆಗನುಗುಣವಾಗಿ ಮನೆಕಟ್ಟಲು ನಗರದ ಜನರಂತೆಯೇ ನಮ್ಮ ಹಳ್ಳಿಯವರೂ ಮನಸ್ಸು ಮಾಡಿದರೆ ನಮ್ಮ ಹಳ್ಳಿಯ ಜೀವನ ಹೆಚ್ಚು ಆಕರ್ಷಕವಾಗಬಹುದು.

ಯೋಜಿತ ಗ್ರಾಮಾಂತರ ಗೃಹನಿರ್ಮಾಣದತ್ತ ಇತ್ತೀಚಿನ ಕ್ರಮಗಳು


ಗ್ರಾಮಗಳಲ್ಲಿ ಸರ್ಕಾರದ ದಿಸೆಯಿಂದ ಗ್ರಾಮಾಂತರ ಗೃಹನಿರ್ಮಾಣ ಯೋಜನೆ ಮತ್ತು ಹರಿಜನ ಗಿರಿಜನ ಗೃಹನಿರ್ಮಾಣ ಯೋಜನೆಗಳಲ್ಲದೆ, ಬೇರಾವ ದೊಡ್ಡ ಯೋಜನೆಗಳೂ ಇರಲಿಲ್ಲ. ಆದರೆ, 1957 ರಲ್ಲಿ ಗ್ರಾಮ ಬಡಾವಣೆ ಮತ್ತು ಮನೆಕಟ್ಟುವ ಕೆಲಸಕ್ಕಾಗಿ ರೂರಲ್ ಹೌಸಿಂಗ್ ಸೆಲ್ ಎಂಬ ವಿಭಾಗವನ್ನು ಒಬ್ಬ ಎಕ್ಸಿಕ್ಯುಟೀವ್ ಇಂಜಿನಿಯರ್‌ರ ನೇತೃತ್ವ ದಲ್ಲಿ ಪ್ರಾರಂಭಿಸಲಾಯಿತು. ಭಾರತ ಸರ್ಕಾರ, ಜೀವವಿಮಾ ಮಂಡಲಿ ಇವೆರಡೂ ಈ ಯೋಜನೆಗೆ ಹಣ ಒದಗಿಸುತ್ತಿದ್ದುವು. ಪ್ರವಾಹ ಪೀಡಿತ



ಚಿತ್ರ ೧೪. ಹಳ್ಳಿಯ ಮನೆಯೊಂದರ ನೋಟ.



ಮನೆಯ ನಕ್ಷೆ



ಮೇಲಂತಸ್ತಿನ ನಕ್ಷೆ



ಪಕ್ಕದ ನೋಟ

ಚಿತ್ರ ೧೫. ವ್ಯವಸಾಯವನ್ನವಲಂಬಿಸಿರುವ ಹೆಚ್ಚುವರಮಾನದವರು ಕಟ್ಟಬಹುದಾದ ಮನೆಯ ನಕ್ಷೆ.

ಮತ್ತು ಬೆಂಕಿ ಮತ್ತಿತರ ಅಪಘಾತಕ್ಕೊಳಗಾದ ಹಳ್ಳಿಗಳಲ್ಲೂ, ಜನ ಸಾಂದ್ರತೆ ಹೆಚ್ಚಿರುವ ಊರುಗಳಲ್ಲೂ ಮನೆಗಳ ನಿವೇಶನಗಳನ್ನು ತಯಾರಿಸುವುದು ಹಾಗೂ ಮನೆ ಕಟ್ಟಲು ಹಣ ಒದಗಿಸುವುದು ಇವು—ಈ ಯೋಜನೆಯ ಕಾರ್ಯಕ್ರಮಗಳು.

ಪ್ರತಿ ಮನೆಗೂ 3,000 ರೂಪಾಯಿಗಳಿಗೆ ಮೀರದಂತೆ ಸಾಲವನ್ನೊದಗಿಸಲಾಗುತ್ತಿತ್ತು. 1964-65 ರಿಂದೀಚೆಗೆ ಒಂದು ಹೊಸ ಯೋಜನೆಯನ್ನು ಪ್ರಾರಂಭಿಸಿ, ಗ್ರಾಮಗಳಲ್ಲಿರುವ ಜಮೀನಿಲ್ಲದ ಬೇಸಾಯ ಕೂಲಿಕಾರರಿಗಾಗಿ ಮನೆ ನಿವೇಶನಗಳನ್ನೊದಗಿಸಲು ಜಮೀನನ್ನು ಸ್ವಾಧೀನ ಪಡಿಸಿಕೊಂಡು ನಿವೇಶನಗಳನ್ನೂ ನಿರ್ಮಿಸಲಾಗುತ್ತಿತ್ತು. ಇದಕ್ಕಾಗಿ ಇಲ್ಲಿಯವರೆಗೂ ಸುಮಾರು 7 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ 3.000 ನಿವೇಶನಗಳನ್ನೂ, ಅವುಗಳಿಗೆ ಬೇಕಾದ ರಸ್ತೆಗಳನ್ನೂ ಒದಗಿಸಲಾಗಿದೆ.

ಭಾರತ ಸರ್ಕಾರ ಮತ್ತು ಜೀವವಿಮಾ ಸಂಸ್ಥೆ ಇಲ್ಲಿಯ ತನಕ ಈ ಗೃಹನಿರ್ಮಾಣ ವಿಭಾಗದ ಮೂಲಕ ಸುಮಾರು ಒಂದು ಕೋಟಿ 75 ಲಕ್ಷ ರೂಪಾಯಿಗಳನ್ನು ಒದಗಿಸಿವೆ. ಇದರಿಂದ ಇಲ್ಲಿಯವರೆಗೆ 472 ಗ್ರಾಮಗಳಲ್ಲಿ 10,772 ಮನೆಗಳನ್ನು ಮಾತ್ರ ಕಟ್ಟಲಾಗಿದೆ. 29,490 ಗ್ರಾಮಗಳ ಪೈಕಿ 472 ಗ್ರಾಮಗಳಲ್ಲಿ ಮಾತ್ರ ಕೆಲಸ ಪ್ರಾರಂಭಿಸಿ ಇನ್ನೂ 29 ಸಾವಿರ ಗ್ರಾಮಗಳಲ್ಲಿ ಏನೂ ಸಾಧಿಸಿದಂತಾಗಿಲ್ಲ. ಬೇಕಾಗಿರುವ 9 ಲಕ್ಷ ಮನೆಗಳ ಪೈಕಿ ಕೇವಲ 10 ಸಾವಿರ ಮನೆಗಳನ್ನು ಕಟ್ಟಲು ಕಳೆದ 15 ವರ್ಷಗಳಿಂದಲೂ ಪ್ರಯತ್ನ ನಡೆದಿದೆ. ಇನ್ನೂ ಎಷ್ಟು ಕೆಲಸ ಬಾಕಿ ಇದೆ ಎಂಬುದನ್ನು ಯೋಚಿಸಿದರೆ ಸಮಸ್ಯೆಯ ಬೃಹದಾಕಾರ ತಿಳಿಯುತ್ತದೆ.

ಯೋಜನೆಗಳನ್ನು ರೂಪಿಸಿ, ಹಲವಾರು ವರ್ಷ ಅವನ್ನು ಅನುಸರಿಸುತ್ತೇವೆ. ಕಾಲಕ್ರಮೇಣ ಈ ಯೋಜನೆಗಳಲ್ಲಿ ಬದಲಾವಣೆ ಅಗತ್ಯವೆಂದು ಕಂಡರೆ ಸೂಕ್ತವಾಗಿ ಮಾರ್ಪಡಿಸಿಕೊಂಡು ಮುಂದುವರಿಸುವುದು ಬುದ್ಧಿವಂತಿಕೆಯ ಲಕ್ಷಣ. ಇದನ್ನನುಸರಿಸಿ ಮೈಸೂರು ಸರ್ಕಾರ ಗ್ರಾಮಾಂತರ ಗೃಹ ನಿರ್ಮಾಣ ಯೋಜನೆಯನ್ನು ಗೃಹ ನಿರ್ಮಾಣ ಮಂಡಲಿಗೆ ಇತ್ತೀಚೆಗೆ ವಹಿಸಿದೆ. ಮಂಡಲಿ ಈ ವಿಷಯವನ್ನು ಪರಿಶೀಲಿಸಿ ರಾಜ್ಯದಾದ್ಯಂತ ಒಬ್ಬ ಎಕ್ಸಿಕ್ಯುಟೀವ್ ಇಂಜಿನಿಯರ್ ನೋಡಿಕೊಳ್ಳುತ್ತಿದ್ದ ಈ ಗ್ರಾಮಾಂತರ

ಕೆಲಸವನ್ನು ರಾಜ್ಯದ ವಿವಿಧ ಭಾಗಗಳಲ್ಲಿರುವ ತನ್ನ ಐದು ಎಕ್ಸಿಕ್ಯುಟೀವ್ ಇಂಜನಿಯರುಗಳಿಗೆ ಹಂಚಿದೆ. ಇದರಿಂದ ಪಟ್ಟಣದವರಂತೆಯೇ ಹಳ್ಳಿಯವರೂ ಜಾಗ್ರತೆಯಾಗಿ ತಮ್ಮ ಕಾಗದ ಪತ್ರಗಳನ್ನು ರವಾನಿಸಲು, ಮತ್ತು ಹಣ ಪಡೆಯಲು, ಅಲ್ಲದೆ ನಡೆಯುವ ಕೆಲಸಕ್ಕೆ ಕೂಡಲೆ ತಾಂತ್ರಿಕ ಸಲಹೆ ಪಡೆಯಲು ತುಂಬಾ ಅನುಕೂಲವಾಗಬಹುದು.

ಹಿಂದಿನ ಕುಂಠಿತ ಯೋಜನೆಯನ್ನು ಚುರುಕುಗೊಳಿಸಬೇಕಾದರೆ ಗೃಹ ನಿರ್ಮಾಣ ಮಂಡಲಿಯು ತನ್ನ ವಾರ್ಷಿಕ ಹಣಕಾಸಿನ ಅಂದಾಜಿನಲ್ಲಿ ಗ್ರಾಮಾಂತರ ಯೋಜನೆಗಳಿಗೆ ಪ್ರತ್ಯೇಕ ಹಣವನ್ನು ಮೀಸಲಿಡಬೇಕು. ಇದು ಸಾಧ್ಯ, ಏಕೆಂದರೆ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಹಳ್ಳಿಗಾಡಿನ ಸಮಸ್ಯೆಯನ್ನು ಚೆನ್ನಾಗಿ ಅರಿತವರಾಗಿದ್ದಾರೆ. ಇವರು ಗ್ರಾಮಾಂತರ ಗೃಹ ನಿರ್ಮಾಣದ ವಿಷಯವಾಗಿ ಖಚಿತ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಸರ್ಕಾರವನ್ನು ಒಪ್ಪಿಸಿ, ಹಳ್ಳಿಗಳ ವಸತಿ ಸಮಸ್ಯೆಯನ್ನು ಬಗೆಹರಿಸುವಲ್ಲಿ ಗೃಹ ನಿರ್ಮಾಣ ಮಂಡಲಿ ಹೆಚ್ಚು ಯಶಸ್ವಿಯಾಗಬಹುದೆಂದು ಭಾವಿಸಿ, ಈ ಹೊಸ ಆಜ್ಞೆಯನ್ನು ಪಡೆದಿದ್ದಾರೆ. ಆದ್ದರಿಂದ ಮಂಡಲಿಯ ಜವಾಬ್ದಾರಿ ಬಹಳವಾಗಿದೆ. ಇದಲ್ಲದೆ ಭಾರತ ಸರ್ಕಾರ ಇತ್ತಿರುವ ನಿಬಂಧನೆಗಳನ್ನು ಅನುಸರಿಸಿ, ಗ್ರಾಮಗಳಲ್ಲಿ ಮನೆಕಟ್ಟುವವರಿಗೆ ಕೊಡುವಸಾಲದ ವೊಬಲಗನ್ನು ತಲಾ 3,000 ರೂಪಾಯಿಗಳಿಂದ 5,000 ರೂಪಾಯಿಗಳಿಗೆ ಹೆಚ್ಚಿಸುವ ಸೂಚನೆಯೂ ಇದೆ. ಈಗ ಹಣವನ್ನು ಒದಗಿಸುತ್ತಿರುವ ಸಂಸ್ಥೆಗಳ ಜತೆಗೆ ಗೃಹ ನಿರ್ಮಾಣ ಮಂಡಲಿಯೂ ಸಹ ತನ್ನ ಹಣವನ್ನು ಸೇರಿಸಿ ಹೆಚ್ಚು ಹೆಚ್ಚು ಮನೆಗಳನ್ನು ಕಟ್ಟಲು ನೆರವಾಗಬಹುದು. ಕೆಲವು ದೊಡ್ಡ ಗ್ರಾಮಗಳಲ್ಲಿ, ಬಾಡಿಗೆಗಾಗಿ ನಗರಗಳಂತೆಯೇ, ಉಪಾಧ್ಯಾಯರಿಗೆ, ಪಂಚಾಯಿತಿ ಮತ್ತು ಸರ್ಕಾರಿ ನೌಕರರಿಗೆ ಮನೆಗಳನ್ನು ಕಟ್ಟಲು ಅನುಕೂಲವಾಗುತ್ತದೆ.

ಮೊದಲು ನಮ್ಮ ಹಳ್ಳಿಗಳಿಗೆಲ್ಲಾ ವಿದ್ಯುಚ್ಛಕ್ತಿ, ಕುಡಿಯುವ ನೀರಿನ ವ್ಯವಸ್ಥೆ, ಸಂಚಾರಕ್ಕೆ ಒಳ್ಳೆಯ ರಸ್ತೆ ಇವುಗಳಿಗೆ ಒಂದು ಯೋಜನೆ ಅಗತ್ಯ. ಇದೇ ರೀತಿ ಹಳ್ಳಿಗಳ ಬಡಾವಣೆಗಾಗಿ ಬೇಕಾಗುವ ಜಮೀನನ್ನು ಸ್ವಾಧೀನ ಮಾಡಿಕೊಳ್ಳಲು, ಆಮೇಲೆ ಅವುಗಳನ್ನು ನಿವೇಶನಗಳಾಗಿ ವಿಂಗಡಿಸಲು

ಮತ್ತೊಂದು ಬೃಹದ್ಯೋಜನೆ ಬೇಕು. ಇದು ಪಂಚವಾರ್ಷಿಕ ಯೋಜನೆಗಳಂತೆ ಮುಂದುವರೆಯುಬೇಕು. ಹಾಲಿ ಸುಮಾರು 7.000 ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ. ಶೋಧಿಸಿದ ಕುಡಿಯುವ ನೀರಿನ ವ್ಯವಸ್ಥೆ 215 ಗ್ರಾಮಗಳಲ್ಲಿ ಮಾತ್ರ ಇದೆ. 300 ಗ್ರಾಮಗಳಲ್ಲಿ ಈ ಕಾರ್ಯ ನಡೆಯುತ್ತಿದೆ.18,211 ಗ್ರಾಮಗಳವರು, ಬಾವಿ. ಕೆರೆ, ಕಟ್ಟೆ, ನದಿಗಳಿಂದ ನೀರನ್ನು ಪಡೆಯುತ್ತಿದ್ದಾರೆ. ಉಳಿದ 10,764 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಬಹಳ ಕಠಿಣವಾಗಿದೆ. ಇದೇ ರೀತಿ ವಸತಿ ಸಮಸ್ಯೆಯೂ ಕೂಡ ಹೆಚ್ಚಾಗಿದೆ. ಕೆಲವು ಮುಖ್ಯ ಗ್ರಾಮಗಳನ್ನಾದರೂ ಆರಿಸಿ, ಅಲ್ಲಿ ಗ್ರಾಮ ಬಡಾವಣೆ, ಸಾರ್ವಜನಿಕ ಸೌಕರ್ಯ ಮತ್ತು ಮನೆಕಟ್ಟುವ ಕಾರ್ಯಕ್ರಮ ಇವುಗಳನ್ನು ಪ್ರತಿವರ್ಷವೂ ಮುಂದುವರಿಸಬೇಕು.

ಗ್ರಾಮಗಳಲ್ಲಿ ಕಸಬಿನ ಅಭಾವದಿಂದ ಜನರು ನಗರಗಳಿಗೆ ವಲಸೆ ಹೋಗುವುದರ ಜತೆಗೆ ನಮ್ಮ ಹಳ್ಳಿಗಳಲ್ಲಿ ನಾಗರಿಕ ಜೀವನವನ್ನು ನಡೆಸಲು ಸಾಧ್ಯವಾಗದೆ ಇನ್ನು ಕೆಲವರು ಪಟ್ಟಣಗಳಿಗೆ ಹೋಗಿ ನೆಲಸುತ್ತಾರೆ. ಇದನ್ನು ನಿವಾರಿಸಲು ಗ್ರಾಮಸ್ಥರ ಆದಾಯವನ್ನು ಹೆಚ್ಚಿಸುವುದೇ ಅಲ್ಲದೆ ಗ್ರಾಮಗಳಲ್ಲಿ ವಾಸಿಸಲು ವಾತಾವರಣವು ಅನುಕೂಲವಾಗುವಂತೆ ಮತ್ತು ಹೆಚ್ಚು ಆಕರ್ಶಣೀಯವಾಗುವಂತೆ ಏರ್ಪಡಿಸಬೇಕು. ವಿದ್ಯುಚ್ಛಕ್ತಿ, ನೀರು ಸರಬರಾಜು, ಸಾರಿಗೆ ಸೌಕರ್ಯಗಳ ಜತೆಗೆ ವಾಸಿಸಲು ಅನುಕೂಲವಾದ ಮನೆಗಳು ಅಲ್ಲದೆ ತಿಪ್ಪೆ ಬಚ್ಚಲುಗಳ ಕೊಳೆತ ದುರ್ವಾಸನೆಯಿಂದ ಮುಕ್ತವಾದ ನೈರ್ಮಲ್ಯ ವಾತಾವರಣ, ಮಕ್ಕಳಿಗಾಗಿ ಪಾಠಶಾಲೆ, ಕಾಯಿಲೆಯವರಿಗೆ ವೈದ್ಯಕೀಯ ಸೌಲಭ್ಯ ಮುಂತಾದ ಅನುಕೂಲಗಳನ್ನು ಕಲ್ಪಿಸಬೇಕು. ಇವೆಲ್ಲವನ್ನೂ ಒದಗಿಸಿದರೆ, ಇನ್ನು ಹತ್ತಾರು ವರ್ಷಗಳಲ್ಲಿ ನಮ್ಮ ಹಳ್ಳಿಗಳೂ ನಗರಗಳಂತೆಯೇ ವಾಸಕ್ಕೆ ಯೋಗ್ಯವಾಗಬಹುದು.

೬. ಮುಂದಿನ ನಗರಗಳು

ವಿಜ್ಞಾನ ಮತ್ತು ತಾಂತ್ರಿಕ ಕಲೆ ಬೆಳೆದಂತೆ ನಗರ ಯೋಜನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯ ವಿಧಾನಗಳೂ ಬದಲಾಗವುದು ಖಂಡಿತ. ಇದನ್ನು 20ನೇ ಶತಮಾನದಲ್ಲಿ ನಾವು ನೋಡುತ್ತಿದ್ದೇವೆ; ಅನುಭವಿಸುತ್ತಿದ್ದೇವೆ. ಕೈಗಾರಿಕಾ ಕ್ರಾಂತಿಯ ಪರಿಣಾಮ ಮತ್ತು ಆಧುನಿಕ ಸಂಚಾರ ಸೌಲಭ್ಯಗಳಿಂದಾಗಿ ನಗರಗಳ ರಚನೆಯಲ್ಲಿ ಆಗಿರುವ ಅನೇಕ ಬದಲಾವಣೆಗಳೇ ಇದಕ್ಕೆ ನಿದರ್ಶನ. ಹೆಚ್ಚು ದೂರವನ್ನು ಕಡಿಮೆ ಕಾಲದಲ್ಲಿ ನಾವು ತಲುಪಬಹುದಾದ್ದರಿಂದ ನಗರಗಳು ವಿಸ್ತಾರವಾಗುತ್ತಿರುವುದು ಎದ್ದು ಕಾಣುತ್ತಿದೆ. ಹಿಂದಿನ ಕಾಲದಲ್ಲಿ ನೀರಿನ ಆಸರೆಗಾಗಿ ನದೀಪಾತ್ರಗಳಲ್ಲೇ ಬೆಳೆಯುತ್ತಿದ್ದ ಮಹಾನಗರಗಳು ಇಂದು ಯಂತ್ರದ ಮೂಲಕ ನೀರೆತ್ತುವ ವಿಧಾನವನ್ನು ಉಪಯೋಗಿಸಿಕೊಂಡು ನೂರಾರು ಮೈಲಿಗಳವರಗೆ ನೀರನ್ನು ಪಂಪುಗಳ ಮೂಲಕ ಸಾಗಿಸಿ ಅಭಿವೃದ್ಧಿಹೊಂದುತ್ತಿರುವುದು ಸಾಮಾನ್ಯವಾಗುತ್ತಾ ಬರುತ್ತಿದೆ. ಅಂದಿನ ಪರಿಸ್ಥಿತಿಯಲ್ಲಿ ಕತ್ತಲು, ಕಳ್ಳಕಾಕರ ಭಯ ಮುಂತಾದವುಗಳ ದಿಸೆಯಿಂದ ಮನೆಗಳು ಊರೊಳಕ್ಕೆ ಮುಖಮಾಡಿರುವಂತೆ ನಿರ್ಮಾಣವಾಗುತ್ತಿದ್ದವು. ಪ್ರಕೃತ, ಹೆದ್ದಾರಿಗಳಲ್ಲಿ ವಿದ್ಯುಚ್ಛಕ್ತಿ ದೀಪಗಳ ವ್ಯವಸ್ಥೆ ಹಾಗೂ ರಾತ್ರಿ ಹಗಲೆನ್ನದೆ ಮೋಟಾರುವಾಹನಗಳ ಮತ್ತು ಜನಸಂಚಾರದ ಕಾರಣ, ಯಾವುದೇ ರೀತಿಯ ಭಯವಿಲ್ಲದೆ ಮನೆಗಳನ್ನು ಊರಹೊರಕ್ಕೂ ಮುಖಮಾಡಿ ನಿರ್ಮಾಣಮಾಡುತ್ತಿರುವುದು ರೂಢಿಗೆ ಬರುತ್ತಿದೆ. ಪ್ರಕೃತಿ ದೃಶ್ಯ ಚೆನ್ನಾಗಿರುವ ಕಡೆಗಳಲ್ಲಂತೂ ಇಂತಹ ಪ್ರಯೋಗಗಳು ಹೆಚ್ಚುತ್ತಿದ್ದು, ಸರ್ಕಾರಿ ಭವನಗಳು, ಅತಿಥಿಗೃಹಗಳು, ದೇವಸ್ಥಾನಗಳು—ಮುಂತಾದುವು ಎತ್ತರ ಪ್ರದೇಶಗಳಲ್ಲಿ ಆಕರ್ಷಕ ರೀತಿಯಲ್ಲಿ ನೈಜವಾದ ದೃಶ್ಯಾಭಿಮುಖವಾಗಿ ನಿರ್ಮಿಸಲ್ಪಡುತ್ತಿವೆ. ಕೈಗಾರಿಕೆಗಳಿಗೆ ಹೆಚ್ಚು ಸ್ಥಳಾವಕಾಶ ಬೇಕಾಗುವುದರಿಂದಲೂ, ನಗರ ಪ್ರದೇಶಗಳಲ್ಲಿ ಭೂಮಿಯ ಬೆಲೆ ದುಬಾರಿಯಾಗಿರುವುದರಿಂದಲೂ, ಕೈಗಾರಿಕೆಗಳು ಆಧುನಿಕ ಸಂಚಾರ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ನಗರಗಳ ಹೊರ ವಲಯಗಳಲ್ಲಿ

ಸ್ಥಾಪನೆಯಾಗುವುದು ಹೆಚ್ಚುತ್ತಿದೆ. ಇವುಗಳೆಲ್ಲದರ ಪರಿಣಾಮವೇ ಮಹಾ ನಗರಗಳ ಬೆಳವಣಿಗೆ. ಅಕ್ಕಪಕ್ಕದ ಗ್ರಾಮಗಳನ್ನೂ, ಸಣ್ಣ ಪುಟ್ಟ ಪಟ್ಟಣಗಳನ್ನೂ ಆಕ್ರಮಿಸಿಕೊಂಡು ಒಂದಕ್ಕೊಂದು ವಿಳಿತವಾಗಿ ಅಡೆತಡೆ ಯಿಲ್ಲದೆ, ಬೃಹತ್‌ನಗರಗಳು ಬೆಳೆಯುತ್ತಿರುವುದನ್ನು ಪ್ರಪಂಚದ ಎಲ್ಲಾ ಕಡೆಯೂ ನೋಡುತ್ತಿದ್ದೇವೆ. ಹೀಗೆ ಬೆಳೆದಿರುವ ಕೆಲವು ಬೃಹತ್ ನಗರಪ್ರದೇಶಗಳ (Aglomerations) ಜನಸಂಖ್ಯೆಯನ್ನು ಈ ಕೆಳಗೆ ಕೊಡಲಾಗಿದೆ :

ನ್ಯೂಯಾರ್ಕ್ (ಈಶಾನ್ಯ ನ್ಯೂಜರ್ಸಿ ಸೇರಿ)	1960	1,47,59,000
ಟೋಕಿಯೋ– ಯಾಕೋಹಾಮ	1960	1,36,28,000
ಲಂಡನ್	1961	1,15,47,000
ಮಾಸ್ಕೋ	1959	78,84,000
ಪ್ಯಾರಿಸ್	1962	78,10,000
ಒಸಾಕ–ಕೊಬೆ (ಜಪಾನ್)	1960	76,08,000
ಕಲ್ಕತ್ತ	1971	70,05,000
ಷಾಂ ಘೈ	1957	6,90,0000
ಚಿಕಾಗೋ (ನೈರುತ್ಯ ಇಂಡಿಯಾನ ಸೇರಿ)	1960	67,94.000
ಬ್ಯೂನೋಸ್ ಏರಿಸ್	1960	67,63,000
ಲಾಸ್‌ಆಂಜಲಿಸ್–ಲಾಂಗ್‌ಬೀಚ್	1960	67,42,000
ಬೊಂಬಾಯಿ	1971	59,69,000
ಪೀಕಿಂಗ್	1958	54,20,000
ಮೆಕ್ಸಿಕೊ ನಗರ	1960	46,18,000
ರಯೋ ಡಿ ಜನೈರೋ	1960	46,92,000
ಸವ್ ಪೌಲೊ	1960	43.69,000
ಫಿಲಡಲ್ಫಿಯಾ	1960	43,43,000
ಬರ್ಲಿನ್	1961	41,54,000

ರ್ಯಾಂಡ್‌ಸ್ಟಡ್–ಹಾಲೆಂಡ್	1963	39,37,000
ಡೆಟ್ರಾಯಿಟ್	1960	37,62,000
ಲೆನಿನ್‌ಗ್ರಾಡ್	1959	35,79.000
ಕೈರೋ	1960	35,00,000
ಹಾಂಗ್‌ಕಾಂಗ್	1961	31,33,000

ಹೀಗೆ ಬೃಹದಾಕಾರದಲ್ಲಿ ಬೆಳೆಯುತ್ತಿರುವ ಮಹಾ ನಗರಗಳ ಜೊತೆಗೆ ಇತರ ನಗರ ಪ್ರದೇಶಗಳೂ ಬೆಳೆಯುತ್ತಿವೆ. ಕೈಗಾರಿಕಾ ಕ್ರಾಂತಿಯಾದ ಮೇಲೆ ಮುಂದುವರಿದ ರಾಷ್ಟ್ರಗಳಲ್ಲಿನ ನಗರ ಬೆಳವಣಿಗೆ ವಿಶೇಷವಾಯಿತು. ಇದರೊಂದಿಗೆ ಅವುಗಳ ಜನಸಂಖ್ಯೆಯೂ ಬೆಳೆಯತ್ತಾ ಬಂತು. ಕಳೆದ ಶತಮಾನದಲ್ಲಿ ಅಂದರೆ 1801 ರಿಂದ 1900 ನೇ ಇಸವಿಯವರೆಗೆ ಪಾಶ್ಚಾತ್ಯ ದೇಶಗಳಲ್ಲಿ ನಗರೀಕರಣವು (Urbanisation) ಅಡತಡೆಯಿಲ್ಲದೆ ಮುಂದುವರಿಯಿತು. ಈ ಕೆಳಗಿನ ಅಂಕಿಅಂಶಗಳು ಈ ದಿಶೆಯಲ್ಲಿ ಬಹಳ ಗಮನಾರ್ಹ. ಇಂಗ್ಲೆಂಡ್ ದೇಶದಲ್ಲಿ 1801 ರ ವೇಳೆಗೆ ಶೇಕಡಾ 16.9 ಜನರು ನಗರಗಳಲ್ಲಿ ವಾಸಿಸುತ್ತಿದ್ದರು; ಆದರೆ 1891 ರ ಒಳಗಾಗಿ ಅಲ್ಲಿನ ನಗರವಾಸಿಗಳ ಸಂಖ್ಯೆ ಶೇಕಡಾ 53.7 ರಷ್ಟಾಯಿತು. ಇದೇರೀತಿ, ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಈ ಸಂಖ್ಯೆ 1800 ರಲ್ಲಿ 3.8 ರಷ್ಟಿದ್ದುದು 1890 ರ ವೇಳೆಗೆ 27.6 ಕ್ಕೆ ಏರಿತು. ಫ್ರಾನ್ಸ್‌ನ ನಗರವಾಸಿಗಳ ಶೇಕಡಾವಾರು ಸಂಖ್ಯೆ 1846 ರಲ್ಲಿ 24.4 ಇದ್ದುದು 1891 ರಲ್ಲಿ 37.4 ಕ್ಕೆ ಹೆಚ್ಚಿತು. ಈ ಶತಮಾನದಲ್ಲಿ ಈ ನಗರೀಕರಣ ಪ್ರವೃತ್ತಿ ಇನ್ನೂ ಶೀಘ್ರವಾಗಿ ಮುಂದುವರಿಯುತ್ತಿದೆ.

ಅಭಿವೃದ್ಧಿ ಹೊಂದಿರುವ ದೇಶಗಳಿಗೆ ಹೋಲಿಸಿದರೆ ಭಾರತ ಹಾಗೂ ಇತರ ಮುಂದುವರಿಯುತ್ತಿರುವ ದೇಶಗಳಲ್ಲಿ ಈ ಪ್ರವೃತ್ತಿ ಈಗತಾನೇ ಪ್ರಾರಂಭವಾಗುತ್ತಿದೆ ಎನ್ನಬಹುದು. ಆದರೆ, ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಒಟ್ಟು ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳುವುದಾದರೆ, ಭಾರತದಲ್ಲಿ 1971 ರ ಜನಗಣತಿ ಪ್ರಕಾರ ನಗರವಾಸಿಗಳ ಒಟ್ಟು ಜನಸಂಖ್ಯೆ 110 ದಶಲಕ್ಷ ಅಂದರೆ 11 ಕೋಟಿ. ಈ ಸಂಖ್ಯೆ 1988ರ

ವೇಳೆಗೆ ಸುಮಾರು 20 ಕೋಟಿ ಆಗಬಹುದೆಂದು ಉತ್ಪ್ರೇಕ್ಷೆಯಿಲ್ಲದ ಲೆಖ್ಖಾಚಾರದಿಂದ ತಿಳಿದು ಬಂದಿದೆ. ಇಪ್ಪತ್ತು ಕೋಟಿ ಜನರು ಭಾರತದ ನಗರ ಪ್ರದೇಶಗಳಲ್ಲಿ ವಾಸಿಸಬೇಕಾದರೆ ನಾವು ಎದುರಿಸಬೇಕಾದ ಸಮಸ್ಯೆ ಅಷ್ಟಿಷ್ಟಲ್ಲ. ಈ ಜನಸಂಖ್ಯೆಯ ಬೃಹತ್ ಗಾತ್ರವೇನೆಂಬುದನ್ನು ಅರಿಯಬೇಕಾದುದು ಇಲ್ಲಿ ಸಂದರ್ಭೋಚಿತ. ಇಪ್ಪತ್ತು ಕೋಟಿ ಜನಸಂಖ್ಯೆ ಎಂದರೆ 1961ರಲ್ಲಿ ಭಾರತದ ಪಟ್ಟಣಗಳಲ್ಲಿ ವಾಸವಾಗಿದ್ದ ಸಂಖ್ಯೆಯ ಎರಡೂವರೆಯಷ್ಟು ಮಾತ್ರವಲ್ಲ, ಇದು ಹೆಚ್ಚು ಕಡಿಮೆ ಅಮೇರಿಕಾ ಸಂಯುಕ್ತ ಸಂಸ್ಥಾನದ ಈಗಿನ ಒಟ್ಟು ಜನಸಂಖ್ಯೆಯಷ್ಟು ಅಥವಾ ಬ್ರಿಟಿಷ್ ಚಕ್ರಾಧಿಪತ್ಯ, ಫ್ರಾನ್ಸ್, ಪಶ್ಚಿಮ ಜರ್ಮನಿ ಮತ್ತು ಇಟಲಿ–ಇವುಗಳ ಒಟ್ಟು ಜನಸಂಖ್ಯೆಗಿಂತ ಕೊಂಚ ಕಡಿಮೆ. ಅಂದಮೇಲೆ ಭಾರತವು ಮುಂದೆ ಎದುರಿಸಬೇಕಾದ ನಗರ ಸಮಸ್ಯೆಗಳು ಅತಿ ಜಟಿಲ.

ಹೀಗಿದ್ದರೂ, ಶೇಕಡಾವಾರು ಸಂಖ್ಯೆಗಳನ್ನು ಪರಿಗಣಿಸಿದರೆ, ಭಾರತದಲ್ಲಿ ನೂರಕ್ಕೆ ಇಪ್ಪತ್ತರಷ್ಟು ಜನರು ಮಾತ್ರ ನಗರವಾಸಿಗಳು. ಇತರ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಅಂಕಿಅಂಶಗಳಿಗೆ ಹೋಲಿಸಿದರೆ ಇದು ಬಹಳ ಕಡಿಮೆಯೆಂದು ಕಂಡು ಬರುವುದೇನೋ ನಿಜ; ಆದರೆ, ನಗರಗಳಲ್ಲಿ ವಾಸಿಸುವವರ ಒಟ್ಟು ಸಂಖ್ಯೆಯನ್ನು ಪರಿಗಣಿಸಿದರೆ ಈ ಶತಮಾನದ ಅಂತ್ಯದ ವೇಳೆಗೆ ಇಲ್ಲಿನ ನಗರ ವಾಸಿಗಳ ಸಂಖ್ಯೆ ಇತರ ಯಾವುದೇ ದೇಶದ ನಗರವಾಸಿಗಳ ಸಂಖ್ಯೆಯನ್ನೂ ಮೀರಿಸುವುದು. ಇದರಿಂದ ಮಾನವನು ಹಿಂದೆಂದೂ ಎದುರಿಸಿರದಂತಹ ಸಮಸ್ಯೆಗಳನ್ನು ನಾವು ಮುಂದೆ ಎದುರಿಸಬೇಕಾಗುವುದು ಎಂಬುದು ಸ್ಪಷ್ಟವಾಗುತ್ತದೆ. ಈ ಶತಮಾನದ ಅಂತ್ಯದ ವೇಳೆಗೆ ಈಗಿರುವ 11 ಕೋಟಿ ಜನರ ಜೊತೆಗೆ ಮತ್ತೆ 15 ಕೋಟಿ ಜನರು ನಗರಗಳಲ್ಲಿ ವಾಸಿಸುವರೆಂದಾದರೆ, ಇವರಿಗೆ ವಸತಿ ಒದಗಿಸಲು ಈಗ ಇರುವ ಪಟ್ಟಣಗಳು ಬೆಳೆಯಬೇಕಷ್ಟೇ ಅಲ್ಲದೆ, ಹಲವಾರು ಹೊಸ ನಗರಗಳ ನಿರ್ಮಾಣವಾಗಬೇಕಾಗುತ್ತದೆ. ಕೆಲವು ದೊಡ್ಡ ಗ್ರಾಮಗಳೂ ಕೂಡ ನಗರಗಳಾಗಬಹುದು. ಪ್ರತಿಯೊಂದು ಹೊಸಪಟ್ಟಣದಲ್ಲೂ 5 ಲಕ್ಷ ಜನರು ವಾಸಿಸುತ್ತಾರೆಂದು ಪರಿಗಣಿಸಿದರೂ ಸುಮಾರು 300 ಹೊಸ 'ಮೈಸೂರು ನಗರ'ಗಳ ನಿರ್ಮಾಣವಾಗಬೇಕಾಗುತ್ತದೆ. ಹೊಸ ನಗರಗಳಲ್ಲಿ ಜನರವಾಸಕ್ಕೆ

ಅವಶ್ಯವಿರುವ ಅನುಕೂಲಗಳನ್ನೆಲ್ಲಾ ಒದಗಿಸಲು ಪ್ರತಿ ವ್ಯಕ್ತಿಗೆ ಸುಮಾರು 5000 ರೂಪಾಯಿಗಳಾದರೂ ಬೇಕಾಗಬಹುದೆಂದು ತಜ್ಞರು ಲೆಖ್ಖಹಾಕಿದ್ದಾರೆ. ಈ ಅಂದಾಜುಗಳನ್ವಯ ಮುಂದೆ ಹೆಚ್ಚುವ 15 ಕೋಟ ಜನರಿಗಾಗಿಯೇ ನಗರಗಳಲ್ಲಿ 75.000 ಕೋಟಿ ರೂಪಾಯಿ ವೆಚ್ಚ ಮಾಡಬೇಕಾಗುವುದು. ಇದರ ಜೊತೆಗೆ ಹಾಲಿ ಇರುವ ನಗರಗಳನ್ನು ಜನರ ವಾಸಕ್ಕೆ ಯೋಗ್ಯವಾಗುವಂತೆ ಮಾಡಲು ಮತ್ತೆ 25,000 ಕೋಟಿ ರೂಪಾಯಿ ಬೇಕಾಗಬಹುದು.

ಇಷ್ಟೇ ಅಲ್ಲದೆ ಗ್ರಾಮಂತರ ಪ್ರದೇಶಗಳ ಜನರ ವಾಸದ ಅನುಕೂಲಕ್ಕೆ ಬೇಕಾಗುವ ಅಭಿವೃದ್ಧಿಕಾರ್ಯಗಳಿಗಾಗಿ ಪ್ರತ್ಯೇಕ ವೆಚ್ಚ ಅವಶ್ಯ. ಮುಂದಿನ 25 ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವವರ ಸಂಖ್ಯೆ ಸುಮಾರು 50 ಕೋಟಿಗಳಷ್ಟಾಗಲಿದ್ದು ಹಳ್ಳಿಗಳ ಯೋಜಿತ ಅಭಿವೃದ್ಧಿಗಾಗಿ ಇನ್ನೂ 50,000 ಕೋಟಿ ರೂಪಾಯಿಗಳನ್ನು ಆ ಅವಧಿಯೊಳಗೆ ದೇಶವು ಖರ್ಚುಮಾಡಬೇಕಾಗುತ್ತದೆ. ದೇಶದ ಅಭಿವೃದ್ಧಿಗೆ ಕೈಗಾರಿಕೆಗಳು ಅವಶ್ಯ; ಕೈಗಾರಿಕೆಗಳ ಬೆಳವಣಿಗೆಗೆ ಮತ್ತು ಅವುಗಳ ಉತ್ಪಾದನೆಯ ವಿತರಣೆ ಹಾಗೂ ಬಳಕೆಗೆ ನಗರಗಳು ಮತ್ತು ಗ್ರಾಮಗಳು ಇರಲೇಬೇಕು. ಹೀಗಿರುವಾಗ, ನಗರ ಮತ್ತು ಗ್ರಾಮಗಳ ಸಮಸ್ಯೆಗಳನ್ನು ನಾವು ಯೋಚಿತ ರೀತಿಯಲ್ಲಿ ಅರ್ಥಮಾಡಿಕೊಂಡು ಅವುಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳದೆ ನಿರ್ವಾಹವಿಲ್ಲ.

ಇವೆಲ್ಲವು ಹಿಂದಿನ ಮತ್ತು ಈ ಶತಮಾನದ ಅಂತ್ಯದ ವರೆಗಿನ ನಗರಗಳ ಸಮೀಕ್ಷೆಯಾಯಿತು. ಈಗ ಮುಂದಿನ ನಗರಗಳ ರೀತಿ ಹಾಗೂ ಇತಿ ಮಿತಿಗಳನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸೋಣ. ಈ ಕಾರ್ಯ ಅಷ್ಟೇನು ಸುಲಭವಲ್ಲ;ಮುಂದಿನ ಶತಮಾನಗಳ ಮಾನವನ ರೀತಿ, ನೀತಿಗಳನ್ನು ಇದು ಅವಲಂಬಿಸುತ್ತದೆ. ವಿಜ್ಞಾನ, ಕೈಗಾರಿಕೆ ಹಾಗೂ ಯಂತ್ರ ಕಲೆಯಲ್ಲಿ ಮಾನವನ ಪ್ರಗತಿ ಮತ್ತು ಸಾಮಾಜಿಕ ಜೀವನ ವಿಧಾನ ಇವೂ ಕೂಡ ಈ ಸಂಬಂಧವಾಗಿ ಮಹತ್ವಪೂರ್ಣ ಪಾತ್ರವಹಿಸುತ್ತವೆ. ಈ ಕುರಿತು ವಿಶೇಷ ವಿವರಗಳಿಗೆ ಹೋಗದೆ ಹಾಲಿ ಪ್ರವೃತ್ತಿಗಳನ್ನು ಪರಿಶೀಲಿಸಿ, ನಾವು ಕೆಲವು ತೀರ್ಮಾನಗಳಿಗೆ ಬರುವ ದಿಶೆಯಲ್ಲಿ ಆಲೋಚನೆ ಅಗತ್ಯ.

1.ಹೊಸನಗರಗಳ ನಿರ್ಮಾಣ : ಈಗಾಗಲೇ ಹೇಳಿರುವಂತೆ ಕೈಗಾರಿಕಾ-ಕರಣ, ತತ್ಫಲವಾಗಿ ನಗರೀಕರಣ ಹೆಚ್ಚಿದಂತೆಲ್ಲಾ ಹೊಸ ನಗರಗಳ ನಿರ್ಮಾಣ ಅತ್ಯಗತ್ಯ. ಹೀಗೆ ಅಸ್ತಿತ್ವಕ್ಕೆ ಬರುವ ಹೊಸ ನಗರಗಳು ಕೆಲವು ಉದ್ದೇಶಗಳಿಂದ–ಕೈಗಾರಿಕೆ, ಪ್ರಮುಖ ಉತ್ಪಾದನಾ ಕೇಂದ್ರ, ಹೊಸ ರಾಜಧಾನಿಗಳು, ಬಂದರುಗಳು, ಸೈನ್ಯ–ಮುಂತಾದವುಗಳಿಗಾಗಿ ನಿರ್ಮಾಣ ವಾಗುತ್ತವೆ. ಅಂತಹ ಹೊಸ ಚಟುವಟಿಕೆಗಳು ಏರ್ಪಡುವ ಪ್ರದೇಶಗಳಲ್ಲಿ ಸಣ್ಣಪುಟ್ಟ ಗ್ರಾಮಗಳು ಅಥವಾ ಪಟ್ಟಣಗಳಿದ್ದರೆ ಅವುಗಳನ್ನೇ ಬಳಸಿ ಕೊಂಡು ಈ ನಗರಗಳನ್ನು ಕಟ್ಟಬೇಕು. ಈ ಶತಮಾನದಲ್ಲೇ ಅಂತಹ ಅನೇಕ ನಗರಗಳ ನಿರ್ಮಾಣವಾಗಿದೆ. ಭಾರತದ ವಿವಿಧರಾಜ್ಯಗಳಲ್ಲಿ ನಿರ್ಮಾಣವಾಗಿರುವ ಇಂತಹ ಕೆಲವು ನಗರಗಳಲ್ಲಿ ಮುಖ್ಯವಾದವುಗಳೆಂದರೆ ಚಂದೀಘರ್, ಗಾಂಧಿನಗರ, ಭಿಲಾಯ್, ಭುವನೇಶ್ವರ, ದುರ್ಗಾಪುರ, ನೈವೇಲಿ, ಜಮ್ಷೆಡ್‌ಪುರ, ಕೋಲಾರದ ಚಿನ್ನದಗಣಿ ನಗರ, ಭದ್ರಾವತಿ, ಮತ್ತು ದಾಂಡೇಲಿ ಮುಂತಾದುವುಗಳು. ಇಂತಹ ಹೊಸನಗರಗಳ ನಿರ್ಮಾಣ ಮುಂದಿನ ತಲೆಮಾರುಗಳಲ್ಲಿ ಇನ್ನೂ ಹೆಚ್ಚಾಗಿ ಆಗಲೇಬೇಕಾಗುತ್ತದೆ ಎಂಬುದು ಸ್ಪಷ್ಟವಾಗಿದೆ. ಈ ದಿಶೆಯಲ್ಲಿ ಬ್ರಿಟಿಷ್ ಚಕ್ರಾಧಿಪತ್ಯ ಬಹಳ ಸೂಕ್ತ ಮಾರ್ಗದರ್ಶನ ಮಾಡಿದೆ. ಭಾರೀ ನಗರಗಳ ಹೊರವಲಯದಲ್ಲಿ ಮುಂದಕ್ಕೆ ವಲಸೆ ಬರಬಹುದಾದ ಜನರನ್ನು ನೆಲೆಗೊಳಿಸಲು ಮತ್ತು ಕಿಷ್ಕಿಂದ ಪರಿಸ್ಥಿತಿಯಲ್ಲಿರುವ ಬೃಹತ್ ನಗರಗಳಿಂದ ಕೆಲವು ದೊಡ್ಡ ಕೈಗಾರಿಕೆಗಳನ್ನೂ ಸಂಸಾರಗಳನ್ನೂ ಸ್ಥಳಾಂತರಿಸಲು ದಿಟ್ಟ ಕಾರ್ಯಕ್ರಮ ವೊಂದನ್ನು ಅಲ್ಲಿ 1946 ರಿಂದಲೇ ಕೈಗೊಳ್ಳಲಾಗಿದೆ. ಇದರ ಪರಿಣಾಮವೇ ಸ್ಟೀವನೇಜ್, ಕ್ರಾಲೆ, ಹಾರ್ಲೋ, ಮಿಲ್ಟನ್ ಕೇನ್ಸ್, ನಾರ್ತ್ಯಾಂಪ್ಟನ್, ವಾರಿಂಗ್‌ಟನ್ ಮುಂತಾದ 30 ಹೊಸ ಪಟ್ಟಣಗಳ ಸ್ಥಾಪನೆಯ ಕಾರ್ಯ, ನಗರ ಯೋಜನಾ ಕ್ಷೇತ್ರದಲ್ಲಿ ಹೊಸ ಮಾರ್ಗವನ್ನೇ ತೋರಿಸಿದೆ. ಇತರ ದೇಶಗಳಲ್ಲೂ ಇಂತಹ ಹೆಚ್ಚಿನ ಪ್ರಯತ್ನ ಅಗತ್ಯ. ಆದರೆ, ಇವುಗಳಿಗಾಗಿ ಒಂದು ಯೋಜಿತ ಕಾರ್ಯಕ್ರಮವನ್ನು ಮಾತ್ರ ನಮ್ಮ ದೇಶ ಇನ್ನೂ ಹೊಂದಿಲ್ಲ. ಆದಕಾರಣ, ಹೊಸನಗರಗಳ ನಿರ್ಮಾಣ ಹಾಗೂ ಬೆಳವಣಿಗೆಯ ವಿವಿಧ ವಿಷಯಗಳಿಗೆ ಸಂಬಂಧಿಸಿದ ವ್ಯಾಪಕ ಕಾರ್ಯಕ್ರಮ

ವೊಂದನ್ನು ವಿಳಂಬವಿಲ್ಲದೆ ಜಾರಿಗೆ ತರಬೇಕಾದುದು ಅತ್ಯಾವಶ್ಯಕ.

ಎರಡನೇ ಮಹಾಯುದ್ಧದಿಂದ ನಗರಗಳು ಧ್ವಂಸಮಾಡಲ್ಪಡುತ್ತಿರುವಾಗ ಅವುಗಳ ಪುನರುಜ್ಜೀವನಕ್ಕೆ ಹಾಗೂ ಹೊಸನಗರಗಳ ನಿರ್ಮಾಣಕ್ಕೆ ಬ್ರಿಟಿಷ್ ನಗರಯೋಜಕರು ಯೋಜನೆಗಳನ್ನು ತಯಾರಿಸುತ್ತಾ ಬಂದರು. ಯುದ್ಧಮುಗಿದ ಕೂಡಲೇ ಆ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾರಂಭಿಸಿ, ಅಗಾಧ ಸಾಧನೆಗಳನ್ನು ಕೈಗೂಡಿಸಿದ್ದಾರೆ. ಭಾರತದ ಅನೇಕ ನಗರಗಳೂ ಸಹ ಆಗಿಂದಾಗ್ಗೆ ವಿಮಾನಧಾಳಿಗೆ ಮತ್ತು ಪ್ರಕೃತಿ ಕೋಪಕ್ಕೆ ತುತ್ತಾಗುತ್ತಿವೆ. ಇಂತಹ ಸಂದರ್ಭಗಳಲ್ಲಿ ನಗರಗಳನ್ನು ರಕ್ಷಿಸಲು ಮತ್ತು ವಿಮಾನಧಾಳಿಯಿಂದ, ಅದರಲ್ಲೂ ಅಣುಬಾಂಬುಧಾಳಿಯಿಂದ ಆಗಬಹುದಾದ ನಷ್ಟವನ್ನು ಸಾಧ್ಯವಿರುವಷ್ಟು ಕನಿಷ್ಟ ಮಿತಿಗಿಳಿಸಲು ಅವಶ್ಯವಿರುವ ಕ್ರಮಗಳನ್ನು ಕುರಿತು, ನಗರ ಯೋಜಕರು ಸರಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡಬೇಕಾಗಿದೆ. ಈ ಸಂಬಂಧವಾಗಿ ನಿರ್ಧಾರಗಳನ್ನು ಕೈಗೊಳ್ಳುವ ಸ್ಥಾನದಲ್ಲಿರುವವರು, ಅಂತಹ ಸಲಹೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ಕಾರ್ಯಕ್ರಮಗಳನ್ನು ವಿಳಂಬವಿಲ್ಲದೆ ಜಾರಿಗೆ ತರಬೇಕಾದದ್ದು ಅತಿ ಮುಖ್ಯ. ವಿಳಂಬವಾದಷ್ಟೂ ಸಮಸ್ಯೆಗಳು ಉಲ್ಬಣಗೊಂಡು ಮುಂದಿನ ಪೀಳಿಗೆಗಳು ಹಲವಾರು ತೊಂದರೆಗಳಿಗೆ ಈಡಾಗುತ್ತವೆ.

2. ಪ್ರಾದೇಶಿಕ ಯೋಜನೆ: ಹೊಸ ನಗರಗಳ ನಿರ್ಮಾಣಕ್ಕಿರುವ ಕಾರಣಗಳು ಮೇಲೆ ತಿಳಿಸಿದಂತೆ ಅನೇಕ. ಇಂತಹ ಅಭಿವೃದ್ಧಿ ಕೆಲಸಗಳಲ್ಲಿ ಪರಸ್ಪರ ಸಮನ್ವಯವಿಲ್ಲದೇ ಹೋದರೆ ಅದರಿಂದ ಸಮಾಜಕ್ಕೆ ಹಲವಾರು ತೊಂದರೆಗಳು ಉಂಟಾಗುತ್ತವೆ. ಆದಕಾರಣ ದೇಶದ ಸಮಗ್ರ ದೃಷ್ಟಿಯನ್ನು ಇಟ್ಟುಕೊಂಡು ಪ್ರಾದೇಶಿಕ ಅಸಮಾನತೆಗೆ ಅವಕಾಶವಾಗದಂತೆ ಪ್ರತಿ ರಾಜ್ಯವೂ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಈ ಕ್ರಮವನ್ನು ತಜ್ಞರು ಪ್ರಾದೇಶಿಕ ಯೋಜನಾ ವಿಧಾನ (Regional Planning) ಎಂದು ಕರೆಯುತ್ತಾರೆ.

ಈ ವಿಧಾನವನ್ನನುಸರಿಸಿ ಪ್ರತಿಯೊಂದು ಪ್ರದೇಶದ ಆವಶ್ಯಕತೆಗಳ ಪೂರೈಕೆಗೆ ಮತ್ತು ಸಂಪನ್ಮೂಲಗಳ ಅಭಿವೃದ್ಧಿಗೆ ಅಗತ್ಯವಿರುವ ಪ್ರಾದೇಶಿಕ ಯೋಜನೆಗಳನ್ನು ತಯಾರಿಸಿ ಅದರಲ್ಲಿ ಮುಂದಕ್ಕೆ ಅಭಿವೃದ್ಧಿಯಾಗುವ

ಹೊಸ ಗ್ರಾಮ ಮತ್ತು ಪಟ್ಟಣಗಳ ನಿವೇಶನಗಳನ್ನು ಗುರುತಿಸಿ, ಅಲ್ಲಿಗೆ ಬೇಕಾಗುವ ಸಂಚಾರ ಮತ್ತು ಆಧುನಿಕ ಸೌಲಭ್ಯಗಳ ವಿವರಗಳನ್ನು ಒದಗಿಸಬೇಕು. ಈ ಯೋಜನೆಯನ್ನು ಕಾರ್ಯಗತಗೊಳಿಸಿ ಹೊಸ ನಗರಗಳನ್ನು ನಿರ್ಮಿಸಲು ಈಗಿರುವ ಸಂಸ್ಥೆಗಳು ಹೆಚ್ಚು ಪ್ರಯೋಜನಕ್ಕೆ ಬಾರದ ಕಾರಣ ಹೊಸ ನಗರನಿರ್ಮಾಣ ಮಂಡಲಿಗಳನ್ನಾಗಲೀ ಮತ್ತಾವ ಸೂಕ್ತ ಸಂಸ್ಥೆಗಳನ್ನಾಗಲೀ ರಚಿಸಿ ಅವುಗಳಿಗೆ ಹಣ ಮತ್ತು ತಾಂತ್ರಿಕ ಬೆಂಬಲವನ್ನು ಸರ್ಕಾರ ಒದಗಿಸಬೇಕು. ಪ್ರತಿಯೊಂದು ಇಲಾಖೆಯೂ ಪ್ರಾದೇಶಿಕವಾಗಿ ತನ್ನದೇ ಆದ ತೀರ್ಮಾನಗಳನ್ವಯ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳದೆ, ಸಮಗ್ರ ದೃಷ್ಟಿಯಿಂದ ಕೈಗೊಳ್ಳುವ ತೀರ್ಮಾನಗಳನ್ನು ಎಲ್ಲಾ ಇಲಾಖೆಗಳೂ, ಸ್ಥಳೀಯ ಸಂಸ್ಥೆಗಳೂ ಅನುಸರಿಸುವಂತಾಗಲು ಈಗಿರುವ ಕಾನೂನುಗಳಲ್ಲಿ ಸೂಕ್ತ ಬದಲಾವಣೆ ಆಗಬೇಕು. ಸಾರ್ವಜನಿಕರೂ, ಅಧಿಕಾರಿಗಳೂ ಕೂಡ ಅಂತಹ ವ್ಯವಸ್ಥೆಗೆ ಹೊಂದಿಕೊಂಡು ಸಹಕರಿಸುವುದು ಅಗತ್ಯ.

3. ನಗರ ರಚನಾ ವಿಧಾನ: ನಗರಗಳ ಅಭಿವೃದ್ಧಿಯ ಪ್ರಚಲಿತ ಪ್ರವೃತ್ತಿಯನ್ನು ಗಮನಿಸಿದರೆ ಮುಂದಿನ ನಗರಗಳು ಇನ್ನೂ ಅನೇಕ ವರ್ಷಗಳಕಾಲ ಇಂದಿನ ನಗರಗಳ ಬಡಾವಣೆಗಳಂತೆ ಇರಬಹುದೇ ಹೊರತು, ಹೇಳಿಕೊಳ್ಳುವಂತಹ ಆಶ್ಚರ್ಯಕರ ಬದಲಾವಣೆಗಳೇನೂ ಆಗಲಾರವು ಎಂಬುದು ಖಚಿತ. ಈಗ ಅಭಿವೃದ್ಧಿ ಹೊಂದುತ್ತಿರುವ ದೇಶಗಳು, ಮುಂದುವರಿದಿರುವ ದೇಶಗಳಲ್ಲಿ ಅನುಸರಿಸುತ್ತಿರುವ ಕೆಲವೊಂದು ಕ್ರಮಗಳನ್ನು ಅನುಕರಣೆ ಮಾಡುವ ಹವ್ಯಾಸ ಮುಂದುವರಿಯುವುದು ಸ್ವಾಭಾವಿಕ. ಕೆಲವು ಮಂದಿ ಬುದ್ಧಿಮತಿಗಳೂ. ದೂರದರ್ಶಿಗಳೂ ತಂತಮ್ಮ ದೇಶಗಳ ಸಂಸ್ಕೃತಿ ಹಾಗೂ ಜೀವನಕ್ರಮಗಳಿಗೆ ಹೊಂದುವರೀತಿಯಲ್ಲಿ ನಗರ ರಚನೆಯಾಗಬೇಕೆಂದು ಒತ್ತಾಯಿಸುವುದೂ ಸಾಧ್ಯ. ಆದರೆ ನಗರಗಳ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಬೇಕೆಂದಿದ್ದರೆ ಹಳೆಯ ವಿಧಾನಗಳಿಗೇ ಅಂಟಿಕೊಳ್ಳದೆ, ಹೊಸ ಸೂತ್ರಗಳನ್ನು ಅನುಸರಿಸಿ ಮುಂದುವರಿಯಬೇಕಾಗಿರುವುದು ಅನಿವಾರ್ಯ. ಹಾಗೆ ಮಾಡುವಾಗ ಮುಂದುವರಿದ ದೇಶಗಳು ಅನುಸರಿಸಿದ ಎಲ್ಲ ವಿಧಾನಗಳನ್ನೂ ಕಣ್ಣುಮುಚ್ಚಿಕೊಂಡು ಅನುಸರಿಸದೆ ಅವರು ಮಾಡಿದ ತಪ್ಪುಗಳಿಂದ ಪಾಠಕಲಿತು ಅಂತಹ ತಪ್ಪುಗಳು ನಮ್ಮಿಂದಾಗದಂತೆ


ಮುನ್ನೆಚ್ಚರಿಕೆಯಿಂದ ವರ್ತಿಸಿದರೆ, ಸಮಸ್ಯೆಗಳ ನಿವಾರಣಾ ಧ್ಯೇಯಸಾಧನೆಗೆ ಅನುಕೂಲವಾಗುವುದು.

ಹೀಗೆ ಮುಂದುವರಿದಂತೆ, ಜನರ ಜೀವನ ಕ್ರಮದಲ್ಲೂ ಕೆಲವು ಬದಲಾವಣೆಗಳು ಅಗತ್ಯವಾಗುತ್ತವೆ. ವ್ಯವಸಾಯವನ್ನೇ ನಂಬಿರುವ ದೇಶಗಳಲ್ಲೂ ಅನೇಕರು ವ್ಯವಸಾಯೇತರ ಕಸಬುಗಳನ್ನು ಅನುಸರಿಸುತ್ತಾರೆ. ಉದ್ಯೋಗದಲ್ಲಿ ಬದಲಾವಣೆಗಳಾದಂತೆ ಜನರ ಜೀವನ ವಿಧಾನವೂ ಬದಲಾಗುತ್ತದೆ. ದೂರದ ಸ್ಥಳಗಳಿಗೆ ತಲುಪಲು ಕಡಿಮೆ ಅವಧಿ ತಗಲುವುದರಿಂದ ನಗರಗಳ ವಿಸ್ತರಣೆ ಅಧಿಕವಾಗುತ್ತದೆ. ಆದರೆ ನಗರಗಳನ್ನು ಮತ್ತೂ ವಿಸ್ತರಿಸುವ ಬದಲು ಎತ್ತರ ಅಧಿಕವಿರುವ ಕಟ್ಟಡಗಳ ಸಂಖ್ಯೆಯನ್ನು ಹೆಚ್ಚಿಸಿದರೆ, ಇರುವ ಜಮೀನಿನಲ್ಲೇ ಹೆಚ್ಚಿನ ಸ್ಥಳಾವಕಾಶ ಒದಗಿಸಿಕೊಳ್ಳಲು ಸಾಧ್ಯ. ಪ್ರತಿಯೊಂದು ಕುಟುಂಬದವರೂ ಮತ್ತು ಪ್ರತ್ಯೇಕ ಕಟ್ಟಡಗಳಲ್ಲಿ ವಾಸಿಸುವ ರೂಢಿಹೊಂದಿದ್ದವರ ವಂಶಜರೂ, ಆಗ ಗಗನ ಚುಂಬಿಗಳಲ್ಲಿ (Skyscrapers) ಹೆಚ್ಚು ಸಂಸಾರಗಳ ಜೊತೆಗೆ ವಾಸ ಮಾಡುವ ಪರಿಸ್ಥಿತಿ ಬರುತ್ತದೆ. ನಗರಗಳಲ್ಲಿ ಸಂಚಾರ ಸೌಲಭ್ಯಗಳ ವಿಧಾನವೇ ಬದಲಾಗುತ್ತಿರುವುದು ಸ್ವಾಭಾವಿಕವಾಗಿದೆ. ಮೋಟಾರು ವಾಹನಗಳು ನೆಲದಮೇಲೆ ಸಂಚರಿಸುವ ಬದಲು ಸ್ವಲ್ಪ ಮೇಲ್ಮಟ್ಟದಲ್ಲಿ ಸಂಚರಿಸುವ ಸಂಭವವೂ ಉಂಟು (ಚಿತ್ರ 16 ಮತ್ತು 17). ಇದರ ಜೊತೆಗೆ ಭೂಮಿಯ ಒಳಗೂ ಸಂಚಾರ ವ್ಯವಸ್ಥೆ, ವಾಹನ ನಿಲ್ದಾಣ, ಸಾರ್ವಜನಿಕ ಸೌಲಭ್ಯ ಮುಂತಾದುವುಗಳನ್ನು ಏರ್ಪಡಿಸಿ ನಗರಗಳ ಅಗಲವನ್ನು ಕಡಿಮೆ ಮಾಡುವ ಪ್ರಯತ್ನಗಳೂ ನಡೆಯಬೇಕಾಗುತ್ತದೆ. ಸಾರ್ವಜನಿಕ ಕಾರ್ಯಕ್ರಮಗಳು ಹೆಚ್ಚಾಗಿ, ಸಂಚಾರ ವ್ಯವಸ್ಥೆಯಲ್ಲಿ ಹೆಚ್ಚು ಬದಲಾವಣೆಯಾಗುವ ಸಂಭವವಿದೆ. ಭೂ ಬಳಕೆಗೂ ಸಂಚಾರ ವ್ಯವಸ್ಥೆಗೂ ನಿಕಟ ಸಂಬಂಧವಿರುವುದರಿಂದ, ಭೂ ಬಳಕೆಯನ್ನೂ ಸರ್ಕಾರವೇ ನಿಯಂತ್ರಿಸುವ ಪರಿಸ್ಥಿತಿ ಅನಿವಾರ್ಯವೆನಿಸುತ್ತದೆ. ಕಮ್ಯೂನಿಸ್ಟ್ ದೇಶಗಳಲ್ಲಂತೂ ಭೂಮಿಯ ಒಡೆತನದಮೇಲೆ ಸರ್ಕಾರ ಇನ್ನೂ ಬಿಗಿಯಾದ ಹಿಡಿತವನ್ನು ಇಟ್ಟುಕೊಳ್ಳಬಹುದು. ನಗರ ರಚನೆಯಲ್ಲಿ ಸಾರ್ವಜನಿಕರ ಆಸಕ್ತಿ ಹೆಚ್ಚಿ ಸ್ವಂತ ಆಸ್ತಿಯನ್ನು ಕಾಪಾಡಿ

ಕೊಳ್ಳುವಂತೆ, ತಮ್ಮ ನಗರಗಳನ್ನು ಮುಂದಿನ ಪೀಳಿಗೆಯವರು ಕಾಪಾಡುವರೆಂದು ನಂಬಬಹುದು.

4. ನಗರಗಳ ಬೆಳವಣಿಗೆಗೆ ಮಿತಿಯುಂಟೆ? ನಗರದಿಂದ ನಗರಕ್ಕೆ, ಹಳ್ಳಿಯಿಂದ ಪಟ್ಟಣಕ್ಕೆ ವಲಸೆ ಹೋಗುವುದನ್ನು ತಡೆಯಬಹುದಾದರೆ ನಗರಗಳ ಅಡತಡೆಯಿಲ್ಲದ ಬೆಳವಣಿಗೆಯನ್ನು ತಡೆಯಬಹುದು. ಅದು ಸಾಧ್ಯವಾಗಬೇಕಾದರೆ ಜನರೆಲ್ಲಾ ಅಂತಹ ನಿರ್ಬಂಧಕ್ಕೆ ಒಪ್ಪಬೇಕಾಗುತ್ತದೆ. ಪ್ರಜಾಸತ್ತಾತ್ಮಕ ಸರ್ಕಾರಗಳಿಗಿರುವ ದೇಶಗಳಲ್ಲಿ ಇದು ಬಲು ಕಠಿಣ. ಕಮ್ಯೂನಿಷ್ಟ್ ದೇಶಗಳಲ್ಲಿ ಇದು ಸುಲಭ. ಉದಾಹರಣೆಗೆ, ಆ ರಾಷ್ಟ್ರಗಳಲ್ಲಿ ನಗರಗಳಿಗೆ ವಲಸೆ ಹೋಗಬೇಕಾದರೆ ಅನುಮತಿ ಪತ್ರವನ್ನು ಸರಕಾರದಿಂದ ಪಡೆಯಬೇಕು. ರಷ್ಯಾದೇಶದ ರಾಜಧಾನಿಯಾದ ಮಾಸ್ಕೋ ನಗರದ ಬೆಳವಣಿಗೆಯನ್ನು ಮಿತಿಯಲ್ಲಿಡಲು ಯೋಜನೆ ತಯಾರಿಸಿ ಅಲ್ಲಿಗೆ ವಲಸೆಯನ್ನು ನಿರ್ಬಂಧಿಸಿ, ಸುತ್ತಲೂ ಹೊಸ ನಗರಗಳ ಬೆಳವಣಿಗೆಗೆ ಪ್ರೋತ್ಸಾಹ ಕೊಡಲಾಗುತ್ತಿದೆ. ಕ್ಯೂಬಾದ ರಾಜಧಾನಿ ಹವಾನ ನಗರಕ್ಕೆ ಬಂದು ನೆಲೆಸಲು ಯಾರಿಗೂ ಅಪ್ಪಣೆ ಇಲ್ಲ; ಅಲ್ಲಿನ ಕಟ್ಟಡಗಳನ್ನು ದುರಸ್ತು ಮಾಡಲೂ, ಹೊಸಕಟ್ಟಡಗಳನ್ನು ಕಟ್ಟಲೂ ಅವಕಾಶವೇ ಇಲ್ಲದಂತೆ ಮಾಡಿ, ಗ್ರಾಮಾಂತರ ಪ್ರದೇಶಕ್ಕೆ ಜನರು ಮರಳುವಂತೆ ಮಾಡುವ ಪ್ರಯತ್ನವನ್ನು ಅಲ್ಲಿನ ಸರ್ಕಾರ ಅನುಸರಿಸುತ್ತಿದೆ. ಇವು ನೈಜ ಬೆಳವಣಿಗೆಗೆ ಪ್ರೋತ್ಸಾಹ ಕೊಡುವ ಯೋಜನೆಗಳಾಗದಿದ್ದರೆ ಹೊಸ ಸಮಸ್ಯೆಗಳು ಉದ್ಭವಿಸುವುವು.

ಪ್ರಜಾಸತ್ತಾತ್ಮಕ ಸರಕಾರವಿರುವ ದೇಶಗಳಲ್ಲಿ ಅನೇಕರು ನಗರ ಯೋಜನೆಯ ವಿಷಯಗಳಲ್ಲಿ ಸುದೀರ್ಘ ಅಲೋಚನೆ ಮಾಡಿದ್ದಾರೆ. ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಈ ಶತಮಾನದ ಪ್ರಾರಂಭದಿಂದಲೂ ಒಂದಲ್ಲ ಒಂದು ರೀತಿಯ ಪ್ರಯೋಗ ಈ ದಿಶೆಯಲ್ಲಿ ನಡೆದೇ ಇದೆ. ಇದರ ಫಲವಾಗಿ, ಈ ಹಿಂದೆ ತಿಳಿಸಿದಂತೆ, ಬೃಹತ್ ನಗರಗಳ ಹೊರವಲಯಗಳಲ್ಲಿ ಹೊಸ ನಗರಗಳ ನಿರ್ಮಾಣ, ಪ್ರಾಂತೀಯ ಕೇಂದ್ರಗಳು ಆಕರ್ಷಕವಾಗಿ ಬೆಳೆಯಲು ಉತ್ತೇಜನ—ಮುಂತಾದ ಕಾರ್ಯಕ್ರಮಗಳು ಏರ್ಪಟ್ಟವು. 1971ರ ಜನಗಣತಿಪ್ರಕಾರ ಲಂಡನ್ ನಗರ ಪ್ರದೇಶದ ಜನಸಂಖ್ಯೆ 1960 ರಲ್ಲಿದ್ದ ಜನಸಂಖ್ಯೆಗಿಂತ 12 ಲಕ್ಷದಷ್ಟು ಕಡಿಮೆಯಾಗಿದೆ ಎಂದು ವರದಿಯಾಗಿದೆ.




A. ಟೋಕಿಯೋ ನಗರದ ಮಾನೋ ರೈಲಿನ ಒಂದು ದೃಶ್ಯ.



B. ಫ್ರಾನ್ಸ್ ದೇಶದ ಆರ್ಲಿಯನ್ಸ್ ಬಳಿ ಪರೀಕ್ಷಾರ್ಥವಾಗಿ ನಿರ್ಮಿಸಿರುವ ತೂಗು ಮಾನೋ ರೈಲಿನ ಚಿತ್ರ.

ಚಿತ್ರ ೧೩. ಬೃಹತ್ ನಗರಗಳ ಸಾರಿಗೆ ಸೌಲಭ್ಯಕ್ಕಾಗಿ ಮಾನೋರೈಲುಗಳು.



ಚಿತ್ರ ೧೪. ನಿರ್ದಿಷ್ಟ ಪಥದಲ್ಲಿ ಭೂಮಿಗಿಂತ ೨ ಸೆಂ. ಮೀ. ಮೇಲೆ ಪ್ರತಿ ಗಂಟೆಗೂ ೪೮೦ ಕಿ. ಮೀ. ವೇಗದಲ್ಲಿ ಹಾರುವಂತೆ ಅಮೇರಿಕಾದ ಜನರಲ್ ಎಲಕ್ಟ್ರಿಕ್ ಕಂಪೆನಿಯುವರು ಸಂಶೋಧಿಸುತ್ತಿರುವ ಟ್ರ್ಯಾಕ್ಡ್ ಏರ್ ಕುಷನ್ ರಿಸರ್ಚ್ ವಾಹನದ ಮಾದರಿ.

ಹಾಗೆಯೇ ಲಿವರ್‌ಪೂಲ್ ಮುಂತಾದ ನಗರಗಳಲ್ಲೂ ಜನಸಂಖ್ಯೆ ಕಡಿಮೆಯಾಗಿ ಸುತ್ತಲಿನ ಉಪನಗರಗಳಲ್ಲಿ ಜನಸಂಖ್ಯೆ ಏರುತ್ತಿರುವುದು ಕಂಡುಬಂದಿದೆ. ಇದೊಂದು ಶುಭಸೂಚನೆ. ಇದೆಲ್ಲ ಅಲ್ಲಿನ ಸರ್ಕಾರ ನಗರಗಳ ಬೆಳವಣಿಗೆಯ ವಿಷಯವಾಗಿ ಒಂದು ನಿಶ್ಚಿತತತ್ತ್ವವನ್ನು ಅನುಸರಿಸುತ್ತಿರುವುದರ ಪರಿಣಾಮ

ತದ್ವಿರುದ್ಧವಾಗಿ ಅಮೆರಿಕಾ ಸಂಯುಕ್ತ ಸಂಸ್ಥಾನ, ಜಪಾನ್ ಮುಂತಾದ ರಾಷ್ಟ್ರಗಳಲ್ಲಿ ಕೆಲವು ಬೃಹತ್ ನಗರಗಳು ಅಡೆ ತಡೆಯಿಲ್ಲದೆ ಬೆಳೆದು ನೂರಾರು ಮೈಲಿಗಳ ವರೆಗೆ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿವೆ. ಸಣ್ಣ ಮೀನನ್ನು ದೊಡ್ಡ ಮೀನು ನುಂಗುವ ರೀತಿಯಲ್ಲಿ ಸಣ್ಣ ಪುಟ್ಟ ನಗರಗಳನ್ನೂ, ಗ್ರಾಮಗಳನ್ನೂ ಈ ಬೃಹತ್ ನಗರಗಳು ಆವರಿಸಿಕೊಂಡು ಸಣ್ಣ ನಗರಗಳ ವ್ಯಕ್ತಿತ್ವವನ್ನೇ ನಾಶಮಾಡುತ್ತಿವೆ. ಈ ಪ್ರವೃತ್ತಿಯನ್ನು ತಡೆಯದಿದ್ದರೆ ಅನೇಕ ರಾಷ್ಟ್ರಗಳಲ್ಲಿ, ಎಲ್ಲಕ್ಕೂ ಮುಂಚೆ ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ,ಕೆಲವು ಬೃಹತ್ ನಗರಗಳು ಒಂದಕ್ಕೊಂದು ಸೇರಿದಂತೆ ಬೆಳೆದು ರಾಕ್ಷಸ ನಗರಗಳ (Giant Cities) ಬೆಳವಣಿಗೆಯನ್ನು ಪ್ರಚೋದಿಸಬಹುದು. ಉದಾಹರಣೆಗೆ, ಅಮೆರಿಕಾ ಸಂಯುಕ್ತ ಸಂಸ್ಥಾನದ ಪೂರ್ವ ತೀರಪ್ರದೇಶದಲ್ಲಿರುವ, ಬೋಸ್ಟನ್,ನ್ಯೂ ಯಾರ್ಕ್,ನ್ಯೂಜರ್ಸಿ, ಫಿಲಡೆಲ್‌ಫಿಯಾ, ವಾಷಿಂಗ್‌ಟನ್ ಮುಂತಾದ ಬೃಹತ್ ನಗರಗಳು ಒಂದನ್ನೊಂದು ಸಮೀಪಿಸುತ್ತಿರುವ ಚಿಹ್ನೆಗಳು ಗೋಚರವಾಗುತ್ತಿವೆ. ಸುಮಾರು ಎಂಟನೂರು ಕಿಲೋಮೀಟರ್ ಉದ್ದದ ನಗರಪ್ರದೇಶ ಅಲ್ಲಿ ಬೆಳೆದರೆ,ಅಂತಹ ನಗರವನ್ನು ಒಳಹೊಕ್ಕವನು ಬಹಳ ತೊಂದರೆಗೀಡಾಗುತ್ತಾನೆ. ಹೀಗೆಯೇ ಅಲ್ಲಿನ ಪಂಚಮಹಾಸರೋವರಗಳ ತೀರದಲ್ಲಿ ಚಿಕಾಗೋ ನಗರವನ್ನು ಕೇಂದ್ರವಾಗಿ ಹೊಂದಿ ಮತ್ತೊಂದು 500 ಕಿಲೋ ಮೀಟರ್ ಉದ್ದದ "ರಾಕ್ಷಸ ನಗರ"ದ ಬೆಳವಣಿಗೆ ಪ್ರಾರಂಭವಾಗಿದೆ.ಪಶ್ಚಿಮ ತೀರದಲ್ಲಿ ಸಾನ್ ಫ್ರಾನ್ಸಿಸ್‌ಕೊದಿಂದ ಲಾಸ್‌ಅಂಜಲಿಸ್ ವರೆಗೂ ವಿಸ್ತರಿಸುವ 'ನಗರ ಕಾಡು' ಬೆಳೆಯುತ್ತಿದೆ. ಇದೇರೀತಿ ದಕ್ಷಿಣಭಾಗದಲ್ಲಿ ಹೌಸ್ಟನ್, ಡಲ್ಲಾಸ್, ನ್ಯೂ ಆರ್ಲಿಯನ್ಸ್ ಮೊದಲಾದ ನಗರಗಳೆಲ್ಲ ಸೇರಿ ಅಲ್ಲಿನ ಕಪ್ಪುಜನರ ನಗರವ್ಯೂಹದ ರಚನೆ ನಿಧಾನವಾಗಿ ಮುಂದುವರಿಯುತ್ತಿದೆ. ಹೀಗೆಯೇ

ಜಪಾನಿನ ಟೋಕಿಯೋ—ವಸಾಕ ನಗರಪ್ರದೇಶ, ಜರ್ಮನಿಯ ರೂರ್ ಕಣಿವೆಪ್ರದೇಶ, ಭಾರತದ ಕಲ್ಕತ್ತ— ಹೌರಾ— ಹಾಲ್ಡಿಯಾ— ಅಸನ್ಸಾಲ್— ದುರ್ಗಾಪುರ, ಮತ್ತು ಮುಂಬಯಿ— ಕಲ್ಯಾಣ— ಕ್ಯಾಂಬೆ— ಕೊಲಾಬ ಪ್ರದೇಶಗಳು ಅಡೆತಡೆಯಿಲ್ಲದೆ ಬೆಳೆಯುತ್ತಾ ಇವೆ. ಇಂತಹ ಬೆಳವಣಿಗೆ ಮುಂದುವರಿದರೆ ಅದನ್ನು 'ಮೆಗಲಾಪೊಲಿಸ್' ಅಥವಾ ಮೇರು ನಗರಗಳು ಎಂದು ಕರೆಯುಲಾಗುತ್ತದೆ. ಕೆಲವು ನಗರಗಳಲ್ಲಿ ಅನೇಕ ಘಂಟೆಗಳ ಕಾಲ ಮೋಟಾರುವಾಹನಗಳಲ್ಲಿ ಪ್ರಯಾಣಮಾಡಿದರೂ ಅವುಗಳಿಂದ ಹೊರಗೇ ಬಂದಿರುವುದಿಲ್ಲ ಎಂದಮೇಲೆ ಅಲ್ಲಿನ ಸಂಚಾರ ವ್ಯವಸ್ಥೆಯ ಪರಿಸ್ಥಿತಿ ಏನಾಗುವುದೋ ಹೇಳಲಾಗುವುದಿಲ್ಲ.

ಇದಲ್ಲದೆ ಉಳಿದ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುವುದೂ ಬಹಳಕಷ್ಟವಾಗುವುದು. ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಮುಂತಾದುವು ಅಸ್ತವ್ಯಸ್ಥವಾಗಬಹುದು. ನಗರ ನೈರ್ಮಲ್ಯ ಕೆಡಲೂ ಸಾಧ್ಯ. ನದಿ ಮತ್ತು ಕೆರೆಗಳ ನೀರು, ಅಲ್ಲದೆ ನಗರದ ವಾಯು ಕೆಡುವುದರ ಜತೆಗೆ ದುರ್ವಾಸನೆ, ಶಬ್ದ, ನಡುಗು, ಬೆಂಕಿಯ ಅಪಾಯ—ಇವು ಹೆಚ್ಚಿ ಜನರ ದೈಹಿಕ ಮತ್ತು ಮಾನಸಿಕ ಆರೋಗ್ಯ ಕೆಡುವುದು ಖಂಡಿತ. ಮುಖ್ಯವಾಗಿ ಸಾಮಾಜಿಕ ಜೀವನಕ್ರಮ ಮತ್ತು ಸಂಸಾರಗಳ ಒಗ್ಗಟ್ಟು ಸಡಿಲವಾಗಿ ನೈತಿಕ ಮೌಲ್ಯ ಇಳಿಯುವ ಸಂಭವ ಅಧಿಕ. ಹೆಚ್ಚು ಜನರು ವಾಸಮಾಡಲು ಭಾರೀ ಕಟ್ಟಡಗಳ ನಿರ್ಮಾಣ ಅನಿವಾರ್ಯ. ಅದರೊಡನೆ ಅಂತಹ ಒಂದು ಕಟ್ಟಡದೊಳಗೆ ಸಾವಿರಾರು ಸಂಸಾರಗಳು ನಾಟಕೀಯವಾಗಿ ವಾಸಿಸುವ ಪರಿಸ್ಥಿತಿ ಪಾಶ್ಚಾತ್ಯದೇಶಗಳಲ್ಲಿ ಆಗಲೇಬಂದಿದೆ. ಅದರೊಳಗೆ ವಾಸಿಸುವ ಜನರ ಕಾಲ್ಪನಿಕ ಜೀವನ, ನೈತಿಕ ಅಧಃಪತನ, ಒಬ್ಬರನ್ನೊಬ್ಬರು ಅರಿಯದೆ ಯಂತ್ರಗಳಂತೆ ದುಡಿದು ಮನೆಸೇರುವಹ ವ್ಯಾಸ-ಇವೆಲ್ಲ ಸ್ವಾಭಾವಿಕ. ಮಾನವನು ನೆರಹೊರೆಯವರೊಡನೆ ಸುಖಸಂತೋಷದಿಂದ ಜೀವಿಸಬೇಕಾದರೆ ನಗರಗಳಲ್ಲಿ ಜಾತ್ರೆಯಂತೆ ಜನಗಳನ್ನು ಒಂದೆಡೆ ಸೇರಿಸಬಾರದು. ಇದಕ್ಕಾಗಿ ಯೋಜಿತ ರೀತಿಯ ಬೆಳವಣಿಗೆ ಅತ್ಯಾವಶ್ಯಕ ಮತ್ತು ಅನಿವಾರ್ಯ.

ಅಂತಹ ಯೋಜನೆ ಸುಲಭಸಾಧ್ಯವಲ್ಲ; ಸರ್ಕಾರದ ನೀತಿಯನ್ನು

ಅದು ಅವಲಂಬಿಸುತ್ತದೆ. ಬಿಗಿಯಾದ ನೀತಿಯನ್ನು ಅನುಸರಿಸದೇ ಹೋದರೆ ಯೋಜನೆಗಳೆಲ್ಲಾ ನುಡಿಗಳಲ್ಲಿ ಮತ್ತು ಕಾಗದದಮೇಲೆ ಉಳಿಯುವುವೇ ಹೊರತು ನಗರಗಳ ಯೋಜಿತ ಬೆಳವಣಿಗೆಗೆ ಸಹಾಯಕವಾಗುವುದಿಲ್ಲ. ಮುಂದಿನ ತಲೆಮಾರುಗಳಲ್ಲಿ, ಈ ವಿಷಯವಾಗಿ ಸಾರ್ವಜನಿಕ ತಿಳುವಳಿಕೆ, ವಿದ್ಯಾಭ್ಯಾಸ ಮತ್ತು ಒತ್ತಾಯಗಳು ಬೆಳೆದು ನಿಲ್ಲುವುದು ಖಂಡಿತ. ಸಾರ್ವಜನಿಕರಲ್ಲೂ ಒಮ್ಮತದ ಅಭಿಪ್ರಾಯಗಳಿರುವುದಿಲ್ಲ. ಪಟ್ಟಭದ್ರ ಹಿತಾಸಕ್ತಿಗಳು ತಾವು ಹಣಸಂಪಾದಿಸುವ ಮಾರ್ಗಕ್ಕೆ ಅಡ್ಡಬರುವ ಯಾವ ಕ್ರಮವನ್ನೂ, ಅವು ಸಾರ್ವಜನಿಕರಿಗೆ ಎಷ್ಟೇ ಉಪಯುಕ್ತವಾಗಿರಲಿ, ಸಹಿಸುವುದಿಲ್ಲ; ಅವು ಊರ್ಜಿತಗೊಳ್ಳುವುದು ಅವರಿಗೆ ಬೇಕಿಲ್ಲ. ಆದರೆ, ಬಹುಪಾಲುಜನರು ಈ ಅಲ್ಪಸಂಖ್ಯಾತ ಧನಪಿಶಾಚಿಗಳ ಪಾಶಕ್ಕೊಳಗಾದರೆ ಭಾರತದ ನಗರಗಳೂ ಸಹ ಅಡೆತಡೆಯಿಲ್ಲದೆ ಅವ್ಯವಸ್ಥೆಯಾಗಿ ಬೆಳೆಯುತ್ತವೆ. ಆದರೆ, ಮುಂದಿನ ನಗರಗಳು ಮಾನವನ ಆಶೆ ಆಕಾಂಕ್ಷೆಗಳನ್ನು ಪೂರೈಸಬಲ್ಲ ಮತ್ತು ಜನರು ಸುಖಸಂತೋಷದಿಂದ ಜೀವಿಸಲು ಅನುಕೂಲ ದೊರಕಿಸುವಂತಹ ಜೀವಂತ ನಗರಗಳಾಗಲೆಂಬುದೇ ಎಲ್ಲರ ಬಯಕೆ. ಭಾರತದ ನಗರಗಳೂ, ಗ್ರಾಮಗಳೂ ಒಂದಕ್ಕೊಂದು ಪೂರಕವಾಗಿ, ಸುವ್ಯವಸ್ಥಿತ ರೀತಿಯಲ್ಲಿ ಬೆಳೆಯಲು ಎಲ್ಲರೂ ಸಹಕರಿಸಬೇಕು.

ಆಧಾರ ಗ್ರಂಥಗಳು

೧. ಇಂಡಿಯನ್ ಆರ್ಕಿಟೆಕ್ಚರ್ — ಎಂ. ವಿ. ಅನಂತಾಳ್ವಾರ್

೨. ಇಂಡಿಯಾಸ್ ಅರ್ಬನ್ ಫ್ಯೂಚರ್ — ರಾಯ್ ಟರ್ನರ್

೩. ಏನ್ಸೆಂಟ್ ಟೈಂಸ್ — ಜೇಮ್ಸ್‌ಹೆನ್ರಿ ಬ್ರೆಸ್ಟೆಡ್

೪. ಔಟ್‌ಲೈನ್ ಡೆವೆಲೊಪ್‌ಮೆಂಟ್ ಪ್ಲಾನ್ ಆಫ್ ಮೈಸೂರ್ ಸಿಟಿ — ಡಿಪಾರ್ಟ್‌ಮೆಂಟ್ ಆಫ್ ಟೌನ್ ಪ್ಲಾನಿಂಗ್, ಮೈಸೂರ್

೫. ಟೌನ್ ಪ್ಲಾನಿಂಗ್ ಇನ್ ಇಂಡಿಯ — ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆರ್ಗನೈಸೇಷನ್, ನ್ಯೂ ಡೆಲ್ಲಿ

೬. ದಿ ಅರ್ಬನ್ ಪ್ಯಾಟರ್ನ್ — ಆರ್ಥರ್ ಬಿ. ಗ್ಯಾಲಿಯನ್

೭. ದಿ ಆರ್ಟ್ ಅಂಡ್ ಆರ್ಕಿಟೆಕ್ಚರ್ ಆಫ್ ಇಂಡಿಯ — ಬೆಂಜಮಿನ್ ರೋಲೆಂಡ್

೮. ದಿ ಪ್ಲಾನಿಂಗ್ ಫಂಕ್ಷನ್ ಇನ್ ಮಾಡರ್ನ್ ಗೌರ್ನ್ಮೆಂಟ್ — ರಾಬರ್ಟ್ ಎ. ವಾಕರ್

೯. ದಿ ಬರ್ತ್ ಆಫ್ ಇಂಡಿಯನ್ ಸಿವಿಲಿಶೇಷನ್ — ಬ್ರಿಡ್‌ಜೆಟ್ ಆಂಡ್ ರೇಮಾಂಡ್ ಅಲ್‌ಚಿನ್

೧೦. ದಿ ಮಾಡರ್ನ್ ಗೌರ್ನ್ಮೆಂಟ್ — ಜರ್ನಲ್, ಸೆಪ್ಟಂಬರ್ ೧೯೬೯

೧೧. ದಿ ಮಾಡರ್ನ್‌ಮೆಟ್ರೋಪಲಿಸ್ — ಹನ್ಸ್ ಬ್ಲೂಮೆನ್ ಫೀಲ್ಡ್

೧೨. ದಿ ಮೈಸೂರ್ ಟೌನ್ ಅಂಡ್ ಕಂಟ್ರಿಪ್ಲಾನಿಂಗ್ ಆಕ್ಟ್, ೧೯೬೧ — ಗೌರ್ನಮೆಂಟ್ ಆಫ್ ಮೈಸೂರ್

೧೩. ದಿ ವರ್ಲ್ಡ್ ಸಿಟೀಸ್ — ಪೀಟರ್ ಹಾಲ್

೧೪. ಲೋಕಲ್ ಪ್ಲಾನಿಂಗ್ ಅಡ್ಮಿನಿಸ್ಟ್ರೇಷನ್ — ದಿ ಇಂಟರ್‌ನ್ಯಾಷನಲ್ ಸಿಟಿ ಮ್ಯಾನೇಜರ್ಸ್ ಅಸೋಸಿಯೇಷನ್, ಚಿಕಾಗೊ

ತಿದ್ದುಪಡಿ

ಪುಟ	ಪಂಕ್ತಿ	ತಪ್ಪು	ಸರಿ
೭	೨೬	ಹಳ್ಳಿಗಳು	ಹಳ್ಳಗಳು
೧೧	೨೭	ಪರಿಕೀಯರು	ಪರಕೀಯರು
೧೩	೯	ಶಿಲ್ಪಿಕಲೆಯ	ಶಿಲ್ಪಕಲೆಯ
೧೬	೧	ಮುನಸಿಪಲ್	ಮುನಿಸಿಪಲ್
೧೬	೪	ಮುನಸಿಪಾಲಿಟಿ	ಮುನಿಸಿಪಾಲಿಟಿ
೨೫	ಶೀರ್ಷಿಕೆ	ನಗರಗಳು ಲಕ್ಷಣಗಳ	ನಗರಗಳ ಲಕ್ಷಣಗಳು
೨೬	೨೬	ಉದಾಹರಿಸಬಹುದು	ಉದಹರಿಸಬಹುದು
೩೭	೧೪	75 ರಷ್ಟು	80ರಷ್ಟು
೪೧	೩	4 ರಿಂದ 7	5 ರಿಂದ 8
೫೧	ಶೀರ್ಷಿಕೆ	ನಗರ ರಚನೆಯ ಇತಿಹಾಸ	ನಗರ ರಚನಾ ಕೌಶಲ
೫೨	೨	(ಅ)	(ಅ)
೫೩	ಶೀರ್ಷಿಕೆ	ನಗರ ರಚನೆಯ ಇತಿಹಾಸ	ನಗರ ರಚನಾ ಕೌಶಲ
೫೩	ಪುಟ ಸಂಖ್ಯೆ	೩೫	೫೩
೫೪	೪	ಉದ್ದೇಶಗಳನು	ಉದ್ದೇಶಗಳನ್ನು
೫೪	೯	ತೋಸುವುದು	ತೋರಿಸುವುದು
೬೨	೨೧	ಕೆಂದ್ರ	ಕೇಂದ್ರ
೬೬	೪	ಕೂಡವ	ಕೂಡುವ
೮೬	೨೬	ಮನೆಗಳನು	ಮನೆಗಳನ್ನು
೯೧	೩	ಇವು—	—ಇವು
೯೩	೮	ಅರಿಸಿ	ಆರಿಸಿ
೯೩	೧೬	ಆಕರ್ಶಣೀಯುವಾಗುವಂತೆ	ಆಕರ್ಷಣೀಯ ವಾಗುವಂತೆ
೯೫	೧೬	6,90,0000	69,00,000

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೭೨